# ಸಂಪಾದಕೀಯ

ಡಾ. ರಾಕೇಶ್ ಬಿ.ಸಿ.
ಸಂಪಾದಕರು



ಆತ್ಮೀಯ ಶರಣ ಬಂಧುಗಳೆ,

ಜ್ಞಾನಕ್ಕಿಂತಲೂ ಕಲ್ಪನಾಶಕ್ತಿ ದೊಡ್ಡದು, ಜ್ಞಾನಕ್ಕೆ ಸೀಮಿತ ಪರಿಧಿ ಇದೆ. ಕಲ್ಪನೆ ವಿಶ್ವವನ್ನು ಮೀರಿದ್ದು.

ದಕ್ಷಿಣ ಭಾರತದಲ್ಲಿ ಪ್ರಮುಖ ಅರಸು ಮನೆತನಗಳಾಗಿ ಆಳ್ವಿಕೆ ಮಾಡಿದ ಅಪ್ಪಟ ಕನ್ನಡ ಅರಸುಮನೆತನ ಕರ್ನಾಟಕದ ಇತಿಹಾಸಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ನೊಳಂಬ ಅರಸರು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಭಾಗಗಳಲ್ಲಿ ವಿಸ್ತರಿಸಿ ನೊಳಂಬವಾಡಿ 32000ದ ಆಳ್ವಿಕೆಯನ್ನು ಯಶಸ್ವಿಯಾಗಿ ಮಾಡಿ ಈ ಪರಿಸರದಲ್ಲಿ ಅನೇಕ ಕೆರೆಕಟ್ಟೆಗಳನ್ನು, ದೇವಾಲಯಗಳನ್ನು ಹಾಗೂ ಭೂದಾನ ಗಳನ್ನು ನೀಡಿ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.

ಹೇಮಾವತಿಯು ನೊಳಂಬ ರಾಜವಂಶದ ಆಳ್ವಿಕೆಯಲ್ಲಿ 8 ರಿಂದ 10ನೇ ಶತಮಾನದಲ್ಲಿ ನಿರ್ಮಿಸಲಾದ ದೇವಾಲಯಗಳ ಸಂಕೀರ್ಣ ನೆಲೆಯಾಗಿದೆ. ಹೇಮಾವತಿಯು ಆಂಧ್ರ ಪ್ರದೇಶದ ಮಡಕಶಿರಾ ತಾಲ್ಲೂಕಿನಲ್ಲಿ ಬರುವ ಗ್ರಾಮವಾಗಿದೆ. ಈ ಗ್ರಾಮವು 8 ರಿಂದ 10ನೇ ಶತಮಾನದವರೆಗೆ ನೊಳಂಬರ ರಾಜಧಾನಿಯಾಗಿ ಮೆರೆದ ಪ್ರಮುಖ ನಗರವಾಗಿದೆ. ನೊಳಂಬರು ಹೇಮಾವತಿಯಿಂದ ಕರ್ನಾಟಕ ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಪ್ರದೇಶಗಳ ಆಡಳಿತ ನಡೆಸಿದ ನೊಳಂಬ ಅರಸರು ಹೇಮಾವತಿಯನ್ನು ಕಲಾಕೇಂದ್ರ, ಸಾಂಸ್ಕೃತಿಕ ಕೇಂದ್ರವಾಗಿ ಮಾಡಿದರು. ಹೇಮಾವತಿಯಲ್ಲಿ ಭವ್ಯವಾದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಇವರು ತಮ್ಮದೇ ಆದ ಕಲಾ ಸಂಪ್ರದಾಯಕ್ಕೆ ನಾಂದಿ ಹಾಡಿದರು. ನಾನು ಹೇಮಾವತಿಯನ್ನು ಮೊದಲ ಬಾರಿಗೆ ನೋಡಿದ್ದು 2023ರ ನವೆಂಬರ್ ತಿಂಗಳಿನಲ್ಲಿ. ಪಾವಗಡದಲ್ಲಿ ಕರ್ನಾಟಕ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭ ಒಂದು ದಿನ ಬಿಡುವು ಮಾಡಿಕೊಂಡು ಸ್ನೇಹಿತರೊಂದಿಗೆ ಹೇಮಾವತಿಗೆ ಹೋದೆವು. ಅಲ್ಲಲ್ಲಿ ಚದುರಿಹೋದ ಅವಶೇಷಗಳನ್ನು ನೋಡಿ ಸ್ವಲ್ಪ ಬೇಸರವಾಯಿತು. ಕಾರಣ ನಾನು ಹೇಮಾವತಿಯ ಬಗ್ಗೆ ಇದ್ದಂತಹ ಭಾವನೆಗೆ ತಕ್ಕಮಟ್ಟಿಗೆ ನೋವು ಕೂಡ ಆಯಿತು. ಮುಂದುವರಿದು 8ನೇ ಶತಮಾನದಿಂದ 10ನೇ ಶತಮಾನದವರೆಗೆ ಸುದೀರ್ಘ ಇತಿಹಾಸವನ್ನು ಹೊಂದಿದ ನೊಳಂಬರ ರಾಜಧಾನಿಯನ್ನು ನೋಡಿ ನನಗೆ ನೆನಪಾಗಿದ್ದು ಹಂಪಿ ಮತ್ತು ವಾರಂಗಲ್ ನಗರಗಳು. ಕಾರಣ ಇವುಗಳು ಕೂಡ ಒಂದು ಕಾಲದಲ್ಲಿ ಅತ್ಯಂತ ಶ್ರೀಮಂತ ನಗರಗಳಾಗಿದ್ದು ರಾಜಧಾನಿಗಳಾಗಿ ಮೆರೆದಿದ್ದವು. ಆಗ ಒಂದು ಭಾವನೆ ನನ್ನಲ್ಲಿ ಬಂತು. ನಾವು ಗಂಗರ ಮತ್ತು ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪ ನೋಡಿದ್ದ ನನಗೆ ಇದಕ್ಕಿಂತ ಭಿನ್ನವಾದ ವಾಸ್ತುರಚನೆಯನ್ನು ಹೇಮಾವತಿಯಲ್ಲಿ ನೋಡಿದೆ. ಕಾರಣ ಗಂಗರ ಸಮಕಾಲೀನ ರಾಷ್ಟ್ರಕೂಟರ ಸಮಕಾಲೀನರಾದರೂ ಅವರ ವಾಸ್ತು ರಚನೆಯನ್ನು ಅನುಸರಿಸದೆ ತಮ್ಮದೇ ಆದ ಒಂದು ವಾಸ್ತು ರಚನೆಯನ್ನು ರೂಢಿಸಿಕೊಂಡರು ಮತ್ತು ಅದನ್ನು ನೊಳಂಬವಾಡಿ ಆಡಳಿತವಿರುವ ಪ್ರದೇಶದಲ್ಲಿ ದಾನ ನೀಡುವುದರ ಮೂಲಕ ಪ್ರೋತ್ಸಾಹಿಸಿದರು. ಮುಂದೆ ಇದು ಹೊಯ್ಸಳರ ವಾಸ್ತುರಚನೆಗೆ ತಳಪಾಯವನ್ನು ಹಾಕಿಕೊಟ್ಟಿತು. ಇಂತಹ ಒಂದು ನಗರ ನೊಳಂಬರ ರಾಜಧಾನಿಯಾಗಿ

## ನಿನಗೆ ಕೇಳಿಲ್ಲವಂತೆ

ಮೆರೆದ ಹೇಮಾವತಿ. 10ನೇ ಶತಮಾನದ ಚೋಳರ ಧಾಳಿಗೆ ತುತ್ತಾಗಿ ಕೆಲವು ದೇವಾಲಯಗಳು ಮಾತ್ರ ಉಳಿದು ಕೊಂಡವು. ನಂತರದ ದಿನಗಳಲ್ಲಿ ದೇವಾಲಯಗಳ ಮರು ನಿರ್ಮಾಣ ಮಾಡಿರಬಹುದು ಅಥವಾ ಜೀರ್ಣೋದ್ಧಾರ ಮಾಡಿರಬಹುದು. ಇಂತಹ ಹೇಮಾವತಿಯನ್ನು ಕಳೆದ ನವೆಂಬರ್‌ನಿಂದ ಮೂರು ಬಾರಿ ಭೇಟಿನೀಡಿ ಅಲ್ಲಿರುವ ದೇವಾಲಯಗಳನ್ನು ನೋಡುತ್ತಾ ಇದ್ದೇನೆ. ಪ್ರತಿಸಾರಿ ಹೋದಾಗ ಹೊಸ ವಿಷಯಗಳ ಪರಿಚಯವಾಯ್ತು. ಅಲ್ಲದೆ ಧರ್ಮಪುರ, ಪಂಚಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು, ಸ್ನೇಹಿತರು ಮತ್ತು ಪ್ರಜಾವಾಣಿ ವರದಿಗಾರರು ಆದ ಡಾ. ವೀರಣ್ಣ ವಿ. ಇನ್ನೂ ಹೆಚ್ಚಿನ ಮಾಹಿತಿಯನ್ನು ಹಾಗೂ ಅಲ್ಲಿನ ಆಚರಣೆಗಳನ್ನು ಕುರಿತು ವಿವರಿಸಿದರು. ಜೊತೆಗೆ ದಾವಣಗೆರೆಯ ನಮ್ಮ ಸ್ನೇಹಿತರನ್ನು ಕರೆದುಕೊಂಡು ಮಹಾಶಿವರಾತ್ರಿಯಂದು ಹೇಮಾವತಿಗೆ ಹೋಗಿಬಂದ ಮೇಲೆ ನಮ್ಮ ಪರಿಸರದಲ್ಲಿ ಬರುವ ನಮ್ಮ ಸಮಾಜ ಬಾಂಧವರಿಗೆ ಹೇಮಾವತಿಯನ್ನು ನೋಡಿಬನ್ನಿ ಎಂದೂ ನಾವು ಅವರಿಗೆ ಮನವರಿಕೆ ಮಾಡುತ್ತಿದ್ದೇವೆ. ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯದ ಮೇಲೆ ಒಂದು ಬಾರಿ ಸಂದರ್ಶನವನ್ನು ಮಾಡಿದ್ದು ಕೂಡ ತುಂಬ ಸಂತೋಷವನ್ನು ನೀಡಿತು. ನಿತ್ಯದ ಬದುಕಲ್ಲಿ ಸಣ್ಣಸಣ್ಣ ಸಂಗತಿಗಳು ಸಾಕ್ಷ್ಯಿರುತ್ತವೆ. ಅವುಗಳನ್ನು ಗ್ರಹಿಸಿ ಖುಷಿಪಡುವುದನ್ನು ರೂಢಿಸಿಕೊಂಡವರಿಗೆ ಜಗತ್ತೇ ಸುಂದರವೆನಿಸುತ್ತದೆ.

**ಸಂಪಾದಕರು**

# ಅಧ್ಯಕ್ಷರ ಆಶಯ ನುಡಿ



ಆತ್ಮೀಯ ಸಮಾಜ ಬಾಂಧವರಿಗೆ ಹಾಗೂ ಈ ಪತ್ರಿಕೆಯ ಚಂದಾದಾರರಿಗೆಲ್ಲ ನನ್ನ ನಮಸ್ಕಾರಗಳು.

ಯಾವುದೇ ಸಂಘ ಸಂಸ್ಥೆಗಳು ಅಭಿವೃದ್ಧಿ ಹೊಂದಿದ ಸಂದರ್ಭಗಳಲ್ಲಿ ಚುನಾವಣೆಗಳು ಸಂಘ, ಸಂಸ್ಥೆ ಬೆಳವಣಿಗೆಗೆ ಅನಿವಾರ್ಯವಾಗಿರುತ್ತವೆ. ಅದೇ ರೀತಿ ನಮ್ಮ ಸಂಘದಲ್ಲಿಯೂ ಸಹ ಪ್ರಥಮ ಬಾರಿಗೆ ಚುನಾವಣೆ ನಡೆದು ಕೆಲವು ಜಿಲ್ಲೆಗಳಲ್ಲಿ ಅವಿರೋಧವಾಗಿ ಇನ್ನು ಕೆಲವು ಜಿಲ್ಲೆಗಳಲ್ಲಿ ಚುನಾವಣೆ ಮೂಲಕ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಿ, ನಂತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್ ಪಾಟೀಲ್ ಹಾಗೂ ನಾನು ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿದ್ದರಿಂದ, ಹಲವಾರು ಹಿರಿಯರು ಸೇರಿ ಸಂಘದ ಹಿತದೃಷ್ಟಿಯಿಂದ ಐದು ವರ್ಷಗಳ ಅವಧಿಯಲ್ಲಿ, ಮೊದಲು ಮೂರು ವರ್ಷಗಳು ಹಿರಿಯರಾದ ಶ್ರೀ ಎಸ್.ಆರ್. ಪಾಟೀಲ್‌ರವರಿಗೆ ಹಾಗು ಕೊನೆಯ ಎರಡು ವರ್ಷಗಳ ಅವಧಿಯಲ್ಲಿ ನನಗೆಂದು ತೀರ್ಮಾನದ ಮೇರೆಗೆ ಮೊದಲು ಮೂರು ವರ್ಷಗಳು ಶ್ರೀ ಎಸ್.ಆರ್. ಪಾಟೀಲ್‌ರವರು ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದು, ಅವಧಿ ಮುಗಿದ ನಂತರ ಶ್ರೀಯುತರು ವಿಧೇಯ ಪೂರ್ವಕವಾಗಿ ಅಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರ ಪ್ರಯುಕ್ತ ಉಳಿದ ಎರಡು ವರ್ಷಗಳ ಅವಧಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿಯು ಒಮ್ಮತದಿಂದ ಆಯ್ಕೆ ಮಾಡಿದ ಪ್ರಯುಕ್ತ ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯವಾಗಿರುತ್ತದೆ.

ಆದಿಯಲ್ಲಿ ನಾಡಿನ ನಮ್ಮ ಸಮಾಜ ಬಾಂಧವರು ಕೃಷಿಯನ್ನೇ ಮುಖ್ಯ ಕಸುಬಾಗಿ ಮಾಡಿಕೊಂಡಿದ್ದರಿಂದ ವಿದ್ಯಾವಂತರ ಸಂಖ್ಯೆ ಬೆರಳೆಣಿಕೆಯಷ್ಟು ಇದ್ದುದರ ಪ್ರಯುಕ್ತ 1935ರಲ್ಲಿ ಶ್ರೀ ಮದ್ವೀರಶೈವ ವಿದ್ಯಾಪ್ರಚಾರ ಸಂಘವೆಂಬ ಹೆಸರಿನಲ್ಲಿ ಈ ಸಂಘವು ಪ್ರಾರಂಭಗೊಂಡಿದ್ದು, ಸಂಸ್ಥಾಪಕರುಗಳಾದ ಪರಮ ಪೂಜ್ಯ ಅಂದಿನ ಸಿದ್ಲೆಹಳ್ಳಿ ಮಠಾಧೀಶರಾದ ಕರಿಬಸವದೇಶಿಕೇಂದ್ರಸ್ವಾಮಿಗಳು, ಬೆಂಗಳೂರು ಲಿಂ॥ ಕಂಬಿ ಎಂ.ಸಿದ್ಧರಾಮಣ್ಣನವರು, ಬೆಂಗಳೂರಿನ ನಿವೃತ್ತ ಪೋಲೀಸ್ ಸೂಪರಿಂಟೆಂಡೆಟ್ ಶ್ರೀ ಕೆ.ಸಿದ್ಧರಾಮಪ್ಪನವರು ಮತ್ತಿತರು ಇಟ್ಟ ದಿಟ್ಟಹೆಜ್ಜೆ ಒಳ್ಳೆಯ ಹೃದಯವಂತಿಕೆಯ ಕಾರಣವಾಗಿರುತ್ತದೆ. ನಂತರದಲ್ಲಿ ಬಂದಂತಹ ಹಿಂದಿನ ಎಲ್ಲಾ ಅಧ್ಯಕ್ಷರುಗಳು ಕಾರ್ಯದರ್ಶಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ನಿಸ್ವಾರ್ಥ ಸೇವೆಗಳು ಸಂಘದ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಜೊತೆಗೆ ಸಮಾಜ ಬಾಂಧವರು ಒಳ್ಳೆಯ ಹೃದಯವಂತಿಕೆಯಿಂದ ದಾನರೂಪದಲ್ಲಿ ಚರ ಸ್ಥಿರ ಆಸ್ತಿಗಳನ್ನು ಕೊಟ್ಟಿರುವುದರಿಂದ ಈ ಸಂಘವು ಅಭಿವೃದ್ಧಿ ಹೊಂದಲು ಸಾಧ್ಯವಾಗಿರುತ್ತದೆ. ಅಂತಹ ಪ್ರಾತಃಸ್ಮರಣರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು, ಕೊಟ್ಟಂತಹ ದಾನಗಳನ್ನು ಸದ್ಬಳಕೆ ಮಾಡಿಕೊಂಡು ಅವರುಗಳ ಆಶಯಗಳನ್ನು ನೆರವೇರಿಸುವುದು ನಮ್ಮಗಳ ಆದ್ಯ ಕರ್ತವ್ಯವಾಗಿರುತ್ತದೆ.

ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್. ಪಾಟೀಲ್‌ರವರ ಅವಧಿಯಲ್ಲಿ ಮೈಸೂರಿನಲ್ಲಿರುವ ಬಾಲಕರ ವಿದ್ಯಾರ್ಥಿನಿಲಯದ 2ನೇ ಮಹಡಿ ನಿರ್ಮಾಣ, ತುರುವೇಕೆರೆಯಲ್ಲಿರುವ ಶ್ರೀಗುರುಸಿದ್ಧರಾಮೇಶ್ವರ ಸಮುದಾಯ ಭವನದ ಹೆಚ್ಚುವರಿ ಕೊಠಡಿಗಳ ನಿರ್ಮಾಣ, ಬೆಂಗಳೂರಿನ ರಾಜಾಜಿನಗರದಲ್ಲಿರುವ ವಾಣಿಜ್ಯ ಸಂಕೀರ್ಣದ ನಿರ್ಮಾಣ, ಕಡೂರಿನಲ್ಲಿ ಶ್ರೀಗುರುಸಿದ್ಧರಾಮೇಶ್ವರ ಸಮುದಾಯ ಭವನದ ನಿರ್ಮಾಣಗಳ ಕೆಲಸಗಳು ಪ್ರಾರಂಭವಾಗಿ ಈಗ ಕೆಲವು ಕಟ್ಟಡಗಳ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉಳಿದ 2 ವರ್ಷದ ಅವಧಿಯಲ್ಲಿ ಅಪೂರ್ಣಗೊಂಡಿರುವ ಕಟ್ಟಡಗಳನ್ನು ಪೂರ್ಣಗೊಳಿಸುವುದು, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಯಾಗಬೇಕಾಗಿರುವ ನೊಳಂಬ ಸಂಸ್ಕೃತಿ ಅಧ್ಯಯನ ಪೀಠಕ್ಕೆ ಚಾಲನೆ ನೀಡುವುದು, ನಮ್ಮ ಸಮಾಜ ಬಾಂಧವರ ಆರ್ಥಿಕ ಸ್ಥಿತಿಗತಿಗಳನ್ನೊಳಗೊಂಡ ಜನಗಣತಿ ಮಾಡುವುದು, ನಮ್ಮ ಸಂಘದ ಅಸ್ತಿತ್ವಕ್ಕೆ ಕಾರಣೀಭೂತರಾಗಿ ತಮ್ಮ ಚರ ಸ್ತಿರ ಆಸ್ತಿಗಳನ್ನು ದಾನದ ರೂಪದಲ್ಲಿ ನೀಡಿದಂತೆ ಶ್ರೀ ಕಂಬಿ ಎಂ.ಸಿದ್ಧರಾಮಣ್ಣ ಹಾಗೂ ಅವರು ಪತ್ನಿಯವರು ಸದ್ಗತಿ ಹೊಂದಿದ ಸ್ಥಳವನ್ನು ಕಾಪಾಡುವುದು, ನೊಳಂಬವಾಣಿ ಪತ್ರಿಕೆಯ ಉನ್ನತೀಕರಣ ಹಾಗೂ ಇತರೆ ಕೆಲಸಗಳನ್ನು ಕಾರ್ಯರೂಪಗೊಳಿಸುವ ಉದ್ದೇಶವಿರುತ್ತದೆ. ಇವುಗಳನ್ನು ಕಾರ್ಯರೂಪಗೊಳಿಸಲು ಕಾರ್ಯಕಾರಿ ಸಮಿತಿಯು ಸದಾ ನನ್ನ ಬೆನ್ನೆಲುಬಾಗಿರುತ್ತದೆಂಬ ಭಾವನೆಯೊಂದಿಗೆ ತಮ್ಮೆಲ್ಲರಿಗೂ ವಂದಿಸುತ್ತೇನೆ. ಶರಣು ಶರಣಾರ್ಥಿಗಳು,

**ಶ್ರೀ ಬಿ.ಕೆ.ಚಂದ್ರಶೇಖರ್, ಅಧ್ಯಕ್ಷರು**

ನೊಳಂಬ ಲಿಂಗಾಯತ ಸಂಘ (ರಿ.) ಬೆಂಗಳೂರು.

## ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1. ದಿನಾಂಕ: 31.03.2024 ರಂದು ಸನ್ಮಾನ್ಯ ಶ್ರೀ ಎಸ್.ಆರ್ ಪಾಟೀಲ್‌ರವರು ತಮ್ಮ ಅಧ್ಯಕ್ಷ ಸ್ಥಾನವನ್ನು ಸನ್ಮಾನ್ಯ ಶ್ರೀ ಬಿ.ಕೆ.ಚಂದ್ರಶೇಖರ್‌ರವರಿಗೆ ಹಸ್ತಾಂತರಿಸಿದರು, ಸಂಘವು ಶ್ರೀ ಎಸ್.ಆರ್. ಪಾಟೀಲ್‌ರವರಿಗೆ ಅಭಿನಂದನೆ ಸಲ್ಲಿಸಿತು.

2. ದಿನಾಂಕ : 31.03.2024ರಂದು ಶ್ರೀ ಬಿ.ಕೆ. ಚಂದ್ರಶೇಖರ್‌ರವರನ್ನು ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿಯು ಆಯ್ಕೆ ಮಾಡಿ ಅಭಿನಂದಿಸಲಾಯಿತು.

3. ದಿನಾಂಕ: 28.04.2024 ರಂದು ನಮ್ಮ ಸಮಾಜದ ಬಂಧುಗಳು ಹಾಗೂ ದಾನಿಗಳಾದ ಶ್ರೀ ಬಿ.ಗುರುಪ್ರಸಾದ್‌ರವರು ಮಾಲಿನ್ಯ ನಿಯಂತ್ರಣ ಅಧ್ಯಕ್ಷರಾಗಿ ಸರ್ಕಾರ ನೇಮಿಸಿದ್ದರಿಂದ ಸಂಘದ ಪರವಾಗಿ ಅವರನ್ನು ಸನ್ಮಾನಿಸಲಾಯಿತು. ಹಾಗೂ ದಾನಗಳು, ಸಮಾಜ ಸೇವಕರ್ತರು ಆದ ಶ್ರೀ ಎಸ್.ಎನ್. ಸಿದ್ಧರಾಮಪ್ಪನವರು ಐ.ಪಿ.ಎಸ್. ನಿವೃತ್ತ ಇವರನ್ನು ಸಹ ಸನ್ಮಾನಿಸಲಾಯಿತು.

4. ಪದಾಧಿಕಾರಿಗಳು, ಇಂಜಿನಿಯರುಗಳು ಮತ್ತು ನಿರ್ದೇಶಕರುಗಳು ಉಪಸಮಿತಿಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಕಾಮಗಾರಿಗಳನ್ನು ವೀಕ್ಷಿಸುತ್ತಿದ್ದಾರೆ.

5. ಬೆಂಗಳೂರು, ರಾಜಾಜಿನಗರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ವಾಣಿಜ್ಯ ಸಂಕೀರ್ಣದ ಕಾಮಗಾರಿ ಮುಗಿಯುವ ಹಂತದಲ್ಲಿದೆ.

6. ಮೈಸೂರಿನಲ್ಲಿ ವಿದ್ಯಾರ್ಥಿನಿಲಯದ 2ನೇ ಮಹಡಿಯನ್ನು ನಿರ್ಮಿಸುತ್ತಿರುವ ಕಾರ್ಯ ಪೂರ್ಣಗೊಂಡಿದ್ದು ದಿನಾಂಕ: 23.06.2024 ರಂದು ಭಾನುವಾರ ಲೋಕಾರ್ಪಣೆಗೊಳ್ಳಲಿದೆ.

7. ಕಡೂರಿನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಸಮುದಾಯ ಭವನದ ಕಾರ್ಯ ಪ್ರಗತಿ ಪಥದಲ್ಲಿದೆ. ಹಾಗೂ ತುರುವೇಕೆರೆಯಲ್ಲಿನ ಕಾಮಗಾರಿಯು ಸಹ ಪ್ರಗತಿಯಲ್ಲಿದೆ.

8. ಚಿಕ್ಕಪೇಟೆಯಲ್ಲಿರುವ ಕಂಬಿ ಎಂ.ಸಿದ್ದರಾಮಣ್ಣ ವಾಣಿಜ್ಯ ಸಂಕೀರ್ಣದ ಕಾಮಗಾರಿಯು ಪ್ರಗತಿಯಲ್ಲಿದೆ. ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯಲು ಮಾಸಿಕ ಮತ್ತು ದ್ವಿಮಾಸಿಕ ಹಾಗೂ ಕಾಮಗಾರಿ ಸಮಿತಿ ಸಭೆಗಳನ್ನು ಅಧ್ಯಕ್ಷರ ಸಮ್ಮುಖದಲ್ಲಿ ನಡೆಸಲಾಗುತ್ತಿದೆ.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ ಸಂಘ (ರಿ)
ಬೆಂಗಳೂರು.

**ನಮ್ಮ ಬ್ಯಾಂಕ್ : ತುಮಕೂರು ವೀರಶೈವ ಕೋ-ಆಪರೇಟೀವ್ ಬ್ಯಾಂಕ್ (ಲಿ)**
**ನೊಳಂಬವಾಣಿ**
**ಖಾತೆ ಸಂಖ್ಯೆ : 00063090000189**
**ಶಾಖೆ : ಬಸವೇಶ್ವರನಗರ, ಬೆಂಗಳೂರು.**
**ಐ.ಎಫ್.ಎಸ್.ಸಿ. : IBKL0362TVC**
**ಬ್ಯಾಂಕ್ : IDBI BANK LTD**

# ‘ಕರ್ಮಫಲಭೋಗ’ ಸಿದ್ಧಾಂತ ಮತ್ತು ‘ಕರ್ಮಫಲತ್ಯಾಗ’ ಸಿದ್ಧಾಂತ

ಬಸವಣ್ಣನವರ ಕಾಯಕ ಸಿದ್ಧಾಂತದ ಮುಖ್ಯವಾದ ಆಯಾಮವೆಂದರೆ ಅದು ಕರ್ಮಫಲ ಭೋಗವನ್ನು ಒಳಗೊಂಡ ಒಂದು ಪ್ರಕ್ರಿಯೆಯಾಗಿದೆ. ಬಸವ ಪ್ರಣಾಳಿಕೆಯಲ್ಲಿ ಕರ್ಮಕ್ಕೆ – ಕಾಯಕಕ್ಕೆ ಫಲ ಬೇಕು. ಏಕೆಂದರೆ ಕಾಯಕದ ಒಂದು ಉದ್ದೇಶ ದಾಸೋಹ. ಆದ್ದರಿಂದ ಕಾಯಕವು ಪಲಾಪೇಕ್ಷಯದ್ದಾಗಿದೆ. ಇದನ್ನು ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಆಯ್ದಕ್ಕಿ ಮಾರಯ್ಯುವರ ವಚನವನ್ನು ಇದಕ್ಕೆ ಪುರಾವೆಯಾಗಿ ನೋಡಬಹುದು.

**ಹಾಗದ ಕಾಯಕವ ಮಾಡಿ ಹಣ ಅಡ್ಡವ ತಾ ಎಂಬಲ್ಲಿ**
**ಸತ್ಯದ ಕಾಯಕವುಂಟೆ?**
**ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು**
**ಅಮರೇಶ್ವರ ಲಿಂಗಕ್ಕೆ ಚಿತ್ತಶುದ್ಧದ ಕಾಯಕ**

ಇಲ್ಲಿ ಮಾರಯ್ಯನವರು ಸತ್ಯದ ಕಾಯಕದ ಬಗ್ಗೆ ಮಾತನಾಡುತ್ತಿದ್ದಾರೆ. ಯಾವ ಕಾಯಕಕ್ಕೆ ಪ್ರತಿಫಲವಿದೆಯೋ (ಹಣ/ಕೂಲಿ) ಅದು ಸತ್ಯದ ಕಾಯಕ. ಕಾಯಕಕ್ಕೆ ಸಮನಾದ ಹಣ ಬೇಕು. ಇದನ್ನೇ ನುಲಿಯ ಚಂದಯ್ಯನವರು ‘ನೇಮದ ಕೂಲಿ’ ಎನ್ನುತ್ತಾರೆ. ಬಸವಣ್ಣನವರು ಇದಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ತಮ್ಮ ಒಂದು ವಚನದಲ್ಲಿ ನೀಡಿದ್ದಾರೆ.

**ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು ನಾನಾವಾವ ಕರ್ಮಂಗಳ ಮಾಡಿದಡೆಯು ಆ ಕರ್ಮಫಲಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆ ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ**

ಆರಂಬ(ವ್ಯವಸಾಯ) ಮಾಡಿ ಅದಕ್ಕೆ ಫಲವಿಲ್ಲದಿದ್ದರೆ ಗುರು ಪೂಜೆ ಹೇಗೆ ಸಾದ್ಯ? ವ್ಯವಹಾರ/ವ್ಯಾಪಾರ ಮಾಡಿ ಅದಕ್ಕೆ ಲಾಭ ಬರದಿದ್ದರೆ ದಾಸೋಹವನ್ನು ಹೇಗೆ ಮಾಡುವುದು? ಆದ್ದರಿಂದ ಬಸವ ಸಂವಿಧಾನದಲ್ಲಿ ಯಾರು ಯಾವ ಕಾಯಕ ಮಾಡಿದರು ಅದಕ್ಕೆ ಫಲವನ್ನು ಕೂಡಲಸಂಗಮ ದೇವರು ನೀಡುತ್ತಾರೆ. ಅದನ್ನು ಭೋಗಿಸುದೆ ಆಚಾರ. ಇದನ್ನೇ ಬಸವಣ್ಣನವರು “ಕರ್ಮಫಲಭೋಗ” ಎಂದು ಕರೆದಿದ್ದಾರೆ. ಈ ಕರ್ಮಫಲಭೋಗ ಸಿದ್ಧಾಂತದ ಮಹತ್ವವನ್ನು ಲಿಂಗಾಯತರಾದ ನಾವು ಅರ್ಥ ಮಾಡಿಕೊಳ್ಳಬೇಕು.

ಇದು ನೇರವಾಗಿ ಭಗವದ್ಗೀತೆ ಬೋಧಿಸುವ “ಕರ್ಮಫಲತ್ಯಾಗ” ಸಿದ್ಧಾಂತಕ್ಕೆ ವಿರುದ್ಧವಾದುದು. ಬಸವ ಸಂವಿಧಾನದ ಕರ್ಮ/ಕಾಯಕವು ನಿಷ್ಕಾಮ ಕರ್ಮವಲ್ಲ ಅಥವಾ ಇದು ಕರ್ಮದ ಫಲವನ್ನು ತ್ಯಾಗ ಮಾಡುವ ಸಿದ್ಧಾಂತವಲ್ಲ. ಈ ವಿಷಯವನ್ನು ಬಸವಣ್ಣನವರು ಮತ್ತೊಂದು ವಚನದಲ್ಲಿ **“ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ ಆವ ಪದಾರ್ಥವಾದಡೇನು? ತಾನದ್ದೆಡೆಗೆ ಬಂದುದ ಭೋಗಿಸುವುದೇ ಆಚಾರ. ಕೂಡಲಸಂಗಮದೇವರನೊಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು”** ಎನ್ನುತ್ತಾರೆ. ಮಗದೊಂದು ವಚನದಲ್ಲಿ **“ಹೊಯ್ದಡೆ ಹೊಯ್ಗಳು ಕೈಯ ಮೇಲೆ, ಬೈದಡೆ ಬೈಗಳು ಕೈಮೇಲೆ, ಹಿಂದಣ ಜನನವೇನಾದಡಾಗಲಿ ಇಂದಿನ ಭೋಗವು ಕೈಯ ಮೇಲೆ, ಕೂಡಲಸಂಗಮದೇವಯ್ಯಾ, ನಿಮ್ಮ ಪೂಜಿಸಿದ ಫಲ ಕೈಯ ಮೇಲೆ”**ಎನ್ನುತ್ತಾರೆ. ಫಲದ ಬಗ್ಗೆ ಬಸವ ಪ್ರಣಾಳಿಕೆಯು ಜಾಗೃತವಾಗಿದೆ.

ಈ ಭಗವದ್ಗೀತೆಯ ಕರ್ಮಫಲತ್ಯಾಗ ಸಿದ್ಧಾಂತವನ್ನು ಪ್ರಸಿದ್ಧ ತತ್ವಶಾಸ್ತ್ರಜ್ಞ ಎಂ. ಹಿರಿಯಣ್ಣನವರು ಹೀಗೆ ಹೇಳಿದ್ದಾರೆ. “The central point of teaching is activism or to use the expression of GITA, Karma Yoga. ... The idea of result (ಫಲ) which is to ensure from the action(ಕರ್ಮ/ಕಾಯಕ) must be dismissed altogether form the mind before as well as during the act”.

30ನೇ ಪುಟಕ್ಕೆ



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆಯ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯ ರಸ್ತೆ. ಹೊಂಗಸಂದ್ರ–560 068, ಬೆಂಗಳೂರು.

# ಬಸವ ಜಯಂತಿ ಕ್ರಿ.ಶ. 1710ರಲ್ಲಿಯೇ ಆಚರಣೆಯಾಗಿರುವ ಪ್ರಸ್ತಾಪದ ಕಾಂಚನಗಢದ ಶ್ರೀ ಗಂಗಾಧರೇಶ್ವರ ದೇವಸ್ಥಾನದ ಶಾಸನ

ಕರ್ನಾಟಕ ಸರ್ಕಾರವು 20ನೇ ಏಪ್ರಿಲ್, 2007ರಂದು ವಿಧಾನಸೌಧದ ಮುಂದೆ ಪ್ರಥಮ ಬಸವ ಜಯಂತಿಯನ್ನು ಸರ್ಕಾರದಿಂದ ಆಚರಿಸಿದ್ದು ಮತ್ತು 18ನೇ ಜನವರಿ 2024ರಂದು ಬಸವಣ್ಣನವರನ್ನು "ಕರ್ನಾಟಕದ ಸಾಂಸ್ಕೃತಿಕ ನಾಯಕ" ಎಂದು ಘೋಷಣೆ ಮಾಡಿದ್ದು, ಹಾಗೆಯೇ 17ನೇ ಫೆಬ್ರವರಿ 2024ರಂದು ವಿಶ್ವಗುರು ಬಸವಣ್ಣನವರ ಛಾಯಾಚಿತ್ರವನ್ನು ಎಲ್ಲ ಸರ್ಕಾರಿ ಕಛೇರಿಗಳಲ್ಲಿ ಹಾಕಲು ಕರ್ನಾಟಕ ಸರ್ಕಾರವು ಆದೇಶ ಹೊರಡಿಸಲಾಗಿದೆ. ಈ ಸಂದರ್ಭದಲ್ಲಿ 'ಬಸವ ಜಯಂತಿ' ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. "ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ" ಎಂಬ ಶೀರ್ಷಿಕೆಯಡಿಯಲ್ಲಿ ಇತ್ತೀಚೆಗೆ ಅಂತರ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವೊಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಕಾಲ ನಡೆಯಿತು ಮತ್ತು ಬೇರೆ ಬೇರೆ ಭಾಗಗಳಲ್ಲಿ ಈ ಆಚರಣೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಲಿದೆ. ಮತ್ತು ಬಸವಣ್ಣನವರ ಕುರಿತು 'ಬಸವ ಜಯಂತಿ'ಯನ್ನು ಕುರಿತು ಅನೇಕರು ಲೇಖನಗಳನ್ನು ಬರೆದಿದ್ದಾರೆ.

ದಾವಣಗೆರೆಯಲ್ಲಿ ಮೊದಲು ಬಸವ ಜಯಂತಿಯನ್ನು ಆಚರಿಸಿದ ಪ್ರಸ್ತಾಪವನ್ನು ಎಲ್ಲೆಡೆಯೂ ಮಾಡಲಾಗುತ್ತಿದೆ. ಪೂಜ್ಯಶ್ರೀ ಮೃತ್ಯುಂಜಯ ಅಪ್ಪಗಳು ದಾವಣಗೆರೆ ವಿರಕ್ತಮಠದಲ್ಲಿ ಮಠಾಧೀಶರಾಗಿದ್ದ ಸಂದರ್ಭದಲ್ಲಿ ಅಲ್ಲಿಯೇ ನೆಲೆಸಿದ್ದ ಶ್ರೀ ಹರ್ಡೇಕರ್ ಮಂಜಪ್ಪನವರು ಪೂಜ್ಯರ ಸಂಪರ್ಕದಲ್ಲಿದ್ದು ಬಸವ ಜಯಂತಿಯನ್ನು ಆಚರಿಸುವ ಕುರಿತು ಪೂಜ್ಯರಲ್ಲಿ ಪ್ರಸ್ತಾಪಿಸಿದಾಗ, ಅವರು ಸಂತೋಷದಿಂದ ಒಪ್ಪುತ್ತಾರೆ. ಮುಂದೆ ವೈಶಾಖ ಶುದ್ಧ ರೋಹಿಣಿ ನಕ್ಷತ್ರದಲ್ಲಿ 'ಬಸವ ಜಯಂತಿ'ಯನ್ನು ಆಚರಿಸಲು ಸ್ಥಳೀಯ ಭಕ್ತರೊಂದಿಗೆ ಚರ್ಚಿಸಿ, ದಿನಾಂಕವನ್ನು ಗೊತ್ತು ಪಡಿಸುತ್ತಾರೆ. ಕ್ರಿ.ಶ. 1913ರಂದು ಮೊದಲ ಬಸವ ಜಯಂತಿಯನ್ನು ದಾವಣಗೆರೆಯಲ್ಲಿ ಆಚರಿಸಿದ್ದು ಈಗ ಅದೊಂದು ಇತಿಹಾಸ. ಇದೇ ಸಂದರ್ಭದಲ್ಲಿ "ಮೊದಲ ಜಯಂತಿ ದಿನದಂದು ಹಳೆಹೊನ್ನೂರು ಮಠದ ಪಟ್ಟಾಧ್ಯಕ್ಷರು ಬಸವ ಜಯಂತಿಯನ್ನು ನಕ್ಷತ್ರದ ಮೇಲೆಯೇ ಮಾಡುವುದು ಉತ್ತಮವೆಂದು ಎಲ್ಲ ರಥೋತ್ಸವಗಳು ನಕ್ಷತ್ರದ ಮೇಲಿನಿಂದಲೇ ಜರುಗುತ್ತವೆಂದು ಸೂಚಿಸಿದ್ದರು. ಶ್ರೀಗಳ ಈ ಸೂಚನೆ ಎಲ್ಲರಿಗೂ ಒಪ್ಪಿಗೆಯಾಯಿತು. ಮುಂದಿನ ವರ್ಷ ಅಂದರೆ ಕ್ರಿ.ಶ. 1914ರಿಂದ ರೋಹಿಣಿ ನಕ್ಷತ್ರದ ಮೇಲೆಯೇ ಬಸವ ಜಯಂತಿಯನ್ನು ಆಚರಿಸಲಾಯಿತು". ಮುಂದೆ ಬಸವ ಜಯಂತಿ ನಿರಂತರವಾಗಿ ಬೇರೆ ಬೇರೆ ಕಡೆಗೆ ಆಚರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಇಲ್ಲಿ ನಾನು ಪ್ರಸ್ತಾಪಿಸುವ ವಿಷಯ ಬಸವ ಜಯಂತಿ ಆಚರಣೆಯ ಪ್ರಾರಂಭ ಕ್ರಿ.ಶ. 1913ರ–ಕ್ಕಿಂತಲೂ ಹಿಂದೆ ಕ್ರಿ.ಶ. 1710ರಲ್ಲಿ ಹಾಕಿಸಿದ ಶಾಸನವೊಂದರಲ್ಲಿ ಬಸವ ಜಯಂತಿಯನ್ನು ಆಚರಿಸಿರುವ ಉಲ್ಲೇಖವನ್ನು ಒಳಗೊಂಡ ಶಾಸನ ನಮಗೆ ಲಭ್ಯವಾಗಿದ್ದು, ಅದು ಇಂದಿನ ಬಳ್ಳಾರಿ ಜಿಲ್ಲೆಯ ಸಿರುಗುಪ್ಪಾ ತಾಲ್ಲೂಕಿನ ಕಾಂಛನಗಢ ಈಗಿನ ಕೆಂಚನಗುಡ್ಡ ಎಂದು ಕರೆಯಲಾಗುತ್ತಿದೆ. ಈ ಊರಿನ ಐತಿಹಾಸಿಕ ಶ್ರೀ ಗಂಗಾಧರೇಶ್ವರ ದೇವಸ್ಥಾನದ ಆವರಣದಲ್ಲಿ ಈ ಶಾಸನವಿದೆ. ಮೂವತ್ನಾಲ್ಕು ಸಾಲುಗಳನ್ನು ಒಳಗೊಂಡ ಈ ಶಾಸನದ 21ನೇ ಸಾಲಿನಿಂದ 24ನೇ ಸಾಲಿನವರೆಗಿನ ಶಾಸನದ ವಿವರವನ್ನು ಇಲ್ಲಿ ನೋಡಬಹುದು.

21. . . . . . ಸರ್ವಧಾರಿನಾಮ ಸಂವತ್ಸರದ ವೈಶಾಖ
22. ಬ 12 ಗುರುವಾರ ಅಮೃತಸಿದ್ದಿಯೋಗದಲಿ ಶ್ರೀ. . . . . . . . . .ಸ್ವಾಮಿ ವಾಸವಾದರು ಶ್ರೀ
23. ಸ್ವಾಮಿ ರಥೋತ್ಸವ ಯೀ ಸಂವತ್ಸರದ ಪಾಲ್ಗುಣ ಶು 4 ಬುಧವಾರ ಬಸವಪಠ ಕಟ್ಟಿ
24. ಯೀ ಶು 1 ಮಂಗಳವಾರ . . . . . . . . .ದಲಿ ರಥೋತ್ಸವ ನೇಮಾ ಮಾಡಿ ಯಿಧೀತು ಯೀ ಕೆಂ

ಹೀಗೆ 01 ರಿಂದ 34 ಸಾಲುಗಳವರೆಗೆ ಈ ಶಾಸನ ಮುಂದುವರೆಯುತ್ತದೆ. ಇಲ್ಲಿ ಪ್ರಸ್ತಾಪಿಸಿರುವ ಸರ್ವಧಾರಿನಾಮ ಸಂವತ್ಸರ ವೈಶಾಖ ಬ 12 ಗುರುವಾರ ಅಮೃತಸಿದ್ದಿಯೋಗದಲ್ಲಿ (ಬಹುಶಃ ಶ್ರೀ ಗಂಗಾಧರೇಶ್ವರ ದೇವಸ್ಥಾನ) ರಥೋತ್ಸವದ ಸಂದರ್ಭದಲ್ಲಿ ರಥಕ್ಕೆ ಬಸವಣ್ಣನವರ ಪಟ (ಚಿತ್ರವನ್ನು) ಕಟ್ಟಿಸಿ ರಥೋತ್ಸವ ಮಾಡಿದ ವಿವರಗಳು ಶಾಸನದಲ್ಲಿ ಸ್ಪಷ್ಟವಾಗಿರುವುದನ್ನು ಗಮನಿಸಬಹುದು.

ಹೀಗಾಗಿ ಬಸವಣ್ಣನವರ ಜಯಂತಿ ಆಚರಣೆಯ ಪ್ರಾರಂಭಿಕ ಹಂತದ ವಿವರಗಳು ಈ ಮೇಲಿನ ಶಾಸನದಲ್ಲಿನ ಉಲ್ಲೇಖದಂತೆ ಕ್ರಿ.ಶ. 1710ರಲ್ಲಿಯೇ ಪ್ರಾರಂಭವಾಗಿದ್ದು,

ಇನ್ಮುಂದೆ ಬಸವ ಜಯಂತಿ ಪ್ರಾರಂಭವಾದುದು ಕ್ರಿ.ಶ. 1710ರಲ್ಲಿ ಎಂದು ಹೇಳಬಹುದಲ್ಲವೇ?

ಶಾಸನದ ಸಂಪೂರ್ಣ ಪಠ್ಯ

ಗಂಗಾಧರ

1. ಸ್ವಸ್ತಿ ಶ್ರೀಜಯಾಬ್ದೆಯ ಶಾಸಲಿವಾಹನ ಶಕವರುಷಂಗಳು 1630ನೆಯ ಸರ್ವ

2. ಧಾರಿ ನಾಮ ಸಂವತ್ಸರದ ಮಾರ್ಗಶಿರ ಶು.5 ಯಲ್ಲು ಶ್ರೀಮತು ವಡೆರಹಟ್ಟಿ ಪುರವರ್ಗಕ್ಕೆ

3. ಕಾರಣಕರ್ತರಾದ ರಾಜಶ್ರೀ ಮೂಲೆಮಟದ ರಾಚೋಟಿದೇವರ ಶಿಷ್ಯರಾದ . . .

4. ಮ ಕುಲೋತ್ತುಂನ್ನ ಸಿರಿಕುಪ್ಪೆ ಸಿಮೆ ಮಜಕೂರು ವ ದೇವರಸನ ಕಾಲುವೆ ವ ಮಂಗಾಪು

5. ರ ವರ ಯಿಭರಾಮಾಪುರದ ಗೌಡ ಮಲ್ಲಿನಾಯಕನ ಕೊಮಾರ ಚಿಕ್ಕಣಗೌಡನು ಆತಗೆ

6. ಹೆಂಡರೂ ಯಿಬ್ಬರು ವಬ್ಬ ಹೆಂಡತಿಗೆ ಮಗ ಗಿಡ್ಡ ಕೆಂಚಣಗೌಡ ವ ಬಸವಣಗೌಡ.

7. ಯಿಬ್ಬರದು ನಷ್ಟಸಂಥಾನವಾಯಿತು ಯರಡನೆ ಹೆಂಡತಿ ಮಗ ದೇಮಣಗೌಡನು ಆತ.

8. ಗೆ ಮಕ್ಕಳು ಯಲ್ಲಣಗೌಡ 1 ಕೆಂಚಣಗೌಡ 1 ಕೆಂಚಣಗೌಡಗೆ ಮಕ್ಕಳು ಯಿಲ್ಲ.

9. ವು ಯಲ್ಲಣಗೌಡಗೆ ಮಕ್ಕಳು ನಾಲ್ಲವರು ರಾಮಂಣಗೌಡ 1 ದೇಮಣಗೌಡ 1 ನಾಗ

10. ಣಗೌಡ 1 ಮುದುಕಣಗೌಡ 14 ಯಿದರವಳಗೆ ರಾಮಣಗೌಡನ್ನು ಮುದುಕಣಗೌಡನ್ನ ಕೆ.

11. ಂಚಣಗೌಡಗೆ ಸಾಕಕೊಟ್ಟರು ರಾಮಣಗೌಡಗೆ ವಬ್ಬ ಮಗಯಿದ್ದಾತ ದೈವಿಕವಾದನು ಮು

12. ದಕಣಗೌಡನು ಹಜರತಿ ಅಬ್ದುಲ್ಲ ಮಹಬಸಾಹೇಬನ ಮಗ ಮಲಿಕಿ ಸಾಹೇಬನ ಕಾ

13. ಲಕಿರ್ದಿಲಿ ಪರಗಣೆ ಸಿರಿಕುಪ್ಪೆ ಸೀಮೆಯ ನಾಡಗೌಡಿಕೆ ಪಡವನು ಯೀತಗೆ ಮಕ್ಕಳು ನಾಲ್ಲೋರು

14. ದೇಮಣಗೌಡ 1 ಕೆಂಚಣಗೌಡ 1 ಸಾಹೇಬವಗೌಡ 1 ರಾಮಣಗೌಡ 1 ಯೀ ಮುದ

15. ಕಣಗೌಡನು ತನ್ನ ಮಗ ಕೆಂಚಣಗೌಡನ್ನ ತಂಮ್ಮ ಅಣ ರಾಮಣಗೌಡಗೆ ಸಾಕು ಕೊ

16. ಟ್ಟರು ಯೀ ಕೆಂಚಣಗೌಡನು ಮಿರಾಸಿ ವುದ್ಧಾರ ಮಾಡಿ ವೈರಿ ಮೋರೆಮೇಲೆ ಹೊ

17. ಡದು ನಾಡಗೌಡಿಕೆ ವುಂಮ್ಮಳಿ ಗ್ರಾಮ ಮಂಗಾಪುರದ ಭೂಮಿವಳಗೆ ಗುಡಹೊ

18. ಸೂರದುರ್ಗ ನಿರ್ಮಿತ ಮಾಡಿದ ಮುಹೂರ್ಥವು ಪ್ರಮಾದಿನಾಮ ಸಂವತ್ಸ

19. ರದ ಚೈಯಿತ್ರ ಬ 14 ಮಂಗಳವಾರ ರೋಹಿಣಿನಕ್ಷತ್ರ ಪ್ರೀತಿನಾಮ ಯೊ

20. ಗ ಗಳಿಗೆ 16ರಲಿ ಆರಂಭ ಮಾಡಿದನು ಸರ್ವಜಿತು ನಾಮ ಸಂವತ್ಸರದಲಿ

21. ಸರನಾಡಗೌಡಿಕೆ ಪಡೆದನು ಸರ್ವಧಾರಿನಾಮ ಸಂವತ್ಸರದ ವೈಶಾಖ

22. ಬ 12 ಗುರುವಾರ ಅಮ್ರುತಸಿದ್ದಿಯೋಗದಲಿ ಶ್ರೀ. . . . . . . . . .ಸ್ವಾಮಿ ವಾಸವಾದರು ಶ್ರೀ

23. ಸ್ವಾಮಿ ರಥೋತ್ಸವ ಯೀ ಸಂವತ್ಸರದ ಪಾಲ್ಗುಣ ಶು 4 ಬುಧವಾರ ಬಸವಪಠ ಕಟ್ಟಿ

24. ಯೀ ಶು 1 ಮಂಗಳವಾರ . . . . . . . . . .ದಲಿ ರಥೋತ್ಸವ ನೇಮಾ ಮಾಡಿ ಯಿಧೀತು ಯೀ ಕೆಂ

25. ಚಣಗೌಡಗೆ ಮಕ್ಕಳು 3 ಮುದುಕಣಗೌಡ 1 ವಿರೂಪಾಕ್ಷಗೌಡ 1 ವೀರಣಗೌಡ 1 ಬಾದ

26. ಶಾಹಿ ಮೊಗಲಾಯಿ ಅಓರಂಗಶಾಹನ ಅಂತ್ಯ ಭಾಗವು । ಕಸಬೆ ಗೌಡಿಕೆ ಪಾಲು 9ಕ್ಕೆ ಮೂರು ಪಾ

27. ಲು ಗೌಡಿಕೆ ನಂಮ್ಮವು ವುಳದ ಆರುಪಾಲಿಗೆ ಕಟ್ಟಿಕೇರಿ ಅವರದು 1 ಬೋಗ ಅವರದು 1 ಗುಣೀಸೆಟ್ಟಿ ಅವ

28. ರದು 1 ಬಾಲೆನವರುದು 1 ಅಯ್ಯಪ್ಪ ತಿಂಮ್ಮಣ ಗೌಡನವರುದು 1 ಪಟ್ಲಶೆಟ್ಟಿ ಅವರುದು 1 ಕುಲರ್ಣಿಗ

29. ಳ ಬಣ 4ಕ್ಕೆ ಅಕ್ಕಣಯ್ಯನವರದು 1 ವೆಂಗಳಪ್ಪಯಲ್ಲರಸನವರುದು 1 ವಿರುಪಾಕ್ಷಯ್ಯನ

30. ವರದು 1 ನರಹರಿ ಅವರದು 1 ತಳವಾರ ಗಡಿ ನಂದಿನಾಯಕ ಕಂಮಾರ ಫಣಿಯೋಜ ಬಡಿಗೆ ಸಂ

31. ಬೋಜ ಅಗಸರ ದೇವರಾಜ ಕೋನರಾಜ ಜಕ್ಕರಾಜ ನಾಯಿಂದರ ಮುದಿವಿರೋಜ ಕುಂಭಾರ ಯೆಲ್ಲಿಸೆಟ್ಟಿ ಮ

32. ಠಪತಿ ಚೆಂನೆವಡೆರು ಬೋಯಿಸಿಕೆಂಮ್ಮೀಸೆ ಅವರು ಪಾದೇಮಣಭಟ್ಟರು ಭಾರಿಕ ಮಲ್ಲಯ್ಯ ಅಕ್ಕಸಾಲೆ.

33. ಮಣೋಜ ಮಾದಾರ ಬೆಕ್ಕಿನ ಸುಂಕ ಮಾದಿಗರ ಹೊಂನ್ನುಗಯಲ್ಲುಗನು । ಯೀ ಗುಡ್ಡದ ತಳವಾ

34. ರ . . . . . . . . . . ಹನಿಮಿನಾಯಕ ವಿಂಮ್ಮಿನಾಯಕಕ ಪೆಂನ್ನಿನಾಯಕ ಶ್ರೀ ಶ್ರೀ ಶ್ರೀ.

**ಪ್ರೊ. ಎಸ್.ಸಿ.ಪಾಟೀಲ** ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ ಹಂಪಿ,
ನಂ. 9, ತಾಯಿನೆರಳು, ತುಂಗಭದ್ರ
ಹೌಸಿಂಗ್ ಕಾಲೊನಿ, 2ನೇ ಕ್ರಾಸ್,
ಹಳಿಯಾಳ ರಸ್ತೆ,
ಧಾರವಾಡ – 580 001.
ಮೊ : 94485 63687



# ನೊಳಂಬ ಸಮುದಾಯದ ಧಾರ್ಮಿಕ ವ್ಯವಸ್ಥೆ : ಒಂದು ಚಿಂತನೆ

(ನೊಳಂಬ ಸಮುದಾಯದ ಧಾರ್ಮಿಕ ಹಿತಾಸಕ್ತಿಗಳು ಈ ಲೇಖನದಲ್ಲಿ ಚರ್ಚಿತವಾಗಿರುವುದರಿಂದ, ಲೇಖನ ಸ್ವಲ್ಪ ದೀರ್ಘವಾಗಿದ್ದರೂ ಓದುಗರು ಕೊನೆಯತನಕ ಓದಿ ತಮ್ಮ ಅನಿಸಿಕೆಗಳನ್ನು ಮತ್ತು ಸಲಹೆಯನ್ನು ವ್ಯಕ್ತಪಡಿಸಲು ಕೋರಲಾಗಿದೆ.)

ಶೀರ್ಷಿಕೆಯ ವಿಷಯಕ್ಕೆ ಬರುವ ಮುನ್ನ, ನೊಳಂಬವಾಣಿ ಪತ್ರಿಕೆಯ ಈ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿರುವ "ಕಾಯಕವೇ ಕೈಲಾಸ" ತಲೆಬರಹದ ವರದಿಯನ್ನು ಓದಿದ ನನಗೆ ಇನ್ನಿಲ್ಲದಷ್ಟು ಸಂತೋಷ, ಸಮಾಧಾನ ಒಟ್ಟೊಟ್ಟಿಗೆ ಆದ ವಿಷಯದ ಬಗ್ಗೆ ಹೇಳಬಯಸುತ್ತೇನೆ. ತೊಂಬತ್ತು ವರ್ಷ ವಯಸ್ಸಿನ ಹೊಸ್ತಿಲಲ್ಲಿ ನಿಂತಿರುವ ನಾನು, ಸುಮಾರು ಐವತ್ತಕ್ಕೂ ಮಿಕ್ಕು ಸಿದ್ಧರಾಮ ಜಯಂತಿಗಳಲ್ಲಿ ಭಾಗವಹಿಸಿದ್ದೇನೆ. ಇಪ್ಪತ್ತೈದು ವರ್ಷಗಳ ಹಿಂದೆ, ಕಡೂರು ತಾಲ್ಲೂಕಿನ ಹೇಮಗಿರಿ ಕ್ಷೇತ್ರದಲ್ಲಿ ನಡೆದ ಸಿದ್ಧರಾಮ ಜಯಂತಿ ಮಹೋತ್ಸವ ಸಮಿತಿಯ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ಭಾಗ್ಯವೂ ಸಹ ನನ್ನದಾಗಿತ್ತು. ಆದರೆ ಸೊನ್ನಲಿಗೆ ಶಿವಯೋಗಿ ಸಿದ್ಧರಾಮನಿಗೆ ಪ್ರಿಯವಾದ "ಸಾಮೂಹಿಕ ಇಷ್ಟಲಿಂಗ ವಿಧಿ" ಮತ್ತು "ಇಷ್ಟಲಿಂಗ ಪೂಜಾ ವಿಧಾನದ ಪ್ರಾತ್ಯಕ್ಷಿಕೆ"ಯಂತ ಧಾರ್ಮಿಕ ಮಹತ್ವ ಸಾರುವ ಯಾವುದೇ ಕಾರ್ಯಕ್ರಮವನ್ನು ಇಲ್ಲಿಯವರೆಗೂ ಹಮ್ಮಿಕೊಂಡ ದಾಖಲೆ ಇದ್ದಂತಿಲ್ಲವೆಂದು ಹೇಳಬಹುದು. ಪ್ರಥಮ ದಾರಿ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಕ್ಷೇತ್ರದಲ್ಲಿ ನಡೆದ ಜಯಂತಿ ಮಹೋತ್ಸವ ಸಮಾರಂಭದಲ್ಲಿ ಇಂತಹುದೊಂದು ಧಾರ್ಮಿಕ ಮಹತ್ವವುಳ್ಳ ಅದರಲ್ಲೂ ಸಿದ್ಧರಾಮೇಶ್ವರರಿಗೆ ಪ್ರಿಯವಾದ ಧಾರ್ಮಿಕ ಕಾರ್ಯವನ್ನು ನಡೆಸಿಕೊಡುವಲ್ಲಿ ಉತ್ಸಾಹ ತೋರಿದ ಜಯಂತಿ ಮಹೋತ್ಸವ ಸಮಿತಿಯ ಅಧ್ಯಕ್ಷರಿಗು ಮತ್ತು ಸದಸ್ಯರಿಗೂ, ವಿಶೇಷವಾಗಿ ಧಾರ್ಮಿಕ ಉಪಸಮಿತಿಯ ಎಚ್ಚೆತ್ತ ಅಧ್ಯಕ್ಷ ಮತ್ತು ಸದಸ್ಯರುಗಳೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ಇಂತಹ ಗುರುತರವಾದ ಧಾರ್ಮಿಕ ವಿಧಿ-ವಿಧಾನಗಳನ್ನು "ದೀಕ್ಷಾ ಗುರು" ಸ್ಥಾನದಲ್ಲಿ ನಿಂತು ನಡೆಸಿಕೊಟ್ಟ ಪೂಜ್ಯಶ್ರೀ ಡಾ. ಮಾತೆ ಬಸವಾಂಜಲಿ ದೇವಿಯವರಿಗೆ ನನ್ನ ಅನಂತಾನಂತ ಶರಣು ಸಮರ್ಪಿಸಲು ಬಯಸುತ್ತೇನೆ.

ಚಿಕ್ಕಬಾಸೂರು ಜಯಂತಿ ಮಹೋತ್ಸವ ಸಮಿತಿಯಿಂದಾದ ಈ ಮಹತ್ಕಾರ್ಯ ಅನುಕರಣೀಯವಾಗಿದೆ. ಮುಂಬರುವ ಎಲ್ಲಾ ಜಯಂತಿ ಮಹೋತ್ಸವ ಸಮಾರಂಭಗಳಲ್ಲಿಯೂ ಸಹ ಕಡ್ಡಾಯವಾಗಿ ಇಂತಹ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಂಡಲ್ಲಿ, ಧಾರ್ಮಿಕ ದುರ್ಭಿಕ್ಷಕ್ಕೊಳಗಾದ ತಮ್ಮ ಅಸ್ಮಿತೆಯನ್ನೇ ಮರೆತಿರುವ ನೊಳಂಬ ಸಮುದಾಯಕ್ಕೆ ಕೊಂಚ ಪರಿಹಾರ ಸಿಕ್ಕಂತಾಗುತ್ತದೆಯಲ್ಲವೇ.

ನೊಳಂಬರು ಮೂಲತಃ ಶೈವಧರ್ಮ ಪರಿಪಾಲಕರಾಗಿದ್ದರು. ಆದಿಯೋಗಿ 'ಶಿವ'ನಿಂದ ಸ್ಥಾಪನೆಯಾದ ಶೈವಧರ್ಮ ಅಖಂಡವಾಗಿ ಉಳಿದು ಮುಂದುವರಿಯದೆ, ''ವೇದಗಳ ಪ್ರಭಾವದಿಂದ ಪೋಷಿತವಾಗಿ ಆಗಮಗಳ ಮೂಲಕ ರೂಪುಗೊಂಡ ಶೈವಧರ್ಮ'' ಹೀಗೆ ಎರಡು ಕವಲುಗಳಾಗಿ ವಿಂಗಡಣೆಗೊಂಡ 'ಶೈವ' ಧರ್ಮದಲ್ಲಿ ನೊಳಂಬರು ಅನುಸರಿಸುತ್ತಿದ್ದ ಶೈವ ಧರ್ಮದ ನೀತಿಗಳು ನಿಯಮಗಳು ಯಾವುದು ಎಂದು ಹೇಳಲಾಗದು. ಅಂದಿನ ನೊಳಂಬರು ತಮ್ಮ ಜೀವನವಿಡೀ ರಾಜ್ಯಾಡಳಿತದ ಮುಖ್ಯಸ್ಥರಾಗಿ, ಮುಖ್ಯಾಧಿಕಾರಿಗಳಾಗಿ, ಸಾಮಾನ್ಯ ಅಧಿಕಾರಿಗಳಾಗಿ, ರಕ್ಷಣಾ ವ್ಯವಸ್ಥೆಯ ಸೇನಾಧಿಕಾರಿಗಳಾಗಿ ಮತ್ತು ಯೋಧರಾ, ತಮ್ಮ ಜೀವಿತಾವಧಿಯ ಬಹುಭಾಗವನ್ನು ಯುದ್ಧಭೂಮಿಯಲ್ಲಿ ಹೋರಾಡುತ್ತಾ ಕಳೆಯುತ್ತಿದ್ದವರಿಗೆ ತಾವು ಅನುಸರಿಸುತ್ತಿರುವ ಧರ್ಮದ ಬಗ್ಗೆ ತಿಳಿದುಕೊಳ್ಳುವ ವ್ಯವಧಾನವಾದರೂ ಎಲ್ಲಿತ್ತು. ಈಗಲೂ ಇಲ್ಲವೆಂದೇ ಹೇಳಬಹುದು. ನೊಳಂಬವಾಡಿ 32000 ರಾಜ್ಯದ ರಾಜಧಾನಿ "ಹೆಂಜೇರು" ನಗರದ ಮಧ್ಯೆ ಇದ್ದ ಶಿವಾಲಯದ 'ನೊಳಂಬೇಶ್ವರ' ಹೆಸರಿನ ಶಿವಲಿಂಗ ಪೂಜಕರಾಗಿದ್ದರಿಂದ ನೊಳಂಬರು ಶೈವಧರ್ಮ ಪರಿಪಾಲಕರು ಎಂಬಷ್ಟರ ತಿಳುವಳಿಕೆಯುಳ್ಳವರಾಗಿದ್ದರು ಎಂದು ಹೇಳಬಹುದು. ಒಂದು ಐತಿಹ್ಯದ ಪ್ರಕಾರ ನೊಳಂಬರ ಮೂಲದವನಾದ 'ತ್ರಿನಯನ' ಪಲ್ಲವನು ಶೈವಧರ್ಮ ಸ್ಥಾಪಕ ಆದಿಯೋಗಿ ಶಿವನ ಪರಂಪರೆಯವನು ಎಂದು ತಿಳಿದಿದ್ದ ಅಂದಿನ ನೊಳಂಬರು, ತಾವು ತ್ರಿನಯನ ಗೋತ್ರಕ್ಕೆ ಸೇರಿದವರು ಎಂದು ತಿಳಿದಿದ್ದರು. ಇಂದಿನ ನೊಳಂಬರು ಮರೆವಿನ ಶಾಪಕ್ಕೊಳಗಾಗಿ ನಾವೂ ಸಹ ತ್ರಿನಯನ ಪಲ್ಲವ ಗೋತ್ರದವರು



**ಚಂದ್ರಶೇಖರ ತಿ. ಚಿಂದಾಳ**
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ",
ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ಎಂದು ಹೇಳಲು ತಿಳಿಯವದವರಾಗಿದ್ದಾರೆ ಎಂದೆನಿಸುತ್ತದೆ. ನೊಳಂಬರ ಸಾಮಾಜಿಕ ಉನ್ನತಿಗೆ ಶ್ರಮಿಸುತ್ತಿರುವ ನೊಳಂಬ ಲಿಂಗಾಯತ ಸಂಘ ಸಂಸ್ಥೆಯು ಇತ್ತ ಗಮನಹರಿಸಿ ಪ್ರಚಾರ ಕೈಗೊಂಡಲ್ಲಿ ಬಳಕೆಗೆ ಬರಲು ಸಾಧ್ಯವೆನಿಸುತ್ತದೆ.

ಶೈವ-ಕ್ಷತ್ರಿಯ ಸಮಾಜೋ-ಧಾರ್ಮಿಕ ನಡೆಯವರಾಗಿದ್ದ ನೊಳಂಬರು, ಕ್ರಿ.ಶ. 1056ರಲ್ಲಿ (970 ವರ್ಷಗಳ ಹಿಂದೆ) ನಡೆದ ಘನಘೋರ ಯುದ್ಧದಲ್ಲಿ ಹೀನಾಯವಾಗಿ ಸೋತುಹೋದರು. ನೊಳಂಬ ಕುಲವನ್ನೇ ನಾಶಮಾಡಲು ಪಣತೊಟ್ಟ ಶತೃಪಕ್ಷದವರು, ಕಂಡಕಂಡಲ್ಲಿ ನೊಳಂಬರ ತಲೆ ಚಂಡಾಡುತ್ತಾ ನಡೆದರು. ಅಳಿದುಳಿದ ನೊಳಂಬರು ತಲೆತಪ್ಪಿಸಿಕೊಂಡು ಗಡಿದಾಟಿ ಅನ್ಯರಾಜ್ಯಗಳೊಕ್ಕು ಆಶ್ರಯ ಪಡೆದು ಬದುಕುಳಿದರು. ಜೀವನ ನಿರ್ವಹಣೆಗಾಗಿ ತಮಗೆ ತೋಚಿದ ಉದ್ಯೋಗಗಳಲ್ಲಿ ತೊಡಗಿಕೊಂಡ ಕಾರಣ ಹೆಸರಿಗಷ್ಟೇ ಕ್ಷತ್ರಿಯರಾಗಿ, ಹೇಳಿಕೊಳ್ಳಲು ಸಹ ಹಿಂಜರಿಯುತ್ತ, ಸಾಮಾಜಿಕವಾಗಿ ಕೀಳರಿಮೆ ಬೆಳೆಸಿಕೊಂಡರು. ಚ್ಯುತಿಗೊಳಗಾದ ಸಾಮಾಜಿಕ ಗೌರವ ಘನತೆಯಿಂದಾಗಿ ಮತ್ತು ಧಾರ್ಮಿಕ ನಿರೂಪಕರ, ನಿಯಂತ್ರಕರ, ಮಾರ್ಗದರ್ಶಕರ ಹೊಣೆಗೇಡಿತನದಿಂದಾಗಿ, ಶೈವ ಧರ್ಮಾಚರಣೆಗಳು ಶಿಸ್ತುಬದ್ಧವಾಗಿ ಮುಂದುವರಿಯದೆ ಸ್ಥಳೀಯ ಇನ್ನಿತರ ಸಮುದಾಯಗಳು, ಅನ್ಯ ಧರ್ಮಾಚರಣೆಗಳ ಪ್ರಭಾವಕ್ಕೊಳಗಾದ ನೊಳಂಬರು, ಅವರನ್ನು ಕಂಡರೆ ಅವರಂತೆ ಮತ್ತೆ ಇವರನ್ನು ಕಂಡರೆ ಇವರಂತೆ ಎಂಬಂತಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ತಮ್ಮ ಸ್ಥಾನ-ಮಾನಕ್ಕೆ ಎರವಾದರು. ಕಾಲಾಂತರದಲ್ಲಿ 'ನೊಳಂಬ' ಎಂಬ ಗೌರವಾನ್ವಿತ ಶಬ್ದ ಸವಕಳಿಯಾಗಿ ಅಪಭ್ರಂಶಗೊಂಡು 'ನೊಣಬ' ಆಯ್ತು. 'ನೊಳಂಬರು' ಎಂಬ ವಂಶದ್ವಾರ್ಚಕ ಶಬ್ದ 'ನೊಣಬರು' ಎಂದು ಜಾತಿವಾಚಕ ಶಬ್ದವಾಗಿ ಮಾರ್ಪಟ್ಟಿತು. ಶೈವ ಧರ್ಮ ಪರಿಪಾಲಕರಾಗಿ 'ನೊಳಂಬೇಶ್ವರ' ಹೆಸರಿನ ಶಿವಲಿಂಗ ಪೂಜಕರಾಗಿದ್ದ ನೊಳಂಬರು, ನೊಣಬರಾಗಿ ಸನಾತನ ಹಿಂದೂ ಧರ್ಮದ ಅಡಿಯಲ್ಲಿ ಬರುವ ವೈಷ್ಣವ, ಶಾಸಕ್ತ ಉಪಧರ್ಮಗಳ ನೂರಾರು ದೇವರುಗಳನ್ನು ಪೂಜಿಸತೊಡಗಿದರು. ಯಾವುದೇ ಧರ್ಮಕ್ಕೆ ಸೀಮಿತರಾಗದೆ ಎಲ್ಲಾ ಧರ್ಮಗಳ ಪರಿಪಾಲಕರಾಗಿ ಮಿಶ್ರಧರ್ಮೀಯರಾಗಿ ಹೋದರು.

ಕ್ರಿ.ಶ. 1055ಕ್ಕೂ ಪೂರ್ವದಲ್ಲಿ ಶೈವಧರ್ಮ ಪರಿಪಾಲಕರಾಗಿ, ಧರ್ಮ ನಿರೂಪಕರ, ನಿಯಂತ್ರಕರ, ದೇಶಿಕರ, ದೇಶಿಕೇಂದ್ರರ, ದೇಶಿಕಾಚಾರ್ಯರ ಮಾರ್ಗದರ್ಶನದಲ್ಲಿ ಶಿಸ್ತುಬದ್ಧ ಧಾರ್ಮಿಕ ಜೀವನ ನಡೆಸಿಕೊಂಡು ಬರುತ್ತಿದ್ದ ನೊಳಂಬರು ಕ್ರಿ.ಶ. 1055ರ ನಂತರ ಕ್ರಿ.ಶ. 1156ರವರೆಗೆ (ಒಂದುನೂರು ವರ್ಷಗಳ ದೀರ್ಘ ಅವಧಿಯವರೆಗೆ) ಸನ್ನಿವೇಶಗಳ ಒತ್ತಡಕ್ಕೆ ಸಿಕ್ಕು ಅತಂತ್ರರಾಗಿದ್ದ ಸಮಯದಲ್ಲಿ, ಸೊನ್ನಲಿಗೆಯ 'ಸಿದ್ಧರಾಮ'ರ ದರ್ಶನ ನೊಣಬರಿಗಾಗಿದ್ದು ಒಂದು ಸೋಜಿಗವೆಂದೇ ಹೇಳಬೇಕು.

ಬಸವಣ್ಣನವರ ಒಂದು ವಚನದಲ್ಲಿ ಬರುವ ವಾಕ್ಯವನ್ನು ಅರ್ಥೈಸಿ ಹೇಳುವುದಾದಲ್ಲಿ;

**"ಬೆಟ್ಟದ ತುಟ್ಟ ತುದಿಯಲ್ಲಿ ಹುಟ್ಟಿದ**
**ಗಿಡದಲ್ಲಿ ಬಿಟ್ಟ ನೆಲ್ಲಿಕಾಯಿಗೂ**
**ಘಟ್ಟದ ಕೆಳಗಿನ ವಿಶಾಲ ಸಮುದ್ರದಲ್ಲಿ**
**ದೊರೆತ ಉಪ್ಪಿಗೂ ಎತ್ತಣಿಂದೆತ್ತ ಸಂಬಂಧ**
**ಪುಷ್ಕಳವಾದ ಭೋಜನದಲ್ಲಿ**
**ಚಪ್ಪರಿಸಲು ಉಪ್ಪಿನಕಾಯಿ ಪ್ರಧಾನವಾದಂತೆ"**

ಕನ್ನಡಾಂಬೆಯ ನಡುಪಟ್ಟಿಯಂತಿರುವ ನಾಲ್ಕಾರು ಜಿಲ್ಲೆಗಳಲ್ಲಿ ಕೆಲವು ಕಡೆ ಒತ್ತಾಗಿಯೂ, ಹಲವು ಕಡೆ ವಿರಳವಾಗಿಯೂ, ನಾಡಿನ ಬೇರಾವ ಜಿಲ್ಲೆಗಳಲ್ಲಿಯೂ ಕಂಡುಬರದ ನೊಳಂಬ ಸಮುದಾಯಕ್ಕೂ, ನಾಡಿನ ಉತ್ತರ ದಿಕ್ಕಿನಲ್ಲಿ 800 ಕಿ.ಮೀ.ಗೂ ಹೆಚ್ಚುದೂರದ ಸೊನ್ನಲಾಪುರದ ಕುಡುಒಕ್ಕಲಿಗ ಕುಲದಲ್ಲಿ ಹುಟ್ಟಿದ "ಸಿದ್ಧರಾಮ"ನಿಗೂ ಎತ್ತಣಿಂದೆತ್ತ ಸಂಬಂಧ ಎಂಬಂತೆ, ಕ್ರಿ.ಶ. 1055ರ ನಂತರ ಸಮಾಜೋ-ಧಾರ್ಮಿಕ ದುರ್ದೆಶೆಗೆ ಒಳಗಾದ ನೊಳಂಬ ಸಮುದಾಯ, ಒಳ್ಳೆಯ ದಿನಗಳಿಗಾಗಿ ಕಾಯುತ್ತಾ ಒಂದು ನೂರು ವರ್ಷಗಳು ಗತಿಸಿದ ನಂತರ, ಭೂಮಿಯಲ್ಲಿ ಹುದುಗಿದ್ದ ಬೀಜ ತೇವಾಂಶ ಸಂಪರ್ಕದಿಂದಾಗಿ ಮೊಳಕೆ ಹೊಡೆದಂತೆ, ನೊಳಂಬ ರಾಜವಂಶದ ಏಳು ಸಹೋದರರು ಕಳೆದುಹೋದ ರಾಜ್ಯದ ಮರುಸ್ಥಾಪನೆಗಾಗಿ ಸಹಾಯ ಕೋರಿ ದೂರದ ಸೊನ್ನಲಾಪುರ ರಾಜ್ಯದ ಮಹಾರಾಣಿ ಸೋದರ ಅತ್ತೆ ಚಾಮಲಾದೇವಿಯವರ ಮೊರೆಹೋದಾಗ, ಸೊನ್ನಲಾಪುರದ ಶೈವ ಧರ್ಮದ ಗುರು ಸಿದ್ಧರಾಮರ ಪರಿಚಯ ಯೋಗಾಯೋಗವೆಂದೇ ಹೇಳಬಹುದು. ಶ್ರೀಗುರುಸಿದ್ಧರಾಮರ ಕೃಪಾಶೀರ್ವಾದ ಮತ್ತು ಸೋದರ ಅತ್ತೆ ಮಹಾರಾಣಿ ಚಾಮಲಾದೇವಿಯವರ ನೆರವು ಹೊತ್ತು, ಏಳುನಾಡುಗಳ ಒಕ್ಕೂಟ "ಮಧುಗಿರಿ ಮಹಾನಾಡು" ರಾಜ್ಯ ಸ್ಥಾಪನೆ, ನೊಳಂಬರ ಸಾಮಾಜಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಹಾಯವಾಗುತ್ತದೆ.

ಸೊನ್ನಲಾಪುರದ ಶೈವಧರ್ಮದ ಗುರುವಾಗಿದ್ದ ಶ್ರೀ ಸಿದ್ಧರಾಮ ಶೈವಧರ್ಮವನ್ನು ತೊರೆದು, ಬಸವಣ್ಣನಿಂದ ಸ್ಥಾಪನೆಯಾದ ಲಿಂಗಾಯತ ಧರ್ಮ ಸ್ವೀಕರಿಸಿ, ಕ್ರಿ.ಶ. 1196ರಲ್ಲಿ 'ಶೂನ್ಯ ಸಿಂಹಾಸನ'ದ ಅಧ್ಯಕ್ಷರಾಗಿ, ನೊಳಂಬರ 'ಮಧುಗಿರಿ ಮಹಾನಾಡು' ರಾಜ್ಯದಲ್ಲಿ ಧರ್ಮಪ್ರಚಾರ ಉದ್ದೇಶದಿಂದ ಪ್ರವಾಸ ಕೈಗೊಳ್ಳುತ್ತಾರೆ. ಕ್ರಿ.ಶ. 1196 ರಿಂದ 1200 ರವರೆಗೆ ಸತತ ಐದು ವರ್ಷಗಳಲ್ಲಿ, ಯಾವ ಧರ್ಮಕ್ಕೂ ಸೀಮಿತರಾಗದ ನೊಳಂಬ ಸಮುದಾಯದವರನ್ನು ಲಿಂಗಾಯತ ಧರ್ಮದ ಅನುಯಾಯಿಗಳನ್ನಾಗಿ ಪರಿವರ್ತಿಸುತ್ತಾರೆ. ಜಗದ್ಗುರು ಶ್ರೀ ಸಿದ್ಧರಾಮೇಶ್ವರರು ನೊಳಂಬ ನಾಡಿನ ಉದ್ದಗಲದಲ್ಲಿ ಸುಮಾರು 175ಕ್ಕೂ ಮಿಕ್ಕು ಕೇಂದ್ರಸ್ಥಳಗಳಲ್ಲಿ, ಸಾಮೂಹಿಕವಾಗಿ ಇಷ್ಟಲಿಂಗ ದೀಕ್ಷಾ ಸಮಾರಂಭಗಳನ್ನು ಏರ್ಪಡಿಸಿ ನೊಳಂಬರೆಲ್ಲರನ್ನೂ ಬರಮಾಡಿಕೊಂಡು ಲಿಂಗಧಾರಣೆ ಮಾಡಿ ಭವಿಗಳಾಗಿದ್ದವರನ್ನು ಭಕ್ತರನ್ನಾಗಿ ಪರಿವರ್ತಿಸುತ್ತಾರೆ. ಲಿಂಗಪೂಜಾ ವಿಧಾನದ ಪ್ರಾತ್ಯಕ್ಷಿಕೆಯನ್ನು ಕೈಗೊಂಡು ಲಿಂಗಾಯತ ಧರ್ಮದ ನೀತಿ, ನಿಯಮ, ತತ್ವಸಿದ್ಧಾಂತಗಳ ವಿಧಿ-ವಿಧಾನಗಳನ್ನು ಭೋದಿಸುವ, ಉಪದೇಶ, ಉಪನ್ಯಾಸಗಳ ಮೂಲಕ ತಿಳಿಹೇಳುವ ಕಾರ್ಯದಲ್ಲಿ ನಿರತರಾಗುತ್ತಾರೆ. ಅಂದು (1190-1200) ಸಾಮೂಹಿಕವಾಗಿ ಇಷ್ಟಲಿಂಗ ದೀಕ್ಷೆ ಕೊಟ್ಟು ನೊಳಂಬರನ್ನು ವಿಶ್ವಧರ್ಮವೆಂದೇ ಪ್ರಸಿದ್ಧವಾದ ಲಿಂಗಾಯತ ಧರ್ಮಕ್ಕೆ ಪರಿವರ್ತಿಸಿ ಧರ್ಮದ ತಿರುಳಿನ ಉಪದೇಶ ನೀಡಿದ, 175ಕ್ಕೂ ಮಿಕ್ಕ ಸ್ಥಳಗಳು 'ಸಿದ್ಧರಾಮ ಗದ್ದುಗೆ' ಕ್ಷೇತ್ರಗಳೆಂದು ಪ್ರಸಿದ್ಧವಾಗಿವೆ. ಅಂತಹ ಸ್ಥಳಗಳಲ್ಲೊಂದು ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಕ್ಷೇತ್ರ. ಈ ಕ್ಷೇತ್ರದಲ್ಲಿ ನಡೆದ ಸಿದ್ಧರಾಮ ಜಯಂತಿ ಸಮಾರಂಭದಂದು ಧರ್ಮದ ಮಹತ್ವ ಸಾರುವ ಕಾರ್ಯಕೈಗೊಂಡಿದ್ದು ಇನ್ನೊಂದು ಮಹತ್ವಪೂರ್ಣ ಕಾರ್ಯವೆಂದರೆ, ಧರ್ಮದ ಆಚರಣೆಗಳ ನಿರಂತರತೆ ಕಾಪಾಡಲು, ಧರ್ಮದ ಆಚರಣೆಗಳು ಧರ್ಮದ ನೀತಿ ನಿಯಮಗಳಿಗೆ ಅನುಸಾರವಾಗಿಯೇ ನಡೆಯುವಂತಾಗಲು ಧಾರ್ಮಿಕ ಕ್ರಿಯೆಗಳ ಅನುಷ್ಠಾನ, ನಿಯಂತ್ರಣ ಮತ್ತು ಮಾರ್ಗದರ್ಶನ ಮಾಡಲು ಊರಿಗೊಬ್ಬ 'ಕ್ರಿಯಾಮೂರ್ತಿ' (ಅಯ್ಯನವರು)ಯ ವ್ಯವಸ್ಥೆ ಮಾಡಿದ್ದು, ಹೀಗಾಗಿ ಇಂದಿಗೂ ನೊಳಂಬರ ಧಾರ್ಮಿಕ ಆಚರಣೆಗಳು, ಶೈವ ಪುರೋಹಿತರುಗಳನ್ನು ದೂರವಿಟ್ಟು, ನೊಳಂಬ ಅಯ್ಯನವರ ಮುಖಾಂತರವೇ ನಡೆಯುತ್ತಿರುವುದು ಸಾಕ್ಷಿಯಾಗಿದೆ. ಆಧುನಿಕ ನೊಳಂಬರನೇಕರು ಅರಿವಿನ ಕೊರತೆಯಿಂದ, ನೊಳಂಬರಿಗೆ ಸಲ್ಲದ ಧರ್ಮಾಚರಣೆಗಳಿಗೆ ಆಸ್ಪದ ಮಾಡಿಕೊಟ್ಟಿರುವುದನ್ನು ಕಾಣಬಹುದು. ಇದಕ್ಕೆ ಆಧುನಿಕ ನೊಳಂಬರೆಷ್ಟು ಕಾರಣರೋ ನೊಳಂಬರ ಮಠ-ಪೀಠಗಳ ಸ್ವಾಮಿಗಳು ಅಷ್ಟೇ ಕಾರಣರು ಎಂದು ಹೇಳಬಹುದು.

ನೊಳಂಬರು ಪವಿತ್ರ ಲಿಂಗಾಯುತ ಧರ್ಮಾನುಯಾಯಿಗಳು. ಜಗದ್ಗುರು ಶ್ರೀ ಸಿದ್ಧರಾಮೇಶ್ವರರ ಧಾರ್ಮಿಕ ಪರಂಪರೆಯವರು. ನೊಳಂಬರು ಲಿಂಗಾಯತ ಧರ್ಮದ ನೀತಿ, ನಿಯಮ, ತತ್ವಸಿದ್ಧಾಂತಗಳ ವಿಧಿ-ವಿಧಾನಗಳಿಗೆ ಬದ್ಧರಾಗಿರಬೇಕಾಗಿರುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. ವರ್ಗ (ಬಡವ-ಶ್ರೀಮಂತ), ವರ್ಣ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ದಲಿತ), ಲಿಂಗ (ಗಂಡು, ಹೆಣ್ಣು), ಭೇದಾತೀತ, ಒಬ್ಬನೆ ದೇವರು (ಇಷ್ಟಲಿಂಗರೂಪದ) ಸತ್ಯಶುದ್ಧ ನ್ಯಾಯ, ಧರ್ಮಧಾರಿತ ಕಾಯಕ (ಕೆಲಸ-ಉದ್ಯೋಗ), ಯಾವುದೂ ಕೀಳೂ ಅಲ್ಲ ಮೇಲೂ ಅಲ್ಲ, ಇವು ಧರ್ಮದ ಮೂಲ ತತ್ವ. ಇವುಗಳನ್ನು ತಮ್ಮ ನಿತ್ಯ ಜೀವನದಲ್ಲಿ ಪಾಲಿಸುವವನೇ ನಿಜವಾದ ನೊಳಂಬ. ಸಿದ್ಧರಾಮೇಶ್ವರರು ನೊಳಂಬರಿಗೆ ಧರ್ಮದ ದೀಕ್ಷೆ ಕೊಟ್ಟಾಗ ಈ ಮೂಲ ತತ್ವಗಳನ್ನು ಪಾಲಿಸುತ್ತೇನೆ ಎಂದು ಪ್ರಮಾಣವಚನ ಸ್ವೀಕರಿಸಿರಲೂಬಹುದು. ಶ್ರೀಗುರು ಸಿದ್ಧರಾಮೇಶ್ವರರ ಪ್ರಾಯೋಜಕತ್ವದಲ್ಲಿ ಬಸವಪ್ರಣೀತ ಶರಣ ಧರ್ಮದ ಅನುಯಾಯಿಗಳಾಗಬೇಕಾಗಿರುವ ಇಂದಿನ ನೊಳಂಬರು, ವೀರಶೈವದ ವೈದೀಕ ಧಾರ್ಮಿಕ ನೀತಿಯನ್ನು ಪಾಲಿಸುತ್ತಿರುವುದು ಶ್ರೀಗುರು ಸಿದ್ಧರಾಮೇಶ್ವರರಿಗೆ ಮಾಡುತ್ತಿರುವ ಗುರುದ್ರೋಹವೆಂದೇ ಪರಿಗಣಿತವಾಗುತ್ತಿದೆ. ನೊಳಂಬ ಸಮುದಾಯಕ್ಕೆ ಧರ್ಮದ ಈ ವ್ಯವಸ್ಥೆಯ ಅರಿವು ಮೂಡಿಸುವ ಹೊಣೆ ಸಿದ್ಧರಾಮ ಜಯಂತಿಯ ಸಮಾರಂಭದಂದು ವೇದಿಕೆಯಲ್ಲಿ ಉಪಸ್ಥಿತರಿರುವುದಕ್ಕಷ್ಟೇ ಸೀಮಿತರಾಗಿ, ಧಾರ್ಮಿಕ ಸ್ಥಿತಿಯ ಹೊಣೆಗೇಡಿತನವನ್ನು ಮೈಗೂಡಿಸಿಕೊಂಡು ತಮ್ಮ ತಮ್ಮ ಮಠಗಳಲ್ಲಿ ಸ್ಥಾಪಕವಾಗಿರುವ ನೊಳಂಬರ ಮಠಾಧೀಶರೆನ್ನಿಸಿಕೊಂಡವರು ಎಚ್ಚೆತ್ತುಕೊಳ್ಳಬೇಕಾಗಿದೆ. ಶರಣ ಧರ್ಮದ ನಿಂತಿ, ನಿಯಮ, ಸಿದ್ಧಾಂತಗಳ ಪ್ರಾಥಮಿಕ ಜ್ಞಾನವೂ ಇರದ ಮಠಗಳ ಸ್ವಾಮಿಗಳು ತಾವು ಮೈಗೂಡಿಸಿಕೊಂಡಿರುವ ವೈದಿಕ ಶೈವ ಸಿದ್ಧಾಂತಗಳಿಗೆ ಬದಲು ಶ್ರೀಗುರು ಸಿದ್ಧರಾಮೇಶ್ವರರಿಂದ ಕೊಡಲ್ಪಟ್ಟ ಬಸವಪ್ರಣೀತ ಲಿಂಗಾಯತ ಧರ್ಮದ ನೀತಿ ತತ್ವಸಿದ್ಧಾಂತಗಳನ್ನು ಅಧ್ಯಯನ ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದಲ್ಲಿ, ನೊಳಂಬರಲ್ಲಿ ಮನೆ ಮಾಡಿರುವ ಅದೆಷ್ಟೋ ಮೂಢನಂಬಿಕೆ, ಮೂಢ ಆಚಾರ, ಮೂಢ ಭಕ್ತಿಗಳನ್ನು ಹೋಗಲಾಡಿಸಿ, ಸದ್ಭಕ್ತಿ, ಸುಜ್ಞಾನ, ಸತ್ಕ್ರಿಯೆಗಳ ಹಾದಿಯಲ್ಲಿ ನಡೆಯಲು

ಮಾರ್ಗದರ್ಶನ ಮಾಡಿದಲ್ಲಿ, ಅವ್ಯವಸ್ಥೆಯಿಂದ ಕೂಡಿ ನೊಳಂಬರ ಧಾರ್ಮಿಕ ವ್ಯವಸ್ಥೆ ಸುವ್ಯವಸ್ಥಿತವಾಗಿ ಮುಂದೆ ಸಾಗಲು ಮಹದುಪಕಾರ ಮಾಡಿದಂತಾಗುತ್ತದೆ. ನೊಳಂಬರ ಮಠಗಳ ಸ್ವಾಮಿಗಳು ಮೊದಲು ಸಂಘಟಿತರಾಗಿ ತಿಂಗಳಲ್ಲಿ ಒಮ್ಮೆಯಾದರೂ ಒಂದುಕಡೆ ಸೇರಿ ನೊಳಂಬ ಸಮುದಾಯದ ನಿಶ್ಚಿತ ಧರ್ಮದ ಅನುಸಂಧಾನ ಮಾಡಿ, ನೊಳಂಬರು ಧರ್ಮಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡುವುದಲ್ಲದೆ, ಧಾರ್ಮಿಕ ಕ್ರಿಯೆಗಳ ಅನುಷ್ಠಾನ, ನಿಯಂತ್ರಣದಲ್ಲಿ ತಮ್ಮ ಅಮೂಲ್ಯ ಸಮಯವನ್ನು ಸದುಪಯೋಗಪಡಿಸಿಕೊಂಡಲ್ಲಿ ನೊಳಂಬರು ಮೆಲ್ಲಮೆಲ್ಲನೆ ನಿಜ ಲಿಂಗಾಯತ ಧರ್ಮಮಾರ್ಗದಲ್ಲಿ ನಡೆಯುವಂತಾಗಿ, ಧರ್ಮದ ದೀಕ್ಷೆ ಕೊಟ್ಟು ಜಗದ್ಗುರು ಶ್ರೀ ಸಿದ್ಧರಾಮೇಶ್ವರರಿಗೆ ಭಕ್ತಿಗೌರವಗಳ ಮುಖಾಂತರ ದೀಕ್ಷಾಗುರುಕಾಣಿಕೆ ಅರ್ಪಿಸಿದಂತಾಗುತ್ತದೆ.

ನೊಳಂಬ ಸಮುದಾಯ ಒಪ್ಪಿತ ಧರ್ಮದ ನೀತಿ ನಿಯಮಗಳು ನಿಶ್ಚಿತ ಮಾರ್ಗದಲ್ಲಿ ನಡೆಯದೇ, ಕವಲು ದಾರಿಯಲ್ಲಿ ಸಾಗುತ್ತಿರುವುದರ ಹೊಣೆಗೇಡಿತನವನ್ನು ನೊಳಂಬರ ಮಠಪೀಠಗಳ ಸ್ವಾಮಿಗಳು ಹೊರಬೇಕಾಗಿದೆ. ತಮ್ಮ ತಮ್ಮ ಮಠಗಳ ಆಸ್ತಿಗಳ ಅಭಿವೃದ್ಧಿಯ ಕಡೆ ಹೆಚ್ಚು ಗಮನ ಕೊಡುತ್ತಾ, ಮಠಗಳ ಆಶ್ರಯದಲ್ಲಿ ನಡೆಸಿಕೊಂಡು ಬರುತ್ತಿರುವ ಶಾಲಾ ಕಾಲೇಜುಗಳ ಆಡಳಿತಾಧಿಕಾರ ಮಾಡುತ್ತಾ, ಹೆಚ್ಚಿನ ಸಮಯ ಕಳೆಯುವ ಸ್ವಾಮಿಗಳಿಗೆ, ನೊಳಂಬರ ಧಾರ್ಮಿಕ ಸುಧಾರಣೆ ಅಭಿವೃದ್ಧಿಯ ಕಡೆ ಗಮನಹರಿಸಲು ಸಮಯವೇ ಉಳಿಯುವುದಿಲ್ಲವಾಗಿರುವುದರಿಂದ ಮಠಗಳ ಆದ್ಯ ಕರ್ತವ್ಯವಾದ ಧರ್ಮಪ್ರಚಾರ, ಧಾರ್ಮಿಕ ಕ್ರಿಯಾ ವಿಧಿವಿಧಾನಗಳ ಅನುಷ್ಠಾನ, ನಿಯಂತ್ರಣ ಮತ್ತು ಮಾರ್ಗದರ್ಶನಕ್ಕೋಸುಗವೇ ಶಿಕ್ಷಣ ಹೊಂದಿ ಧರ್ಮ ಪರಿಣಿತರಾದ ಕ್ರಿಯಾಶೀಲ ವ್ಯಕ್ತಿತ್ವದ ಒಬ್ಬರಿಗಿಂತ ಹೆಚ್ಚು ಧರ್ಮಭೋದಕರನ್ನು ಸೂಕ್ತ ಸಂಭಾವನೆಯೊಂದಿಗೆ ನಿಯಮಿಸುವುದು, ಮಠಗಳ ಆದಾಯಕ್ಕೆ ಹೊರೆಯಾಗದು. ಜಯಂತಿ ಮಹೋತ್ಸವಗಳ ಸ್ಮರಣ ಸಂಚಿಕೆಗಳಲ್ಲಿ ನೊಳಂಬ ಮಠಾಧೀಶರು ತಮ್ಮ ತಮ್ಮ ಪೀಠಗಳ ಮುಖಾಂತರ ನಡೆಸಿಕೊಂಡು ಬರುತ್ತಿರುವ, ಶಾಲಾ ಕಾಲೇಜುಗಳ, ಸಂಸ್ಕೃತ ಮತ್ತು ಜ್ಯೋತಿಷಾಸ್ತ್ರ ಭೋದಿಸುವ ವಿದ್ಯಾಪೀಠಗಳ ವಿದ್ಯಾರ್ಥಿನಿಲಯಗಳ, ವಿವಿಧೋದ್ದೇಶ ಸಮುದಾಯ ಭವನಗಳ ಜಾಹಿರಾತು ಪಟ್ಟಿಯನ್ನು ನೋಡಲು ಸಿಗುವಂತೆ, ತಮ್ಮ ತಮ್ಮ ಪೀಠಗಳ ವ್ಯಾಪ್ತಿಯಲ್ಲಿ ಬರುವ ನೊಳಂಬರ ಗ್ರಾಮಗಳಲ್ಲಿ ಧರ್ಮಪ್ರಚಾರ, ಧರ್ಮಚಿಂತನಾ ಘೋಷ್ಠಿ, ಸಾಮೂಹಿಕ ಇಷ್ಟಲಿಂಗ ದೀಕ್ಷಾ ಸಮಾರಂಭ, ವರ್ಷದಲ್ಲಿ ಎಷ್ಟೆಷ್ಟು ಮಾಡಿರುವಿರಿ ಎಂಬ ಜಾಹಿರಾತು ಪಟ್ಟಿಯನ್ನೂ ಸಹ ಕೊಡಲು ನೊಳಂಬ ಸಮುದಾಯದವರೆಲ್ಲರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಕಾಲ ಒಂದಿತ್ತು, ಸಮುದಾಯದ ಸಾಕ್ಷರತಾ ಪ್ರಮಾಣ ಗಣನೀಯವಾಗಿ ಕನಿಷ್ಟ ಮಟ್ಟದಲ್ಲಿದ್ದುದನ್ನು ಗಮನಿಸಿದ ಅಂದಿನ ಧರ್ಮಪೀಠಾಧೀಶರು, ತಮ್ಮ ತಮ್ಮ ಮಠಗಳ ವ್ಯಾಪ್ತಿಯ ಅಲ್ಲಲ್ಲಿ ಶಾಖೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದ್ದರಿಂದಾಗಿ, ಸಮುದಾಯ ಶೈಕ್ಷಣಿಕವಾಗಿ ಪ್ರಗತಿ ಹೊಂದಿ ಸಾಮಾಜಿಕ ಸ್ಥಾನಮಾನ, ಘನತೆ, ಗೌರವಕ್ಕೆ ಪಾತ್ರವಾಗಿದ್ದಂತೂ ನಿಜ. ಆದರೆ ಮಠಾಧೀಶರು ತಮ್ಮ ಹೆಚ್ಚಿನ ಗಮನವನ್ನು ಸಮುದಾಯದ ಶೈಕ್ಷಣಿಕ ಕ್ಷೇತ್ರಕ್ಕೆ ಮತ್ತು ಮಠಗಳ ಆರ್ಥಿಕ ಪ್ರಗತಿಗೆ ಕೊಟ್ಟಷ್ಟು, ಧಾರ್ಮಿಕ ಕ್ಷೇತ್ರಕ್ಕೆ ಕೊಡದ ಕಾರಣ, ನೊಳಂಬರ ಧಾರ್ಮಿಕ ಸ್ಥಿತಿ ದುಸ್ಥಿತಿಯತ್ತ ಸಾಗಿರುವುದನ್ನು ಕಾಣಬಹುದು.

ಇಂದು ಸಾರ್ವಜನಿಕ ಶಿಕ್ಷಣ ಕ್ಷೇತ್ರ ಸರಕಾರ ಮತ್ತು ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅತ್ಯಂತ ಪ್ರಗತಿದಾಯಕ ಅಭಿವೃದ್ಧಿ ಸಾಧಿಸಿ, ಶೈಕ್ಷಣಿಕವಾಗಿ ನಾಡಿನ ಎಲ್ಲಾ ಸಮುದಾಯಗಳ ಜೊತೆ ಜೊತೆಗೆ ನೊಳಂಬ ಸಮುದಾಯವೂ ಅಭಿವೃದ್ಧಿ ಹೊಂದುತ್ತಿರುವುದರಿಂದ, ನೊಳಂಬರ ಮಠಾಧೀಶರು ಅಂದು ಮಾಡಿದ ವಿದ್ಯಾ ಪ್ರಸಾರದಂತ ಪುಣ್ಯ ಕೆಲಸಗಳು ಇಂದು ತೀರಿರುವುದರಿಂದ, ನೊಳಂಬರ ಧಾರ್ಮಿಕ ಸ್ಥಿತಿಯ ಪ್ರಗತಿಗೆ ಹೆಚ್ಚು ಸಮಯ ವಿನಿಯೋಗಿಸಿದಲ್ಲಿ, ಲಿಂಗಾಯತ ಧರ್ಮ ವ್ಯಾಪ್ತಿಯಲ್ಲಿ ಬರುವ ಸರಿಸುಮಾರು 108 ಸಮುದಾಯಗಳಲ್ಲಿ ನೊಳಂಬ ಸಮುದಾಯ ಬೇರೆಲ್ಲಾ ಸಮುದಾಯಗಳಿಗಿಂತಾ ಧಾರ್ಮಿಕವಾಗಿ ಮುಂದುವರಿದ ಸಮುದಾಯವೆಂಬ ಹೆಗ್ಗಳಿಕೆಗೆ ಪಾತ್ರವಾಗಬಹುದು. ಲಿಂಗಾಯತ ಧರ್ಮದಡಿಯ ಬೇರಾವ ಸಮುದಾಯಗಳಲ್ಲಿಯೂ ಇರದಷ್ಟು ಮಠ–ಪೀಠಗಳು ನೊಳಂಬ ಸಮುದಾಯದಲ್ಲಿ ಇರುವುದು, ನೊಳಂಬರ ಮಠಗಳೆಂದು ಗುರುತಿಸಿಕೊಂಡಿರುವ ಹನ್ನೆರಡು ಮಠ–ಪೀಠಗಳಿರುವುದು ಈ ಸಮುದಾಯದ ಪುಣ್ಯವೆಂದೇ ಹೇಳಬಹುದು. ಸಮನ್ವಯ ಸಾಧಿಸದ ಈ ಹನ್ನೆರಡು ಮಠಗಳ ಸ್ವಾಮಿಗಳ ಭಿನ್ನ ಭಿನ್ನ ಧಾರ್ಮಿಕ ನೀತಿಗಳು ಶ್ರೀಗುರು ಸಿದ್ಧರಾಮೇಶ್ವರರ ಬಸವಪ್ರಣೀತ ಶರಣ ಧರ್ಮದ ನೀತಿಗಳಿಗಿಂತ ಭಿನ್ನವಾದ, ಆಗಮೋಕ್ತ ವೈದಿಕ ಧಾರ್ಮಿಕ ನೀತಿಗಳಿಗೆ ಹತ್ತಿರದ ವ್ಯವಸ್ಥೆಯಿಂದ ಕೂಡಿದವುಗಳಾಗಿದ್ದು, ನೊಳಂಬ ಸಮುದಾಯ ಒಪ್ಪಿತವಾದ ಧಾರ್ಮಿಕ ನೀತಿಗಳ ವಿರುದ್ಧದ ಆಚರಣೆಗಳಾಗಿರುತ್ತವೆ.

ಧಾರ್ಮಿಕವಾಗಿ ಅತ್ಯಂತ ಹಿಂದುಳಿದಿರುವ ನೊಳಂಬರಿಗೆ ಇವ್ಯಾವೂ ಅರ್ಥ ಆಗದ ವಿಷಯಗಳಾಗಿರುವುದರಿಂದ, ಪ್ರಶ್ನಿಸುವ ಗೋಜಿಗೆ ಹೋಗದೆ ಇರುವುದರಿಂದ ಉತ್ತರದಾಯಿತ್ವದಿಂದ ದೂರವೇ ಉಳಿದಿರುವ ಸ್ವಾಮಿಗಳು ತಾವಾಯ್ತು ತಮ್ಮ ಮಠವಾಯ್ತು ಎಂಬಂತಾಗಿ ಅನುಯಾಯಿಗಳಿಗೆ ಏನಾದರೆ ನಮಗೇನು ಎಂದು ನಿರುಮ್ಮಳವಾಗಿರುವುದನ್ನು ಕಾಣಬಹುದು. ನಾನು ಚಿಕ್ಕವನಾಗಿದ್ದಾಗ ನಮ್ಮೂರಿಗೆ ಸ್ವಾಮಿಗಳು ಬರುತ್ತಾರೆ ಎಂಬ ಸುದ್ದಿ ತಿಳಿದಾಕ್ಷಣ ಸಂಭ್ರಮಿಸುತ್ತಿದ್ದ ಜನ ಊರಿನ ಹಾದಿಬೀದಿಗಳ ಕಸಕಡ್ಡಿ ಗುಡಿಸಿ ನೀರು ಚಿಮುಕಿಸಿ ತಳಿರು ತೋರಣಗಳಿಂದ ಶೃಂಗರಿಸಿ, ಮಂಗಳ ವಾದ್ಯಗಳನ್ನು ಮೊಳಗಿಸಿ, ಹೆಬ್ಬಾಗಿಲಿನಲ್ಲಿ ಕೈಕಟ್ಟಿ ನಿಂತ ಜನ ಭಯ, ಭಕ್ತಿ, ಗೌರವಗಳಿಂದ ಕರ್ಪೂರ ಹಚ್ಚಿ ಸ್ವಾಗತಿಸುತ್ತಿರುವುದನ್ನು ಕಣ್ಣಾರೆ ಕಂಡಿರುವ ನನಗೆ, ಇಂದು ಸ್ವಾಮಿಗಳು ಬರುತ್ತಾರೆಂದರೆ ಮೂಗು ಮುರಿದು ಉದಾಸೀನ ವ್ಯಕ್ತಪಡಿಸುತ್ತಾರೆಂದರೆ, ಇಂದಿನ ನೊಳಂಬರ ಧಾರ್ಮಿಕ ವ್ಯವಸ್ಥೆ ಎತ್ತ ಸಾಗಿದೆ ಎಂಬ ಅರಿವಾಗುತ್ತದೆ. ಇದಕ್ಕೆ ಕಾರಣ ಸ್ವಾಮಿಗಳೋ ಅಥವಾ ನೊಳಂಬಾನುಯಾಯಿಗಳೋ ? ತಿಳಿಯಲೊಲ್ಲದು.

ಅವ್ಯವಸ್ಥೆಯ ಆಗರವಾಗಿರುವ ನೊಳಂಬರ ಧಾರ್ಮಿಕ ಸ್ಥಿತಿಯನ್ನು, ಜಗದ್ಗುರು ಶ್ರೀ ಸಿದ್ಧರಾಮೇಶ್ವರರಿಂದ ಪಡೆದ, ಬಸವಣ್ಣನ ಧರ್ಮದ ನೀತಿ ನಿಯಮ ತತ್ವಸಿದ್ಧಾಂತಗಳಿಗೆ ಅನುಗುಣವಾಗಿ, ಬಳಕೆಗೆ ತರುವುದು ಇಂದಿನ ಅವಶ್ಯಕತೆಯಾಗಿರುವುದರಿಂದ, ನೊಳಂಬ ಮಠಾಧೀಶರು ಇತ್ತ ತಮ್ಮ ಚಿತ್ತ ಹರಿಸುವುದು ಸೂಕ್ತವಾಗಿದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಎಚ್ಚೆತ್ತ ನೊಳಂಬರು ತಮ್ಮ ಧಾರ್ಮಿಕ ಹಸಿವನ್ನು ಹಿಂಗಿಸಿಕೊಳ್ಳಲು ಸಮುದಾಯವನ್ನೂ ಲೆಕ್ಕಿಸದೆ ಬೇರೆ ಬೇರೆ ಪ್ರಗತಿಪರ ಚಿಂತಕ ಮಠಾಧೀಶರನ್ನು ಆಶ್ರಯಿಸಿ ತಮ್ಮ ಧಾರ್ಮಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಶ್ರಮಿಸುವುದು ದೂರವೇನೂ ಇಲ್ಲವೆಂಬ ಚಿಂತನೆ ಈ ಲೇಖಕನದು. ಇತ್ತೀಚೆಗೆ ಲಿಂಗಾಯತ ಧರ್ಮದ ಪರಿಧಿಯಲ್ಲೇ ಬರುವ, ಜನಸಂಖ್ಯಾ ದೃಷ್ಟಿಯಲ್ಲಿ ಚಿಕ್ಕ ಚಿಕ್ಕ ಸಮುದಾಯಗಳು, ತಮ್ಮದೇ ಆದ ಧಾರ್ಮಿಕ ಪೀಠಗಳನ್ನು ಸ್ಥಾಪಿಸಿಕೊಂಡು, ಶರಣ ಧರ್ಮದ ನೀತಿಗಳನುಸಾರ, ತಮ್ಮ ತಮ್ಮ ಆಚಾರ, ವಿಚಾರ, ನಡೆನುಡಿಗಳನ್ನು ಸುಧಾರಿಸಿಕೊಳ್ಳುವತ್ತ ಮುನ್ನುಗ್ಗುತ್ತಿದ್ದಾರೆ. ಆದರೆ ಕ್ರಿ.ಶ. 1196ರಿಂದ ಕ್ರಿ.ಶ. 1200ರ ಅವಧಿಯಲ್ಲಿ ಲಿಂಗಾಯತ ಧರ್ಮ ಸ್ವೀಕರಿಸಿ, ಇಷ್ಟಲಿಂಗ ಧರಿಸಿರುವ ನೊಳಂಬರು ಕ್ರಿ.ಶ. 1600ರ ನಂತರ ಸ್ಥಾಪನೆಯಾದ ವೀರಶೈವದ ಗೊಡ್ಡು ಸಂಪ್ರದಾಯದ, ವೈದಿಕ ಪುರೋಹಿತ ಆಚಾರ್ಯರ ಬಲೆಗೆ ಬಿದ್ದು ಸಮುದಾಯದ ದೀಕ್ಷಾಗುರು ಜಗದ್ಗುರು ಸಿದ್ಧರಾಮೇಶ್ವರರ ಧಾರ್ಮಿಕ ನಿರ್ದೇಶನಕ್ಕೆ ವ್ಯತಿರಿಕ್ತವಾದ ದಾರಿಯಲ್ಲಿ ಸಾಗುತ್ತಿರುವುದು ಶೋಚನೀಯವೆನಿಸುತ್ತದೆ.

ಲಿಂಗಾಯತ ಧರ್ಮ ಸ್ಥಾಪನೆಯಾದ ಒಂದುನೂರು ವರ್ಷಗಳ ನಂತರ ಹುಟ್ಟಿದ, ಸನಾತನ ಹಿಂದೂಧರ್ಮದ ವ್ಯಾಪ್ತಿಯ "ಮಾಧ್ವಪಂಥ", ಕರಾವಳಿಯ ಉಡುಪಿಯಲ್ಲಿ ಮಧ್ವಾಚಾರ್ಯರಿಂದ ಸ್ಥಾಪನೆಯಾಗಿ, ಇಂದು ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಪಂಥವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಎಂಟು ಮಠಗಳ ಒಕ್ಕೂಟ ವ್ಯವಸ್ಥೆಯ "ಸರ್ವಜ್ಞ" ಧಾರ್ಮಿಕ ಪೀಠ, ಎರಡು ವರ್ಷಕ್ಕೊಮ್ಮೆ ಪರ್ಯಾಯವಾಗಿ ಮಠಾಧಿಕಾರ ಹೊಂದುವ ಅಷ್ಠಮಠಗಳ ಸ್ವಾಮಿಗಳ ಕಾರ್ಯತತ್ಪರತೆ ಮತ್ತು ಕತೃತ್ವ ಶಕ್ತಿಯಿಂದಾಗಿ, ಆ ಸಮುದಾಯ, ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಮುನ್ನಡೆ ಸಾಧಿಸಿರುವ ನಿದರ್ಶನ ನಮ್ಮ ಕಣ್ಣ ಮುಂದಿದೆ. ಶ್ರೀಕೃಷ್ಣ ಪ್ರಜ್ಞೆಯ ಪರಾಕಾಷ್ಠೆಯನ್ನು ಹೊಂದಿರುವ ಈ ಮಧ್ವಪಂಥ ಧಾರ್ಮಿಕವಾಗಿ, ಸನಾತನ ಧರ್ಮದ ಇನ್ನಿತರ ಪಂಥಗಳಿಗೆ ಆದರ್ಶಪ್ರಾಯವಾಗಿದೆ ಎಂದು ಹೇಳಬಹುದು ಮತ್ತು ಅನುಕರಣೀಯವೂ ಹೌದು. ನೊಳಂಬ ಸಮುದಾಯ ಶ್ರೀಗುರು ಸಿದ್ಧರಾಮೇಶ್ವರರ ಧಾರ್ಮಿಕ ಪರಂಪರೆಯ ಪ್ರಜ್ಞೆ ಹೊಂದಿದವರಾಗಿ ಎಂಟುನೂರು ವರ್ಷ ಕಳೆದವರಾಗಿ, ಹತ್ತು ಹನ್ನೆರಡು ಮಠಪೀಠಗಳನ್ನು ಹೊಂದಿಯೂ, ಧಾರ್ಮಿಕವಾಗಿ ಇನ್ನೂ ಶೈಶವಾವಸ್ಥೆಯಲ್ಲಿ ಅಂಬೆಗಾಲಿಡುತ್ತಿರುವುದು ಶೋಚನೀಯ ಎಂದೆನಿಸುತ್ತದೆ. ಮಧ್ವಾಚಾರ್ಯರ ಮಾಧ್ವಪಂಥದ ಅಷ್ಠಮಠಗಳ ಒಕ್ಕೂಟ ವ್ಯವಸ್ಥೆಯ ಆದರ್ಶ ಅಧ್ಯಯನಯೋಗ್ಯವಾಗಿರುವುದರಿಂದ ನೊಳಂಬರ 'ದ್ವಾದಶ' ಮಠಗಳನ್ನು ಒಟ್ಟುಗೂಡಿ ಸಿದ್ಧರಾಮ ಪೀಠ ಸ್ಥಾಪಿಸಿ, ಎರಡು ಅಥವಾ ಮೂರು ವರ್ಷಕ್ಕೊಮ್ಮೆ ಪರ್ಯಾಯ ಪೀಠಾಧಿಕಾರ ಹೊಂದುವಂತಾದಲ್ಲಿ ನೊಳಂಬರ ಧಾರ್ಮಿಕ ನಡೆ ಶರಣ ಸಮ್ಮತವಾಗುವುದರಲ್ಲಿ ಯಾವ ಅನುಮಾನವೂ ಇರುವುದಿಲ್ಲ.

ಸಿದ್ಧರಾಮ ಪೀಠ ಸ್ಥಾಪನೆ, ನೊಳಂಬರ ದ್ವಾದಶ ಪೀಠಗಳ ಸ್ವಾಮಿಗಳಿಂದಷ್ಟೇ ಆಗಲಾರದು. ನೊಳಂಬ ಸಮುದಾಯ ಇತ್ತೀಚಿನ ವರ್ಷಗಳಲ್ಲಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ವೇಗವಾಗಿ ಅಭಿವೃದ್ಧಿ ಹೊಂದುತ್ತಲಿದ್ದು, ಬಡತನ ರೇಖೆಯ ಕೆಳಗಿನವರ ಸಂಖ್ಯೆ ಅಗಾಧವಾಗಿ ಕಡಿಮೆಯಾಗುತ್ತಿದ್ದು, ಕೆಳಮಧ್ಯಮ, ಮಧ್ಯಮ, ಮೇಲು

ಮಧ್ಯಮ ವರ್ಗದವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದ್ದು, ಐಶ್ವರ್ಯವಂತರ ಸಂಖ್ಯೆ ಹೆಚ್ಚಳವಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕ್ರಿ.ಶ. 1175ರ ನಂತರ ಶ್ರೀ ಗುರುಸಿದ್ಧರಾಮೇಶ್ವರರ ಕೃಪಾದೃಷ್ಟಿ ಬಿದ್ದ ತರುವಾಯ ಕೃಷಿ ಕಾಯಕವನ್ನೇ ತಮ್ಮ ಮುಖ್ಯ ಉದ್ಯೋಗವಾಗಿಸಿಕೊಂಡಿದ್ದವರು. ಇತ್ತೀಚಿನ ವರ್ಷಗಳಲ್ಲಿ ವಾಣಿಜ್ಯೋದ್ಯಮಿಗಳಾಗಿ, ಆಡಳಿತ ವ್ಯವಸ್ಥೆಯ ಅಧಿಕಾರಿಗಳಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗಿಯೂ ಸರಿಯಾದ ಸೂಕ್ತ ಧಾರ್ಮಿಕ ಮಾರ್ಗದರ್ಶನವಿಲ್ಲದೆ ಇರುವುದು ನೊಳಂಬರ ಧಾರ್ಮಿಕ ಸ್ಥಿತಿ ಹದಗೆಡಲು ಕಾರಣವಾಗಿದೆ. ನೊಳಂಬರ ದ್ವಾದಶ ಪೀಠಗಳ ಸ್ವಾಮಿಗಳಿಗೆ ಒತ್ತಾಸೆಯಾಗಿ ಕೆನೆಪದರಿನ ನೊಳಂಬರು ನಿಲ್ಲುವುದು ಅವಶ್ಯಕವಾಗಿದೆ. ಶೋಚನೀಯ ವಿಷಯವೆಂದರೆ ಈ ಕೆನೆಪದರಿನ (ಆರ್ಥಿಕವಾಗಿ ಸಬಲರು) ನೊಳಂಬರಿಗೆ ಇದ್ಯಾವುದೂ ಬೇಕಾಗಿಲ್ಲ. ಸ್ವಾರ್ಥಪರ ಚಿಂತನೆಯಲ್ಲೇ ಮುಳುಗಿ ಇನ್ನಷ್ಟು ಪ್ರಬಲರಾಗುವುದರಲ್ಲಿಯೇ ಮುಳುಗಿರುತ್ತಾರೆ. ಇನ್ನು ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಉನ್ನತಾಧಿಕಾರಿಗಳಾಗಿರುವವರು, ಅಧಿಕಾರದಲ್ಲಿದ್ದು ಸಾಕಷ್ಟು ಗಳಿಸಿ ನಿವೃತ್ತರಾದವರು ತಾವಾಯಿತು ತನ್ನವರಾಯ್ತು ಎಂಬ ಧೋರಣೆಯಲ್ಲಿ ಸಮುದಾಯದ ಕಡೆ ಕಣ್ಣೆತ್ತಿಯೂ ನೋಡದೆ ಇದ್ದುಬಿಡುವರು. ಸಮಾಜದ ಐಶ್ವರ್ಯವಂತರು, ಉನ್ನತಾಧಿಕಾರಿಗಳು, ಉನ್ನತಾಧಿಕಾರದಲ್ಲಿದ್ದು ಸಾಕಷ್ಟು ಗಳಿಸಿದವರು, ಸಮಾಜಾಭಿಮಾನ ಬೆಳೆಸಿಕೊಂಡು, ಸಮಾಜದ ಋಣ ತಮ್ಮ ಮೇಲಿರುವುದನ್ನು ಅರಿತು, ಋಣಮುಕ್ತಿಗೆ ಸ್ವಲ್ಪವಾದರೂ ಒಲವು ತೋರಿ, ದ್ವಾದಶ ಪೀಠಗಳ ಸ್ವಾಮಿಗಳ ಒಕ್ಕೂಟ ವ್ಯವಸ್ಥೆಗೆ ಕೈಜೋಡಿಸಿದಲ್ಲಿ "ಸಿದ್ಧರಾಮ ಪೀಠ" ಸ್ಥಾಪನೆ ಕೈಗೂಡುವುದರಲ್ಲಿ ಕಷ್ಟವಾಗಲಾರದು.

ನೊಳಂಬರಿಗೆ ಶ್ರೀಗುರು ಸಿದ್ಧರಾಮೇಶ್ವರರಿಂದ ದೊರೆತ ಶರಣ ಧರ್ಮದ ಅತಿ ಮಹತ್ವಪೂರ್ಣವಾದ ಧಾರ್ಮಿಕ ಕ್ರಿಯೆಗಳಲ್ಲಿ ಒಂದಾದ ಇಷ್ಟಲಿಂಗ ಪೂಜೆಯ ಸಮಯದಲ್ಲಿ ಹೇಳುವ ಒಂದು ವಚನ (ಮಂತ್ರ) ಈ ರೀತಿ ಇದೆ.

**"ಶರೀರ, ಮನ, ಧನವೆಂಬ ಮೂರು ಸಂಪದವನ್ನು**
**ಗುರು, ಲಿಂಗ, ಜಂಗಮಕೆ ಅರ್ಪಿಸುವೆನೆನುತಾ**
**ಮೂರುಸಲ ಅರ್ಘ್ಯವಣಿಯನು ಹಾಕಿ**
**ಮೂರು ವಿಧ ದಾಸೋಹ ಭಾವದಲಿ ನಿಲುವೆ"**

ಇದರ ಅರ್ಥ ನನ್ನ ದೇಹ, ನನ್ನ ಮನಸ್ಸು ಮತ್ತು ನನ್ನಲ್ಲಿರುವ ಸಂಪತ್ತು ಈ ಮೂರನ್ನು 'ಗುರು' ಎಂದರೆ ಅರಿವು, 'ಲಿಂಗ' ಅಂದರೆ ಧರ್ಮ, 'ಜಂಗಮ' ಎಂದರೆ ಸಮುದಾಯ, ಈ ಮೂರುವಿಧಗಳ ಅಭಿವೃದ್ಧಿಗೋಸ್ಕರ ವಿನಿಯೋಗಿಸುತ್ತೇನೆ ಎಂಬ ಭಾವದಲ್ಲಿ ನಿಲ್ಲುತ್ತೇನೆ. ಹೆಚ್ಚಿನ ನೊಳಂಬರು ಲಿಂಗದೀಕ್ಷೆಯನ್ನೇ ಹೊಂದಿಲ್ಲದಿರುವುದು, ಲಿಂಗ ದೀಕ್ಷೆ ಹೊಂದಿಯೂ ದೇಹದ ಮೇಲೆ ಧರಿಸುವುದು, ಧರಿಸಿದ್ದರೂ ದಿನಕ್ಕೊಂದು ಸಾರಿಯಾದರೂ ಪೂಜಿಸದಿರುವುದು, ಪೂಜಿಸುವುದಾದರೂ ಪೂಜಾ ವಿಧಾನ ಅರಿಯದವರಾಗಿಯೂ ಇರುವ ಹೊಣೆ ದ್ವಾದಶ ಮಠಾಧೀಶರದಾಗಿರುತ್ತದೆ.

ನೊಳಂಬ ಸಮುದಾಯದ ಉಳ್ಳವರು ತಮ್ಮ ಆದಾಯದ ಒಂದು ಭಾಗವನ್ನು ಮೇಲೆ ಹೇಳಿದಂತೆ, ಸಮುದಾಯದಲ್ಲಿ ಅರಿವು ಮೂಡಿಸಲು (ಗುರು), ಧಾರ್ಮಿಕ ಅಭಿವೃದ್ಧಿಪಡಿಸಲು, ಸಮಾಜಾಭಿವೃದ್ಧಿಪಡಿಸಲು ಮೀಸಲಿಟ್ಟಲ್ಲಿ ಸಮುದಾಯ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲು ಸಹಾಯಕವಾಗುತ್ತದಲ್ಲವೇ. ನೊಳಂಬ ಸಮುದಾಯದ ಧಾರ್ಮಿಕ ಸ್ಥಿತಿಗತಿಗಳು ಉತ್ತಮಗೊಳ್ಳಲು, ದ್ವಾದಶ ಪೀಠಗಳ ಒಕ್ಕೂಟಾಧಾರುತ 'ಕೇಂದ್ರಪೀಠ' ಒಂದರ ಅವಶ್ಯಕತೆ ತುಂಬಾ ಇರುವುದನ್ನು ಈ ಲೇಖಕ ಮನಗಂಡಿದ್ದಾನೆ. ಸಮುದಾಯದ ಧಾರ್ಮಿಕ ಮಹಾಮಹಿಮನನ್ನಾಗಿ ಶ್ರೀಗುರು ಸಿದ್ಧರಾಮೇಶ್ವರರನ್ನು ಒಪ್ಪಿಕೊಂಡಿರುವುದರಿಂದ ಆ ಮಹಾಮನೆ ಹೆಸರಿನಲ್ಲಿ ಕೇಂದ್ರಪೀಠವನ್ನು ಸ್ಥಾಪಿಸಿದಲ್ಲಿ ಸಮುದಾಯದ ಒಗ್ಗಟ್ಟು ನೂರ್ಮಡಿಯಾಗಿ, ಸಮಾನ ಧಾರ್ಮಿಕ ಮನೋಭಾವ ಬೆಳೆಯಲು ಸಹಾಯಕವಾಗುತ್ತದೆ.

ನೊಳಂಬ ಸಮುದಾಯದೊಳಗಿನ ಸಮಾನ ಮನಸ್ಸಿನ ಬುದ್ಧಿಜೀವಿಗಳು, ಪ್ರಗತಿಪರ ಮನೋಭಾವ ಉಳ್ಳವರು, ಚಿಂತಕರು ಸಮಾಜೋ ಧಾರ್ಮಿಕ ಕಳಕಳಿಯುಳ್ಳವರು, ಇತ್ತ ಗಮನ ಹರಿಸಿ, ಚಲನಶೀಲತೆಯನ್ನು ಕಳೆದುಕೊಂಡು, ಮಲೆತು ನಿಂತ ನೀರಿನಲ್ಲಿ ಕ್ರಿಮಿಕೀಟಗಳು ಉತ್ಪತ್ತಿಯಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಜನರ ಸ್ವಾಸ್ಥ್ಯ ಹಾಳಾಗುವಂತೆ, ಸಮುದಾಯದ ಸಮಾಜೋ ಧಾರ್ಮಿಕ ನೀತಿಗಳು ಸಂಪ್ರದಾಯದ ನೀತಿಗಳ ವಿರುದ್ಧವಾಧ ಶ್ರೀ ಗುರುಸಿದ್ಧರಾಮರ ಶರಣ ಸಮ್ಮತ ನೀತಿ ನಿಯಮಗಳ, ಅನುಸಾರ ನಡೆಯುವಂತಾ ವಾತಾವರಣ ನಿರ್ಮಿಸಲು ಚಿಂತೆ ಹರಿಸಬೇಕಾಗಿದೆ.

# ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ

ಕರ್ನಾಟಕ ಸರ್ಕಾರ 19 ಜನವರಿ 2024ರಂದು ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ನಂತರ ಬಂದ ಬಸವ ಜಯಂತಿ ಸಂದರ್ಭದಲ್ಲಿನ ಲೇಖನ.

ಸಾಂಸ್ಕೃತಿಕ ನಾಯಕ ಎಂದರೆ ವರ್ತಮಾನದ ಬದುಕನ್ನು ರೂಪಿಸುವ ಬಿಕ್ಕಟ್ಟಿನಲ್ಲಿ ನಮ್ಮ ನೆರವಿಗೆ ಒದಗುತ್ತಾ ಮತ್ತೆ ಮತ್ತೆ ಕಾಡುವ ವ್ಯಕ್ತಿಗಳು. ಇಂತಹವರು ವಿರಳಾತಿ ವಿರಳ. ಆದರೆ ಕರ್ನಾಟಕದ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನದಲ್ಲಿ ಕಾಣಿಸಿಕೊಂಡು ಪ್ರಭುತ್ವದ ಉನ್ನತ ಹುದ್ದೆಯಲ್ಲಿದ್ದರೂ ಅವರ ವಿರುದ್ಧವೇ ಜನಸಾಮಾನ್ಯರ ಪರವಾಗಿ ಸೆಣಸಾಡಿ ಜನತೆಯ ಹೃದಯದಲ್ಲಿ ಶಾಶ್ವತವಾಗಿ ಪ್ರತಿಷ್ಠಾಪಿಸಲ್ಪಟ್ಟ ಐತಿಹಾಸಿಕ ಮಹಾಪುರುಷ ಬಸವಣ್ಣ. ಆತ ಇಂದಿನ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ಏಕೈಕ ವ್ಯಕ್ತಿಯಾಗಿದ್ದಾನೆ. ನಮ್ಮ ನೆರೆಯ ಮಹಾರಾಷ್ಟ್ರ ಸರ್ಕಾರ ಹೇಗೆ ತನ್ನ ಶಿವಾಜಿಯನ್ನು ಸಾಂಸ್ಕೃತಿಕ ನಾಯಕ ಎಂದು ಕರೆದುಕೊಂಡಿತೋ ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಕರೆಯಲಾಗಿದೆ.

ಅಂದಿನ ಕಾಲದಲ್ಲಿ ರಾಜಪ್ರಭುತ್ವ ಇದ್ದರೂ ಅನುಭವ ಮಂಟಪವನ್ನು ಸ್ಥಾಪಿಸಿ ಅಲ್ಲಿಗೆ ಅಲ್ಲಮಪ್ರಭುವಿನಂತಹ ಶ್ರೇಷ್ಠ ಜ್ಞಾನಿಯನ್ನು ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಪರಿಚಯಿಸಿದವರು ಬಸವಣ್ಣನವರು. ಅವರನ್ನು ವಿಶ್ವಗುರು, ಜಗಜ್ಯೋತಿ, ಧರ್ಮಗುರು, ಅಣ್ಣ ಎಂದೇ ಕರೆಯಲಾಗುತ್ತಿದೆ. ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಬಸವಣ್ಣ ದೀನದಲಿತ ಶೋಷಿತ ಸಮಾಜದ ಸಮಾನತೆಗೆ ದನಿ ಎತ್ತಿದ ಭಾರತದ ಮೊಟ್ಟಮೊದಲ ನಾಯಕ. ಶ್ರೇಣೀಕೃತ ಸಮಾಜದ ಮೊದಲ ಶ್ರೇಣಿಯಲ್ಲಿ ಜನಿಸಿದ್ದರೂ ಆತ ಇವನಾರವ ಇವನಾರವ ಇವನಮ್ಮವ ಎಂದು ಹೇಳಿದ್ದೇ ಅಲ್ಲದೆ, ಮಾದರ ಚನ್ನಯ್ಯನ ಮಗ ನಾನು ಎಂದು ಸ್ವತಃ ತನ್ನನ್ನು ತಾನು ಬಣ್ಣಿಸಿಕೊಳ್ಳುವುದರ ಮೂಲಕ ತಳಸಮುದಾಯದಲ್ಲಿ ಆತ್ಮವಿಶ್ವಾಸ ತುಂಬಿ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿದ ಶ್ರೇಷ್ಠ ಶರಣ.



**ಡಾ. ಡಿ.ಎನ್.ಯೋಗೀಶ್ವರಪ್ಪ**
ಸಂಶೋಧಕ, ತುಮಕೂರು.
9448680920

ಭಾರತದ ಇತಿಹಾಸದಲ್ಲಿ ಹನ್ನೆರಡನೇ ಶತಮಾನ ಅತ್ಯಂತ ಮಹತ್ವಪೂರ್ಣವಾದುದು. ಅಜ್ಞಾನ, ಜಾತೀಯತೆ, ಮತಾಂಧತೆ, ಶೋಷಣೆ, ಮೌಢ್ಯಗಳಿಂದ ಮುಳುಗಿಹೋಗಿದ್ದ ಸಮಾಜವನ್ನು ಮೇಲಕ್ಕೆತ್ತಲು ಅರಸ ಬಿಜ್ಜಳನಿಗೆ ಪ್ರಧಾನಿಯಾಗಿದ್ದ ಬಸವಣ್ಣ ರಾಜ ಇಲ್ಲದ ಬದ್ಧತೆ ಪ್ರಶ್ನಾತೀತವಾದ ಜನಪರ ಕಾಳಜಿ ಮೂಲಕ ಮಾಡಿದ ಅತನ ಪ್ರಯತ್ನ ಪ್ರಯೋಗಗಳು ವಿಶ್ವದ ಎಲ್ಲ ಆಡಳಿತಗಾರರಿಗೆ ಆದರ್ಶವಾಗಿವೆ. ಬಸವಣ್ಣನ ತತ್ವದ ಮೂಲಧಾತುಗಳೆಂದರೆ, ಕಾಯಕ ಮತ್ತು ದಾಸೋಹ. ಕಾಯಕ ಎಂದರೆ ಕೆಲಸ ಆ ಮೂಲಕ ಉತ್ಪಾದನೆ ಸತ್ಯಶುದ್ಧ ದುಡಿಮೆಯ ಮೂಲಕ ಗಳಿಸಿದ ಉತ್ಪಾದನೆಯನ್ನು ತನಗೆಷ್ಟು ಬೇಕೋ ಅಷ್ಟನ್ನು ಬಳಸಿ, ಉಳಿದಿದ್ದನ್ನು ಸಂಗ್ರಹಿಸಿ ಇಡದೆ ಅಶಕ್ತರಿಗೆ ಅಬಲರಿಗೆ ವಿತರಣೆ ಮಾಡಬೇಕು ಇದೇ ದಾಸೋಹ. ಇದನ್ನು ಬಸವಣ್ಣ ದಾನಕ್ಕೆ ಪರ್ಯಾಯವಾಗಿ ಜಾರಿಗೆ ತರಲು ಪ್ರಯತ್ನಿಸಿದನು. ಸಂಪತ್ತಿನ ಉತ್ಪಾದನೆಯ ಶಕ್ತಿ ಎಲ್ಲರದಾಗಬೇಕು. ಕಾಯಕ ಮಾಡದ ವ್ಯಕ್ತಿ ಅಂದಿನ ಊಟಕ್ಕೆ ಅನರ್ಹನಾಗುತ್ತಾನೆ. ಕಾಯಕದಿಂದ ಗಳಿಸಿದ ಸಂಪತ್ತನ್ನು ಸಮಾನವಾಗಿ ವಿತರಣೆ ಮಾಡಬೇಕು ಎಂಬುದು ಬಸವಣ್ಣನ ಆಶಯ. ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಇಷ್ಟೊಂದು ಸರಳವಾಗಿ ಹೇಳಿದ ಮಹಾಪುರುಷ ಇನ್ನೊಬ್ಬನಿಲ್ಲ.

ಕನ್ನಡ ಭಾಷೆಯ ಬಗ್ಗೆ ಬದ್ಧತೆಯನ್ನಿಟ್ಟುಕೊಂಡಿರುವ ಎಲ್ಲರಿಗೂ ಬಸವಣ್ಣನೇ ಪ್ರೇರಕ ಶಕ್ತಿಯಾಗಿದ್ದಾನೆ. ಆತ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿದ್ದ ಸಂಸ್ಕೃತ ಭೂಯಿಷ್ಟ ಕನ್ನಡವನ್ನು ಬಿಡುಗಡೆಗೊಳಿಸಿ ಅಚ್ಚ ದೇಸೀ ಕನ್ನಡದ ಮೂಲಕ ಅದನ್ನು ಧರ್ಮಭಾಷೆಯನ್ನಾಗಿ ಮಾಡಿದ ಕನ್ನಡದ ಕಂದನಾಗಿದ್ದಾನೆ. ಅಂದು ಕನ್ನಡ ಧರ್ಮಭಾಷೆಯ ಸ್ಥಾನವನ್ನು ಪಡೆದುಕೊಂಡಿದ್ದರ ಜೊತೆಗೆ ವಿಜಾತಿಕ ಭಾಷೆಯಾಗಿ, ಸಂವಹಕ ಭಾಷೆಯಾಗಿ ಬಳಸಿಕೊಳ್ಳುವ ಮೂಲಕ ಆತ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಗಣಿತ. ಹಾಗೆ ನೋಡಿದರೆ ಕನ್ನಡ ಮಾಧ್ಯಮ ಪರಿಣಾಮಕಾರಿಯಾಗಿ ಜಾರಿಗೆ ಬಂದದ್ದೇ ಹನ್ನೆರಡನೇ ಶತಮಾನದಲ್ಲಿ ಎನ್ನುವುದು ಆಶ್ಚರ್ಯದ ಸಂಗತಿ. ಕೇವಲ ಕೆಲವೇ ಜನರ ಸ್ವತ್ತಾಗಿದ್ದ ಜ್ಞಾನವನ್ನು ಅವರಿಂದ ಬಿಡಿಸಿ ಅನುಭವ ಮಂಟಪದಲ್ಲಿ ಸರ್ವ

ಜನಾಂಗದವರಿಗೂ ಅಲ್ಲಿ ತರಭೇತಿ ನೀಡುವುದರ ಮೂಲಕ ಅವರನ್ನು ಜ್ಞಾನವಂತರನ್ನಾಗಿ ಮಾಡಿ ಆ ಮೂಲಕ ಅನುಭವ ಮಂಟಪವನ್ನೇ ಕನ್ನಡದ ಪ್ರಯೋಗಶಾಲೆಯನ್ನಾಗಿ ಪರಿವರ್ತಿಸಿದ ಅಪ್ಪಟ ಕನ್ನಡ ಭಾಷೆ ಸಂಸ್ಕೃತಿಯ ಪ್ರೇಮಿಯಾಗಿದ್ದಾನೆ ಎಂದು ಹೇಳಬಹುದು.

ಅಸಾದೃಶ್ಯವಾದ ವಚನ ಪರಂಪರೆಯ ಶ್ರೇಷ್ಠ ಪ್ರತಿನಿಧಿಯಾದ ಬಸವಣ್ಣ ಬೇಧಗಳಲ್ಲಿನ ಸಮಾಜವನ್ನು ಕೂಡಿಸುವ ಕೆಲಸ ಹನ್ನೆರಡನೇ ಶತಮಾನಕ್ಕೆ ಮಾತ್ರವಲ್ಲದೆ ಇಂದಿಗೂ ಪ್ರಸ್ತುತ. ಭಾರತದ ಸಂವಿಧಾನ ಪ್ರತಿಪಾದಿಸುವ ಆಶಯಗಳು ಬಸವ ಮಾರ್ಗದಲ್ಲಿ ಇದ್ದು ಅವುಗಳ ಅನುಸರಣೆ ಇಂದಿನ ಬಹುತೇಕ ಸಮಸ್ಯೆಗಳಿಗೆ ಉತ್ತರವಾಗಿದೆ. ಕನ್ನಡದ ಮಣ್ಣಿಗೆ ಅಥವಾ ಒಂದು ವರ್ಗಕ್ಕೆ ಸೀಮಿತವಾದ ವ್ಯಕ್ತಿತ್ವ ಬಸವಣ್ಣನದಲ್ಲ. ಕನ್ನಡದ ಮಣ್ಣಿನಿಂದ ರೂಪುಗೊಂಡು ತನ್ನ ನಡೆ ನುಡಿಯಿಂದ ಇಡೀ ವಿಶ್ವಕ್ಕೇ ಮಾದರಿಯಾದ ಚೇತನ.

ಅರಿವೇ ಗುರು, ಮಾತೆಂಬುದು ಜ್ಯೋತಿರ್ಲಿಂಗ ಮತ್ತು ದಯೆಯೇ ಧರ್ಮದ ಮೂಲವನ್ನಾಗಿ ಕಂಡ ಬಸವಣ್ಣನವರ ಪ್ರತಿಪಾದನೆಯಲ್ಲಿ ವರ್ತಮಾನದ ಅಹಿತಕರ ವಿದ್ಯಮಾನಗಳನ್ನು ಕೊನೆಗೊಳಿಸಲು ಉತ್ತರಗಳಿವೆ. ನಡೆ ಮತ್ತು ನುಡಿಯ ಮೌಲ್ಯವನ್ನು ಎತ್ತಿಹಿಡಿದ ಬಸವ ಸಂಸ್ಕೃತಿ ಸ್ಥಾಪಿತ ಸಂಸ್ಕೃತಿಯ ವಿಚಾರಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ಕಂಡು ತನ್ನದೇ ಆದ ವಿಶಿಷ್ಟ ಶರಣ ಸಂಸ್ಕೃತಿಯ ಸ್ಥಾಪನೆಗೆ ಕಾರಣವಾಗಿದೆ.

ನಾವು ಏನಾಗಿದ್ದೇವೆಯೋ, ಹೇಗಿದ್ದೇವೆಯೋ ಅದು ಸಂಸ್ಕೃತಿ. ನಮ್ಮಲ್ಲಿ ಏನಿದೆಯೋ ಅದು ನಾಗರೀಕತೆ ಎನ್ನುವುದು ಸಂಸ್ಕೃತಿಯ ಸಮಾಜಶಾಸ್ತ್ರೀಯ ಪರಿಭಾಷೆ. ಇವೆಲ್ಲವೂ ಬಸವಣ್ಣನವರಲ್ಲಿ ಅರ್ಥವತ್ತಾಗಿ ಮೇಳೈಸಿವೆ ಎಂದರೆ ಅತಿಶಯೋಕ್ತಿಯಲ್ಲ. ಸಾವಿರಾರು ವರ್ಷಗಳಿಂದ ಜಡ್ಡುಹಿಡಿದ ಗೊಡ್ಡು ಧಾರ್ಮಿಕ, ಆರ್ಥಿಕ, ಸಾಮಾಜಿಕ ಆಚರಣೆಗಳಿಗೆ ತಿಲಾಂಜಲಿ ನೀಡಿ ಹೊಸ ಧಾರ್ಮಿಕ, ಆರ್ಥಿಕ, ರಾಜಕೀಯ ಸಂಸ್ಕೃತಿಯನ್ನು ಕಟ್ಟಿದವನು ಬಸವಣ್ಣ. ದೇಹವನ್ನೇ ದೇವಾಲಯ ಸಂಸ್ಕೃತಿಯಾಗಿ ರೂಪಿಸಿ ಅಂತರಂಗ ಶುದ್ಧಿಗೆ ಆದ್ಯತೆಯನ್ನು ಕೊಟ್ಟ ಬಸವಣ್ಣ ಕಾಯಕವೇ ಕೈಲಾಸ ಎಂಬ ಮಹಾಮಂತ್ರದ ಮೂಲಕ ಆರ್ಥಿಕ ಕ್ಷೇತ್ರದಲ್ಲಿ ಸಮಾನತೆ ಸಾರುತ್ತ ಶ್ರಮಜೀವಿಗಳಿಗೆ ಮಹತ್ವ ನೀಡಿದ ಭಾರತದ ಮೊದಲ ದಾರ್ಶನಿಕನಾಗಿದ್ದಾನೆ ಈ ದೃಷ್ಟಿಕೋನದಿಂದ ಎಡಪಂಥೀಯ ವಿಚಾರವಾದಿಗಳಿಗೆ ಬಹಳ ಇಷ್ಟ, ಏಕೆಂದರೆ ಆತನ ವಿಚಾರಗಳು ಕಾರ್ಲ್‌ಮಾರ್ಕ್ಸ್‌ನಿಗೆ ಹತ್ತಿರವಾಗಿರುವುದು.

ಬಸವಣ್ಣನವರನ್ನು ಕೇವಲ ಭಾವಚಿತ್ರದ ಮೂಲಕ ಆರಾಧಿಸಿದರೆ ಸಾಲದು, ಆತ ಪ್ರತಿಪಾದಿಸಿ ನಮಗೆ ನೀಡಿರುವ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವಾಗಬೇಕು. ಬಸವತತ್ವದ ಬೀಜಗಳು ಜನಸಾಮಾನ್ಯರಿಗಿಂತಲೂ ಮೊದಲು ಪ್ರಜಾಪ್ರತಿನಿಧಿಗಳ ಎದೆಗೆ ಬೀಳಬೇಕು. ಆಗ ಕಲುಷಿತಗೊಂಡಿರುವ ಸಮಕಾಲೀನ ಸಮಾಜ ಸ್ವಲ್ಪವಾದರೂ ಸುಧಾರಿಸಲು ಸಾಧ್ಯ

---


## ಸದ್ಭಕ್ತ ಸಮಾಜ ಬಾಂಧವರಲ್ಲಿ ಮನವಿ

ನೊಳಂಬ ಲಿಂಗಾಯತ ಸಂಘ (ರಿ), ಬೆಂಗಳೂರು ವತಿಯಿಂದ ಚಿಕ್ಕಮಗಳೂರು ಜಿಲ್ಲೆ, ಕಡೂರು ಪಟ್ಟಣದಲ್ಲಿ "ಶ್ರೀಗುರು ಸಿದ್ಧರಾಮೇಶ್ವರ ಸಮುಧಾಯ ಭವನ"ದ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಕಾಮಗಾರಿ ಭರದಿಂದ ಸಾಗುತ್ತಿದೆ. ಈ ಸದುದ್ದೇಶಕ್ಕಾಗಿ ಸದ್ಭಕ್ತರಾದ ಸಮಾಜ ಬಾಂಧವರು ಭಾವ ಶುದ್ಧಿಯಿಂದ ತನು-ಮನ ಧನವನ್ನು ನೀಡುವುದರ ಮುಖೇನ ಸಮಾಜದ ಏಳಿಗೆಗೆ ತಾವು ಕೈ ಜೋಡಿಸಿ ಶ್ರೀಗುರು ಸಿದ್ಧರಾಮೇಶ್ವರರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇವೆ.

**ದೇಣಿಗೆ ನೀಡುವ ದಾನಿಗಳು ಈ ಕೆಳಕಂಡ ಖಾತೆ ಜಮಾ ಮಾಡಿ ನಮಗೆ ಮಾಹಿತಿ ನೀಡತಕ್ಕದ್ದು:**
**(ಮೊಬೈಲ್ ಸಂಖ್ಯೆ : 94480 61972/94486 39121)**

| | |
|---|---|
| **ಬ್ಯಾಂಕಿನ ಹೆಸರು** | **: ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ( ಕೆ.ಎಸ್.ಸಿ.ಬಿ)** |
| **ಖಾತೆಯ ಹೆಸರು** | **: ನೊಳಂಬ ಲಿಂಗಾಯತ ಸಂಘ (ರಿ) ಉಪಸಮಿತಿ ಕಡೂರು** |
| **ಖಾತೆಯ ಸಂಖ್ಯೆ** | **: 120003461358** |
| **ಐ.ಎಫ್.ಎಸ್.ಸಿ.ಕೋಡ್** | **: ಕೆಎಸ್‌ಸಿಬಿ0012001** |
| **ಶಾಖೆಯ ಹೆಸರು** | **: ಕಡೂರು** |

**ಇಂತಿ,**
**ಅಧ್ಯಕ್ಷರು ಹಾಗೂ ಗೌರವಾನ್ವಿತ ಸದಸ್ಯರು**
**ಉಪಸಮಿತಿ ಕಡೂರು.**

# ಶಿವಭಕ್ತಿಯ ತವನಿಧಿ ದೇವರ ದಾಸಿಮಯ್ಯ

**"ವಚನ ಮಂಟಪದೊಳಗೆ ವಚನಗಳ ಮಳೆ ಸುರಿದು**
**ಶುಚಿಹೊಂದಿ ಜಗವು ಅನುಭಾವ । ಬಿತ್ತಿದರು**
**ಉಚಿತ ಹೊಸ ಮತವು ಬೆಳೆಬಂದು"**

ವಚನ ಸಾಹಿತ್ಯವನ್ನು ಕುರಿತು ನಮ್ಮ ಜಾನಪದ ಹೆಣ್ಣುಮಗಳು ತನ್ನ ತ್ರಿಪದಿಯಲ್ಲಿ ಎಷ್ಟು ಸೊಗಸಾಗಿ ಹಾಡಿದ್ದಾಳೆ. ಶರಣರ ವಚನಗಳ ಸಂದೇಶವು ಜಗದ ಜನರ ಮನದ ಕ್ಲೇಶವೆಂಬ ಕಸವನ್ನು ಗುಡಿಸಿ, ಶುಚಿಗೊಳಿಸಿದೆ. ಶರಣ ಧರ್ಮವೆಂಬ ಹೊಸಬೆಳೆಯು ಅನುಭಾವದಡಿಯಲ್ಲಿ ಬೆಳೆದು ನಿಂತಿದೆ

ಸಾವಿರಾರು ವರುಷಗಳ ಇತಿಹಾಸ ಹೊಂದಿರುವ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನದ ಶರಣ ಸಾಹಿತ್ಯ ತನ್ನದೇ ಆದಂಥ ವಿಶಿಷ್ಟ ಛಾಪನ್ನು ಮೂಡಿಸಿದೆ. ಆ ಕಾಲಘಟ್ಟದಲ್ಲಿ ಇದ್ದಂತಹ ಧರ್ಮ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಒಂದು ಹೊಸ ಆಶಾಕಿರಣವಾಗಿ ಮೂಡಿಬಂದದ್ದು ಶರಣ ಧರ್ಮ. ಅಸಮಾನತೆ, ಮೂಢನಂಬಿಕೆ, ಜಾತೀಯತೆ, ವರ್ಗ, ವರ್ಣ, ಲಿಂಗಬೇಧಗಳಂತಹ ಅಸಮತೆಯಲ್ಲಿ ಬದುಕುತ್ತಿದ್ದ ಸಮಾಜದಲ್ಲಿನ ಕೆಟ್ಟ ರೂಢಿ ಸಂಪ್ರದಾಯಗಳನ್ನು ಕಿತ್ತೊಗೆದು ಅವುಗಳ ಮಧ್ಯೆಯೆ ಹೊಸೆದ ಹೊಸದೊಂದು ಶರಣ ಧರ್ಮದ ಹೊಂಬೆಳಕು ಉದಯಿಸಿ ಜಗವೆಲ್ಲಾ ಬೆಳಗಿದ್ದು ಒಂದು ವಿಸ್ಮಯ, ಅದ್ಭುತ ಹಾಗೂ ಆಶ್ಚರ್ಯ. ಇದರ ರೂವಾರಿ ಬಸವಣ್ಣನೇ ಆದರೂ ಇದೊಂದು ಸಮಷ್ಠಿ ಪ್ರಕ್ರಿಯೆ. ಧರ್ಮದ ಮೂಲಕವೇ ಎಲ್ಲ ಅಜ್ಞಾನ ಅಂಧಕಾರವನ್ನು ಕಳೆದು ಜ್ಞಾನಜ್ಯೋತಿಯನ್ನು ಹಬ್ಬಿದವರು ಶರಣರು. ಧರ್ಮದ ಅಡಿಪಾಯದ ಮೇಲೆ ನೈತಿಕ ಸಮಾಜವನ್ನು ಕಟ್ಟಿದ ಧೀಮಂತರು. ಸಮಸಮಾಜದ ಹೊಸ ಆಶಯವನ್ನು ಸದ್ದಿಲ್ಲದೆ ಮೂಡಿಸಿದ ಚಿಂತನಶೀಲರು. ಶರಣರು ಎಂದೂ ವಾಸ್ತವವಾದಿಗಳಾಗಿ ನಡೆ-ನುಡಿ ಒಂದಾದ ಬದುಕಿನಿಂದಲೇ ದೈವತ್ವಕ್ಕೇರಿದವರು. ಅಂಗೈಗೆ ಇಷ್ಟಲಿಂಗದ ಕುರುಹನ್ನು ಮೀರಿ, ಸಮಾಜವನ್ನು ಒಗ್ಗೂಡಿಸಿದವರು. ಜೀವಪರ ಕಾಳಜಿಯ, ಮಾನವೀಯ ಮಾನವೀಯ ಮೌಲ್ಯಗಳೇ ಮೊದಲ ದೇವರ ಪೂಜೆ ಎಂದರು. ಕಾಯಕ ದಾಸೋಹಗಳೆಂಬ ಬೀಜಮಂತ್ರವನ್ನು ಜನರ ಹೃದಯದಲ್ಲಿ ಬಿತ್ತುವುದರ ಮೂಲಕ ಸ್ವಾಭಿಮಾನ ಮತ್ತು ಸ್ವಾನುಭಾವದ ನೆಲೆಗೆ ಕರೆದೊಯ್ದವರು. ಕಾಯಕದ ಬೆವರಿನಲ್ಲಿಯೆ ಲಿಂಗಕ್ಕೆ ಮಜ್ಜನಕ್ಕೆರೆದವರು. ಅದರಲ್ಲೇ ಶಿವನೆಲೆಯನ್ನು ಕಂಡವರು. ಇಂತಹ ಶರಣರ ಅನುಭವ ಮತ್ತು ಅನುಭಾವಗಳ ಮಥನದಿಂದ ಹೊಮ್ಮಿದ ಸಾಹಿತ್ಯವೇ ವಚನ ಸಾಹಿತ್ಯ ಅಥವಾ ಶರಣ ಸಾಹಿತ್ಯ. ಇಂತಹ ವಿಶಿಷ್ಟ ಸಾಹಿತ್ಯದ ಅಧ್ಯಯನದಿಂದ ಮನುಷ್ಯನ ಮನೋಬಲ ಆತ್ಮಸ್ಥೈರ್ಯಗಳು ಹೆಚ್ಚುತ್ತವೆ.



**ಶ್ರೀಮತಿ ನಾಗರತ್ನ ಚಂದ್ರಪ್ಪ**
ಅಧ್ಯಕ್ಷರು
ಜಿಲ್ಲಾ ಕದಳಿ ಮಹಿಳಾ ವೇದಿಕೆ
ತುಮಕೂರು.
ಮೊ : 90083 30758

ಇಂತಹ ಒಂದು ಸಮಷ್ಠಿ ಪ್ರಕ್ರಿಯೆಯಲ್ಲಿ ತನ್ನದೊಂದು ಛಾಪನ್ನು ಮೂಡಿಸಿದ ಶರಣ ದೇವರ ದಾಸಿಮಯ್ಯ. ದೇವರ ದಾಸಿಮಯ್ಯ ಬಸವೋದಯಕ್ಕೆ ಮೊದಲೇ ಮೂಡಿದ ಬೆಳ್ಳಿಚುಕ್ಕಿ. ಈತನ ಕಾಲ 10ನೇ ಶತಮಾನದ ಅಂತ್ಯ ಅಥವಾ 11ನೇ ಶತಮಾನದ ಆದಿಯಲ್ಲಿ ಉದಯಿಸಿದ ಶರಣ ಕಿರಣ. ಈತನ ಕಾಲ 1008 ರಿಂದ 1050ರವರೆಗೆ ಆಳಿದ ರಾಜ ಜಯಸಿಂಹನ ಕಾಲದಲ್ಲಿದ್ದನೆಂದು ತಿಳಿದುಬರುತ್ತದೆ. ಜಯಸಿಂಹನ ಮಡದಿ ಸುಗ್ಗಲೆ ಈತನ ಶಿಷ್ಯಳಾಗಿದ್ದಳು. ಶಿವಭಕ್ತೆಯಾಗಿದ್ದ ಈಕೆಯ ಹೆಸರು ಬೇಲೂರಿನ ಶಿಲಾಶಾಸನದಲ್ಲಿ ಕಂಡುಬರುತ್ತದೆ.

ಈತನ ಬಗ್ಗೆ ತಿಳಿಯಲು ಬಸವಪುರಾಣದ 51ನೇ ಸಂಧಿಯಲ್ಲಿ ಜಯಸಿಂಹನಿಗೂ ದಾಸಿಮಯ್ಯನಿಗೂ ನಡೆದ ವಾಗ್ವಾದದ ವಿವರಣೆ ಇದೆ. ಭಾಮಿನಿ ಷಟ್ಪದಿಯಲ್ಲಿ ಬರೆದ ಈತನ ಒಂದು ಸಂಪೂರ್ಣ ಗ್ರಂಥವೂ ಇದೆ. ಮನುಪುರಾಣದಲ್ಲಿ ದಾಸಿಮಯ್ಯನ ವಿಷಯವಿದೆ. ಅಲ್ಲದೆ ರಾಘವನೆಂಬ ಕವಿ ದಾಸಿಮಯ್ಯನ ಪುರಾಣವೆಂಬ ಗ್ರಂಥವನ್ನು ರಚಿಸಿದ್ದಾನೆ. ಹರಿಹರಾಚಾರ್ಯ ತನ್ನ ಪಂಪಾಶತಕದಲ್ಲಿ ಪುರಾತನರ ಹೆಸರುಗಳ ಜೊತೆಗೆ ದಾಸಿಮಯ್ಯನ ಹೆಸರನ್ನು ಉಲ್ಲೇಖಿಸಿದ್ದಾನೆ. ಭೀಮಕವಿಯು ತನ್ನ ಬಸವಪುರಾಣದಲ್ಲಿ ಈತನ ಚರಿತ್ರೆಯನ್ನೇ ಬರೆದಿದ್ದಾನೆ. ಅಲ್ಲದೆ ಇತ್ತೀಚಿನ ಕವಿಗಳೂ ಈತನನ್ನು ಕುರಿತು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೆ ಈತನೂ 'ರಾಮನಾಥಾ' ಎಂಬ ಅಂಕಿತದಲ್ಲಿ 176 ವಚನಗಳನ್ನು, 14 ಕೃತಿಗಳನ್ನೂ ರಚಿಸಿದ್ದನೆಂದು ಮೂಲಸ್ತಂಭನ ಗ್ರಂಥದಿಂದ

ತಿಳಿದುಬರುತ್ತದೆ. ಸೋಮೇಶ್ವರ ಪುರಾಣ, ಶಿವತತ್ವ ಚಿಂತಾಮಣಿ, ಸಿದ್ದೇಶ್ವರ ಪುರಾಣ, ಚತುರಾಚಾರ್ಯ ಪುರಾಣ, ಭೈರವೇಶ್ವರ ಕಾವ್ಯದ ಸೂತ್ರರತ್ನಾಕರ ಮೊದಲಾದ ಕಾವ್ಯಗಳಲ್ಲಿಯೂ ಈತನ ದಿವ್ಯ ಚರಿತೆಯನ್ನು ಪವಾಡಗಳನ್ನೂ ಬಣ್ಣಿಸಿದ್ದಾರೆ.

ಈತನ ಜನ್ಮಸ್ಥಳ ಯಾದಗಿರಿ ಜಿಲ್ಲೆಯ 'ಮುದನೂರು' ಗ್ರಾಮ ರಾಮಯ್ಯ ಮತ್ತು ಶಂಕರಿ ಎಂಬ ಶರಣ ದಂಪತಿಗಳ ಸುಪುತ್ರ. ಈತ ಚೈತ್ರಶುದ್ಧ ಪಂಚಮಿಯಂದು ಜನ್ಮತಾಳಿದನೆಂಬುದು ಇತಿಹಾಸ. ಇವರ ಕಾಯಕ ನೇಯ್ಗೆಯ ಕಾಯಕ. ಇವರನ್ನು ದೇವಾಂಗದವರೆಂದೂ ಕರೆಯುತ್ತಾರೆ. ನಂದಿ ಒಕ್ಕಲಿಗರ ದೈವವಾದರೆ ದೇವಾಂಗ ನೇಕಾರರ ಇಷ್ಟದೈವ. ನಂದಿ ಬಸವಣ್ಣನಾಗಿ ಭೂಲೋಕಕ್ಕೆ ಬಂದರೆ, ದೇವಾಂಗ ದಾಸಿಮಯ್ಯನಾಗಿ ಧರೆಗಿಳಿದನೆಂದು ಹೇಳುತ್ತಾರೆ. ಬಿತ್ತಿ ಬೆಳೆಯುವ ದೇವರು ಬರುವ ಮುಂಚೆಯೆ ಬಟ್ಟೆ ನೇಯುವ ಗುರು ಬಂದುದು ಹೊಬ್ಬೆಯ ಪ್ರಶ್ನೆಗಿಂತ ಬಿಬ್ಬೆಯ ಪ್ರಶ್ನೆ ಮೊದಲು ಎಂದಾಗುತ್ತದೆ. ಇಲ್ಲಿ ಪ್ರಾಣಕ್ಕಿಂತ ಮಾನ ಹೆಚ್ಚು ಎಂಬುದು ಸಾಬೀತಾಗುತ್ತದೆ. ಆದ್ದರಿಂದ ಇವರಿಬ್ಬರಿಗೆ ಲೋಕವೇ ಉಪಕೃತರಾಗಿರಬೇಕು. ಅದನ್ನೇ ಸರ್ವಜ್ಞ 'ಗಾದಿ ಮೇಟಿಗಳೆರಡು ನಿಲ್ಲೆ, ಜಗದಾಟವೇ ಕೆಡುಗು ಸರ್ವಜ್ಞ' ಎಂದಿದ್ದಾನೆ.

ಮುದನೂರು ಧಾರ್ಮಿಕ ಕೇಂದ್ರವೆಂದೇ ಹೆಸರಾಗಿತ್ತು. ಇಲ್ಲಿನ ಗೋಪಾಲಸ್ವಾಮಿ ದೇವಾಲಯದ ಶಾಸನದಲ್ಲಿ 'ದಕ್ಷಿಣ ವಾರಣಾಸಿ' ಎಂದು ವರ್ಣಿಸಲಾಗಿದೆ. ಇಲ್ಲಿನ ಪ್ರಸಿದ್ಧ ದೇವಾಲಯ 'ರಾಮನಾಥನ ದೇವಾಲಯ'. ಇದಲ್ಲದೆ ಇನ್ನೂ ಅನೇಕ ದೇವಾಲಯಗಳಿವೆ ಮತ್ತು ರಾಮತೀರ್ಥ, ಲಕ್ಷ್ಮಣತೀರ್ಥ, ಪಾಂಡುತೀರ್ಥ, ಹಾಲುತೀರ್ಥ, ಸಂಗಮತೀರ್ಥ, ಮರಳುತೀರ್ಥ, ಸಕ್ಕರೆತೀರ್ಥಗಳೆಂಬ ಸಪ್ತ ತೀರ್ಥಗಳಿಂದ ಕೂಡಿದ್ದು, ಸುತ್ತಲೂ ಕಬ್ಬು, ಬಾಳೆ, ತೆಂಗು, ಕಂಗಿನ ತೋಟಗಳ ಹಸಿರಿನಿಂದ ಕೂಡಿ ಪ್ರಕೃತಿ ಮಾತೆಯೆ ಇಲ್ಲಿ ಮೈದಳೆದಿದ್ದಾಳೆಂದರೆ ತಪ್ಪಾಗಲಾರದು. ಇಂತಹ ವನಸಿರಿಯಲ್ಲಿ ದೇವರ ದಾಸಿಮಯ್ಯನ ಬಾಲ್ಯ ಪ್ರಾರಂಭವಾಗುತ್ತದೆ. ರಾಮನಾಥ ದೇವರ ಮೇಲೆ ಈತನಿಗೆ ಅಪಾರವಾದ ಭಕ್ತಿ. ಆತನನ್ನೇ ತನ್ನ ವಚನಾಂಕಿತವನ್ನಾಗಿ ಬಳಸಿಕೊಂಡಿದ್ದಾನೆ. ಮುದನೂರಿನ ಜನ ಈತನನ್ನು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ದೇವದಾಸ, ದೇವರ ದಾಸಿಮಯ್ಯ, ದಾಸಿಮಾರ್ಯ, ಜೇಡರ ದಾಸಿಮಯ್ಯ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಜೇಡರ ಎನ್ನುವುದು ಆತನ ಕಾಯಕವನ್ನು ಸೂಚಿಸುತ್ತದೆ.

ತನ್ನ ಹುಟ್ಟೂರಿನಲ್ಲಿ ಕಲಿತ ವಿದ್ಯೆಯಿಂದ ತೃಪ್ತನಾಗದ ಈತ, ಶೈವಕೇಂದ್ರವಾದ ಶ್ರೀಶೈಲಕ್ಕೆ ಬಂದು ಅಲ್ಲಿ ಪಂಡಿತಾರಾಧ್ಯ ಪೀಠದ ಮೂರನೇ ಅಧಿಪತಿಗಳಾದ, ಜ್ಞಾನ ಸಮುದ್ರವೇ ಆಗಿದ್ದಂತಹ ಶ್ರೀ ಚಂದ್ರಗುಂಡ ಶಿವಾಚಾರ್ಯರ ಬಳಿ ಬಹಳ ಶ್ರದ್ಧೆ, ನಂಬಿಕೆ, ಭಕ್ತಿ, ಭರವಸೆಗಳಿಂದ ವಿದ್ಯೆ ಕಲಿಯಲು ಪ್ರಾರಂಭಿಸುತ್ತಾನೆ. ತನ್ನ ಜ್ಞಾನ ಸಂಪಾದನೆಯನ್ನು ಸಂಪಾದಿಸಿಕೊಂಡ ದಾಸಿಮಯ್ಯ ದೇವರ ದಾಸಿಮಯ್ಯನಾಗಿ ಅಲ್ಲಿಂದ ಹೊರಡುತ್ತಾನೆ. ಆಗ ಅವನ ಗುರುಗಳು ಎಲ್ಲೆಡೆ ಶಿವಜ್ಞಾನ ಪ್ರಚಾರ ಮಾಡುವಂತೆ ಆದೇಶ ನೀಡುತ್ತಾರೆ. ಅದರಂತೆ ಆತ ಮುಂದೆ ಶಿವಜ್ಞಾನ ಪ್ರಸಾರದ ಕಾರ್ಯವನ್ನು ಕೈಗೊಳ್ಳುತ್ತಾನೆ. ದಾಸಿಮಯ್ಯನಿಗೆ ತನ್ನ ಗುರುಗಳ ಮೇಲೆ ಅತೀವ ಭಕ್ತಿ. 'ಹರ ಮುನಿಯಲ್ ಗುರು ಕಾಯ್ವನ್' 'ಹರನನ್ನು ತೋರುವವನು ಗುರುವೇ ಆಗಿರುವುದರಿಂದ' ಅವರನ್ನು ಬಹುವಾಗಿ ಗೌರವಿಸುತ್ತಿದ್ದ. ಆತನ ವಚನಗಳಲ್ಲಿ ಗುರುವಿನ ಬಗ್ಗೆಯೇ ಅನೇಕ ವಚನಗಳನ್ನು ರಚಿಸಿದ್ದಾನೆ.

**"ಉರಿವ ಕೆಂಡದ ಮೇಲೆ ಪ್ರಣವ ತಂದಿರಿಸಿದಡೆ ಆ ತೃಣವನಾ ಕೆಂಡ ನುಂಗಿದಂತೆ, ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ ಆತನ ಸರ್ವಾಂಗವೆಲ್ಲಾ ಲಿಂಗ ಕಾಣಾ ರಾಮನಾಥಾ"**

ಗುರುವಿನಿಂದ ಜ್ಞಾನವನ್ನು ಪಡೆದು ಶಿಷ್ಯನು ಶುದ್ಧನಾಗುತ್ತಾನೆಂದು ವಚನಕಾರನ ಅಭಿಪ್ರಾಯವಾಗಿದೆ. ಗುರುವಿನ ಚರಣವನ್ನು ಅಗ್ನಿಗೆ ಹೋಲಿಸಿದ್ದಾನೆ. ಅಗ್ನಿಯ ಮೇಲೆ ಯಾವುದೇ ವಸ್ತು ಹಾಕಿದರೂ ಅದು ತನ್ನ ಪೂರ್ವ ಸ್ವರೂಪವನ್ನು ಕಳೆದುಕೊಂಡು ಅದೂ ಕೂಡ ಅಗ್ನಿಯಂತೆ ಪವಿತ್ರವಾಗಿ ಹೊಳೆಯುತ್ತದೆ. ಅಂತೆಯೆ ಗುರುವಿಗೆ ಶರಣಾದ ಶಿಷ್ಯನು ತನ್ನಲ್ಲಿರುವ ಅಜ್ಞಾನ ಅಂಧಕಾರಗಳು ಭಸ್ಮವಾಗಿ, ತನುವಿಕಾರಗಳು ಕಳೆದು, ಮನಸ್ಸು ಸಾತ್ವಿಕವಾಗಿ, ಆತನಲ್ಲಿ ಜ್ಞಾನವೆಂಬ ಅಗ್ನಿ ಹೊಳೆಯುತ್ತದೆ. ಆತನೂ ಗುರುವಿನಂತೆಯೇವ ಶಿವಜ್ಞಾನ ಸಂಪನ್ನನಾಗಿ ಸರ್ವಾಂಗಲಿಂಗಿಯಾಗುತ್ತಾನೆ.

"ಘಟದೊಳಗೆ ತೋರುವ ಸೂರ್ಯನಂತೆ ಸರ್ವರಲ್ಲಿ ಶಿವಚೈತನ್ಯವಿಪ್ಪುದು ಇದ್ದರೇನು ಸರ್ವರಿಗೆ ಸಾಧ್ಯವಿಲ್ಲ ಅದ ಕೊಡುವರೆ ಗುರುವಿನಿಂದಲ್ಲದಾಗದು ಕಾಣಾ

ರಾಮನಾಥಾ'' ಪರಮಾತ್ಮನ ಚೈತನ್ಯವು ಸಕಲ ವಸ್ತುಗಳಲ್ಲಿಯೂ ಪಸರಿಸಿರುತ್ತದೆ. ಅರಿವನ್ನು ಪಡೆದುಕೊಳ್ಳಲು ಗುರುವಿನ ಅವಶ್ಯಕತೆಯಿದೆಯೆಂಬುದನ್ನು ತನ್ನ ವಚನದಲ್ಲಿ ಹೇಳಿದ್ದಾನೆ. ಇದಲ್ಲದೆ ದಾಸಿಮಯ್ಯನ ವಚನಗಳು ಶಿವಾನುಭವ ಮತ್ತು ಲೋಕಾನುಭವಗಳಿಂದ ಕೂಡಿವೆ. ಆತನ ಚಿಂತನೆಗಳು ವಾಸ್ತವಿಕತೆ ಮತ್ತು ಸರಳತೆಯಿಂದಲೂ ಕೂಡಿವೆ.

**"ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ**
**ಸುಳಿದು ಸೂಸುವ ಗಾಳಿ ನಿಮ್ಮ ದಾನ**
**ನಿಮ್ಮ ದಾನವನುಂಡು ಅನ್ಯರ ಹೊಗಳುವ**
**ಕುನ್ನಿಗಳನೇನೆಂಬೆ ಕಾಣಾ ರಾಮನಾಥಾ"**

ಸೃಷ್ಟಿ ಕೇವಲ ಸೌಂದರ್ಯವಲ್ಲ, ಅದರಲ್ಲಿ ಜೀವರ ಉಸಿರೇ ಇದೆ. ಮನುಷ್ಯ ಬರುವಾಗ ಬರಿಗೈ, ಹೋಗುವಾಗ ಬರಿಗೈ. ತಾನು ತಂದುದೇನೂ ಇಲ್ಲ, ನಡುವಲ್ಲಿ ಆ ಭಗವಂತನಿತ್ತುದ ತನ್ನ ಕಾಯಕದ ಮೂಲಕ ಅನುಭವಿಸಬೇಕು. ಶಿವಕೊಟ್ಟ ಭೂಮಿಯನ್ನು ನಾವು ಉತ್ತಿ, ಬಿತ್ತಿ ಕಷ್ಟಪಟ್ಟರೂ, ಸಕಾಲದಲ್ಲಿ ಮಳೆ ಮತ್ತು ಪ್ರಕೃತಿಯ ಸಹಕಾರವಿಲ್ಲದೆ ಪ್ರಕೃತಿ ವಿಕೋಪಕ್ಕೆ ಸಿಕ್ಕಿದರೆ ಎಲ್ಲ ಬರೀ ಗೋಳು ಮತ್ತು ಬೋಳು. ನಾನೆಂಬ ಅಹಂ ಬಿಟ್ಟು ನಿಸ್ವಾರ್ಥ, ನಿಷ್ಕಾಮಗಳಿಂದ ಕಾಯಕ ಮಾಡಬೇಕು. ಆಗ ಶಿವನ ಕರುಣೆಯಿಂದ ಭೂತಾಯಿ ಮಡಿಲ ತುಂಬ ಫಸಲು. ನಾನೆಂಬ ಹಮ್ಮು ಸೊಮ್ಮುಗಳನ್ನು ಬಿಡಬೇಕು. ಹಮ್ಮು ಅವನತಿಗೆ ಕಾರಣ ಎಂಬುದು ಆತನ ಚಿಂತನೆ.

**"ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಬುದೆ ?**
**ಕಡೆಗೀಲು ಬಂಡಿಗಾಧಾರ ಈ ಕಡುದರ್ಪವೇರಿದ**
**ಒಡಲೆಂಬ ಬಂಡಿಗೆ ನಿಮ್ಮ ಮೃಡಶರಣರ ನುಡಿಗಡಣವೆ**
**ಕಡೆಗೀಲು ಕಾಣಾ ರಾಮನಾಥಾ"**

ವಾಸ್ತವವಾದಿಯಾಗಿ ದಾಸಿಮಯ್ಯ ಕಡೆಗೀಲು ಮತ್ತು ಬಂಡಿಯನ್ನು ಮನುಷ್ಯನ ಜೀವನಕ್ಕೆ ಹೋಲಿಸಿದ್ದಾನೆ. ವ್ಯಕ್ತಿಯನ್ನು ಶಕ್ತಿಯನ್ನಾಗಿಸುವ ಬಗೆಯನ್ನು ಅರುಹುತ್ತಿದ್ದಾನೆ. ಎಷ್ಟೇ ದೃಢವಾದ ಬಂಡಿಯಾದರೂ ಅದಕ್ಕೆ ಕಡೆಗೀಲು ಇಲ್ಲದಿದ್ದಲ್ಲಿ ಅನಾಹುತ ಖಂಡಿತ, ಅಂತೆಯೆ ಶರಣರ ವಚನಗಳು ಮನುಷ್ಯನ ಜೀವನದಲ್ಲಿ ಕಡೆಗೀಲಿನಂತೆ ಕೆಲಸ ಮಾಡುತ್ತದೆ. ಆತನಲ್ಲಿ ತುಂಬಿರುವ ಮದ, ಮಾತ್ಸರ್ಯ, ಲೋಭ, ಮೋಹ, ನಾನೆಂಬ ಅಹಂಗಳನ್ನು ತೊಡೆದು ಹದುಳ ಬದುಕನ್ನು ನೀಡುತ್ತವೆ. ಈ ವಚನದಲ್ಲಿ ಆದ್ಯ ವಚನಕಾರನೆಂದೇ ಕರೆಯಲ್ಪಡುವ ಈತ 'ಶರಣರ ನುಡಿಗಡಣ' ಎಂಬ ಪದವನ್ನು ಉಪಯೋಗಿಸಿರುವುದನ್ನು ಓದಿದಾಗ, ಈತನಿಗಿಂತಲೂ ಹಿಂದೆಯೆ ವಚನಕಾರರು ಇದ್ದಿರಬೇಕೆಂಬ ಅಭಿಪ್ರಾಯ ಬರುತ್ತದೆ.

ಮನುಷ್ಯನ ಹಸಿವನ್ನು ಕುರಿತು ಬರೆದಿರುವ ದಾಸಿಮಯ್ಯನ ವಚನಗಳು ಹೆಚ್ಚು ಪ್ರಚಾರ ಹಾಗೂ ಪ್ರಖರತೆಯಿಂದ ಕೂಡಿವೆ.

**"ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ**
**ಒಡಲುಗೊಂಡವನೆಂದು ನೀನೆನ್ನ ಜಡಿದು ನುಡಿಯದಿರಾ**
**ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ"**

ಹಸಿವು ಮನುಷ್ಯನ ಮೊದಲ ಶತ್ರು, ಅದನ್ನು ನೀಗಿಸುವುದೂ ಶ್ರೇಷ್ಠ ಕಾಯಕವೇ. ಒಡಲು ಎಂದೆಂದೂ ತುಂಬದ ಕಣಜ. ಹೊಟ್ಟೆಯ ಹಸಿವು ಒಂದೆಡೆಯಾದರೆ ಮತ್ತೊಂದು ಹಸಿವು, ಪಂಚೇಂದ್ರಿಯಗಳ ಹಸಿವು. ವಿಷಯಾದಿಗಳ ಹಸಿವು ಇವುಗಳು ಮನುಷ್ಯನನ್ನು ಕಾಡುವುದು ಸಹಜ. ಅದಕ್ಕಾಗಿ ಆತ ಸುಳ್ಳು, ಮೋಸಗಳ ಹಾದಿಯನ್ನು ಅವಲಂಬಿಸುತ್ತಾನೆ. ಇದೆಲ್ಲಾ ಶಿವನದೇ ಮಾಯೆ. ನೀನಿತ್ತ ಮಾಯೆಯ ಈ ಒಡಲನ್ನು, ನಮ್ಮನ್ನು ಜರಿಯದೆ ನೀನೊಮ್ಮೆ ಧರಿಸಿ ನೋಡು ಅದರ ಪರಿಣಾಮಗಳು ನಿನಗೂ ಅರ್ಥವಾದೀತು. ತಪ್ಪಾದಲ್ಲಿ ಕ್ಷಮಿಸಬೇಕಾದವನು ನೀನೆ ಎಂದು ಆತ್ಮಸ್ಥೈರ್ಯದಿಂದ ಭಗವಂತನನ್ನು ಪ್ರಶ್ನಿಸುತ್ತಿದ್ದಾನೆ. ಪ್ರಸಾದವನ್ನು ಕುರಿತು ದಾಸಿಮಯ್ಯ;

**"ಮಹಾಘನವಪ್ಪ ಬೋನವನು**
**ಒಂದನುವಿನ ಪರಿಯಾಣದಲ್ಲಿ**
**ಹಿಡಿದು ಗುರು ಲಿಂಗವು ಒಳಗಾದ**
**ಲಿಂಗವಾರೋಗಣೆಯ ಮಾಡಿ**
**ಮಿಕ್ಕುದು ಪ್ರಸಾದವೆ ? ಅಲ್ಲಲ್ಲ**
**ಮಹಾಘನವಪ್ಪ ಲಿಂಗವನೊಂದನು**
**–ವಿನಲ್ಲಿ ತಂದಿರಿಸಿದಾತನ ಮನವೇ**
**ಪ್ರಸಾದ ಕಾಣಾ ರಾಮನಾಥಾ"**

ದಾಸಿಮಯ್ಯನ ದೃಷ್ಟಿಯಲ್ಲಿ ಪ್ರಸಾದವೆಂಬುದು ತೋರುಂಬುವುದಾಗದೆ, ಮನಸ್ಸನ್ನು ಲಿಂಗದಲ್ಲಿ ಬೆರೆಸುವುದೇ ಮಹಾಪ್ರಸಾದ. ಕೇವಲ ಹರಿವಾಣದಲ್ಲಿ ಬಗೆಬಗೆ ಭಕ್ಷ್ಯಗಳನ್ನು ದೇವರ ಮುಂದಿರಿಸುವುದು ಪ್ರಸಾದವಲ್ಲ. ನಿಜವಾದ ಪ್ರಸಾದ ಭಕ್ತನ ಮನ ಮತ್ತು ಭಾವಗಳಲ್ಲಿರಬೇಕೆಂಬ ವೈಚಾರಿಕ ಚಿಂತನೆ ಈ ಶರಣನದು.

ಈ ರೀತಿ ಶಿವಜ್ಞಾನ ಪ್ರಚಾರ ಮಾಡುತ್ತಾ ಜಂಗಮನ ರೀತಿ ಸಂಚರಿಸುವಾಗ, ಯೌವ್ವನಕ್ಕೆ ಕಾಲಿಟ್ಟ ಆತ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಮನಸ್ಸು ಮಾಡುತ್ತಾನೆ. ಒಂದು ಜಲ್ಲೆ ಕಬ್ಬು ಮತ್ತು ಮರಳು ಮಿಶ್ರಿತ ಅಕ್ಕಿಯನ್ನು ಹಿಡಿದು ಶಿವಭಕ್ತೆ ಹಾಗೂ ಬುದ್ಧಿವಂತ ಹುಡುಗಿಯನ್ನು ಹುಡುಕಲು ಪ್ರಾರಂಭಿಸುತ್ತಾನೆ. ಯಾರು ನೀರನ್ನು ಉಪಯೋಗಿಸದೆ ಪಾಯಸವನ್ನು ತಯಾರಿಸುತ್ತಾರೋ ಆಕೆಯನ್ನು ವರಿಸುವ ನಿರ್ಧಾರ ಆತನದು. ಗೊಬ್ಬೂರು ಗ್ರಾಮದ ಮಲ್ಲಯ್ಯ ಮತ್ತು ಮಹಾದೇವಿಯೆಂಬ ಶರಣ ದಂಪತಿಗಳ ಮಗಳಾದ ದುಗ್ಗಲೆ ಈತನ ಷರತ್ತಿನಲ್ಲಿ ಯಶಸ್ವಿಯಾಗುತ್ತಾಳೆ. ತನ್ನ ಶಿವಭಕ್ತಿ ಮತ್ತು ಪಾದೋದಕದ ಮಹಿಮೆಯಿಂದ ನೀರನ್ನು ಬಳಸದೆ ಪಾಯಸವನ್ನು ತಯಾರಿಸಿ ದಾಸಿಮಯ್ಯನನ್ನು ವರಿಸುತ್ತಾಳೆ. ಇದು ದುಗ್ಗಲೆಯ ಶಿವಭಕ್ತಿ ಹಾಗೂ ಪಾದೋದಕದ ಮಹಿಮೆಗೆ ಸಾಕ್ಷಿಯಾಗಿದೆ. ಈಕೆಯೂ ಕೂಡ 'ದಾಸಯ್ಯ ಪ್ರಿಯ ರಾಮನಾಥಾ' ಎನ್ನುವ ಅಂಕಿತದಲ್ಲಿ ಎರಡು ವಚನಗಳನ್ನು ರಚಿಸಿದ್ದಾಳೆ. ಈಕೆಯೆ ಕನ್ನಡದ ಪ್ರಥಮ ಕವಯಿತ್ರಿಯಾದರೂ ಕಾವ್ಯಾಂಶಗಳಿಂದ ಕೂಡಿದ ಸುಮಾರು 400 ವಚನಗಳನ್ನು ರಚಿಸಿದ ಶರಣೆ ಅಕ್ಕಮಹಾದೇವಿಯೆ ಕನ್ನಡದ ಪ್ರಪ್ರಥಮ ಕವಯಿತ್ರಿ ಎನಿಸಿದ್ದಾಳೆ. ಸತಿಯ ಮೇಲೆ ಅಪಾರವಾದ ಅಭಿಮಾನ, ದಾಸಿಮಯ್ಯನಿಗೆ ಆಕೆಯ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡ ಆತ ಸ್ತ್ರಿ ಸ್ವಾತಂತ್ರ್ಯಕ್ಕೆ ಅಂದೇ ಅಡಿಪಾಯ ಹಾಕಿದ್ದಾನೆ. ಅದಕ್ಕೆ ಅವನ ವಚನಗಳೇ ಸಾಕ್ಷಿಯಾಗಿವೆ.

**"ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆಗಳು ಬಂದರೆ ಗಂಡೆಂಬರು**
**ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ**
**ಕಾಣಾ ರಾಮನಾಥಾ"**

ನಿಜವಾದ ಶರಣನು ಎಂದೂ ಭವರಹಿತನಾಗಿರುತ್ತಾನೆ. ಇಲ್ಲಿ ವಚನಕಾರ ಬೌದ್ಧಿಕತೆ ಮತ್ತು ಭೌತಿಕತೆಗೆ ಇರುವ ವ್ಯತ್ಯಾಸವನ್ನು ಗುರುತಿಸಿ ದೇಹದೊಳಗಿರುವ ಆತ್ಮಕ್ಕೆ ಹೆಣ್ಣು ಗಂಡೆಂಬ ಯಾವ ಬೇಧವಿಲ್ಲ. ಆತ್ಮದ ನಿಲುವಿನಲ್ಲಿ ಎಲ್ಲರೂ ಸಮಾನರು, ಭಕ್ತಿಗೆ ಲಿಂಗಬೇಧವಿಲ್ಲ. ಸತಿಪತಿಗಳೆಂಬ ನಾಮ, ಕೂಟಕ್ಕಲ್ಲದೆ ಜ್ಞಾನಕ್ಕೆ ಸಲ್ಲದು ಎಂದು ದಂಪತಿಗಳ ಆತ್ಮದ ಏಕೋಭಾವದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬುದು ದಾಸಿಮಯ್ಯನ ಅನಿಸಿಕೆ. ಈ ಏಕೋಭಾವದ ಪೂಜೆ ಭಗವಂತನ ಮುಂದೆ ಸದಾ ಉರಿಯುವ ನಂದಾದೀಪ. ಇದಕ್ಕೆ ಸಂಸಾರದಲ್ಲಿ ಶಾಂತಿ, ಸಮಾಧಾನ, ಸಹನೆ, ಪರಸ್ಪರ ಅರಿವು ಸಹಕಾರದಿಂದ ಕೂಡಿದ ಸಮರಸ ಮುಖ್ಯವಾಗುತ್ತದೆ. ಇದನ್ನು ಆತನ ಸಂಸಾರದಲ್ಲಿ ಇದ್ದುದನ್ನು ಈ ವಚನದ ಮೂಲಕ ಅಭಿವ್ಯಕ್ತಿಸಿದ್ದಾನೆ.

**"ಬಂದುದನರಿದು ಬಳಸುವಳು**
**ಬಂದುದ ಪರಿಣಾಮಿಸುವಳು**
**ಬಂಧು ಬಳಗವ ಮರೆಸುವಳು**
**ದುಗ್ಗಲೆಯ ತಂದು ಬದುಕಿದೆನು"**

ಜೀವನದಲ್ಲಿ ಸ್ತ್ರೀಯರಿಂದಲೇ ಪರಿಪೂರ್ಣವಾಗುತ್ತದೆ ಎಂಬುದನ್ನು ಪರೋಕ್ಷವಾಗಿ ಹೇಳಿಕೊಂಡಿದ್ದಾನೆ.

ತನ್ನದೇ ಚಿಂತನೆಗಳನ್ನು, ಸಂದೇಶಗಳನ್ನು ವಚನ ರಚನೆಯ ಮೂಲಕ ಹೇಳುತ್ತಾ, ತನ್ನ ಕಾಯಕದಲ್ಲಿ ತೊಡಗಿರುವಾಗ ಒಂದು ದಿನ ಕೂತು ಬಹಳ ಶ್ರದ್ಧೆಯಿಂದ, ರಾಮನಾಥನ ನೆನಹಿನಲ್ಲೇ ತನ್ಮಯನಾಗಿ ಸುಂದರವಾದ ವಸ್ತ್ರವನ್ನು ನೇಯುತ್ತಾನೆ. ಅದರ ಅಂದ ಚಂದವನ್ನು ಕಂಡು ಆತನೇ ವಿಸ್ಮಿತನಾಗಿ "ಇದ ನೆಯ್ಯುವ ನಾನೋ ನೀನೋ ರಾಮನಾಥಾ" ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ.

ಅದನ್ನು ಮಾರಲು ಪೇಟೆಗೆ ಕೊಂಡೊಯ್ದಾಗ ಎಲ್ಲರೂ ಅದರ ಅಂದವನ್ನು ನೋಡಿ ಆನಂದಿಂದ ಕಣ್ತುಂಬಿಕೊಂಡರೇ ಹೊರತು, ಕೊಳ್ಳಲು ಯಾರೂ ಮುಂದೆ ಬರಲಿಲ್ಲ. ನಿರಾಶನಾಗಿ ಮನೆಗೆ ಹಿಂದಿರುಗುವಾಗ ದಾರಿಯಲ್ಲಿ ಹಣ್ಣು ಹಣ್ಣು ಮುದುಕನೊಬ್ಬ ಚಳಿಯಿಂದ ನಡುಗುತ್ತಿದ್ದು, ಹೊದೆಯಲೇನಾದರೂ ಕೊಡುವೆಯಾ ಎಂದಾಗ, ದಾಸಿಮಯ್ಯ ತನ್ನಲ್ಲಿದ್ದ ಅದ್ಭುತವಾದ ರೇಷ್ಮೆ ವಸ್ತ್ರವನ್ನೇ ಕೊಡುತ್ತಾನೆ. ಆಗ ಆತ ಇಷ್ಟು ಬೆಲೆ ಬಾಳುವ ವಸ್ತ್ರ ಬೇಡ, ಯಾವುದಾದರೂ ಹಳೆಯ ಹರಕು ಬಟ್ಟೆಯನ್ನು ಕೊಡು ಎಂದಾಗ, ಅದು ಒಮ್ಮೆ ನಿಮಗೆ ಅರ್ಪಿತವಾದ ಮೇಲೆ ಅದು ನಿಮ್ಮದೇ ಎನ್ನುತ್ತಾನೆ. ನಂತರ ಮುದುಕ ಅದನ್ನು ಹರಿದು ಚಿಂದಿ ಚಿಂದಿ ಮಾಡಿ ಕೈಕಾಲುಗಳಿಗೆ ಸುತ್ತಿಕೊಳ್ಳುತ್ತಾನೆ. ಅದಾವುದಕ್ಕೂ ಬೇಸರಿಸದೆ ಮನೆಗೆ ಬಂದ ದಾಸಿಮಯ್ಯ ದಂಪತಿಗಳು ಇದ್ದುದನ್ನೇ ಪ್ರಸಾದವಾಗಿ ಸ್ವೀಕರಿಸಿ ಮಲಗುತ್ತಾರೆ. ಬೆಳಗಾಗೆದ್ದು ಶಿವನ ಸ್ಮರಣೆಯನ್ನು ಮಾಡುತ್ತಾ ನೋಡಿದರೆ ಮನೆಯ ವಾತಾವರಣವೇ ಬದಲಾಗಿದೆ. ಮನೆ ಹೊಸದಾಗಿದೆ, ಮೂಲೆ ಮೂಲೆಗಳಲ್ಲಿ ದವಸ ಧಾನ್ಯದ ಮೂಟೆಗಳು ತುಂಬಿವೆ. ಭಕ್ತನಿಧಿಯಾಗಿದ್ದ ಆ ಮನೆಗೆ ತವನಿಧಿ ಬಂದಿದೆ. ಎಷ್ಟು ಕೊಟ್ಟರೂ ಮುಗಿಯದ ಧಾನ್ಯ ಸಂಪತ್ತು, ಮನೆಯೆ ಅಕ್ಷಯಪಾತ್ರೆಯಾಗಿದೆ. ಮುದುಕನ

ವೇಷದಲ್ಲಿದ್ದ ಶಿವ ದಾಸಯ್ಯನ ಭಕ್ತಿಗೆ ಮೆಚ್ಚಿ ಆತನಿಗೆ ತವನಿಧಿಯನ್ನು ನೀಡಿದ್ದಾನೆ. ಈ ಘಟನೆಯನ್ನು ಕುರಿತು ಬಸವಣ್ಣನವರು 'ದಾಸದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ' ಮತ್ತು 'ದಾಸನ ವಸ್ತ್ರವ ಬೇಡುವ ಮುನ್ನ ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ' ಎಂದು ದೇವರನ್ನೇ ಕುರಿತು ಕೇಳಿದ್ದಾನೆ. ಅಲ್ಲದೆ ದಾಸನ ವಸ್ತ್ರ ಬೇಡುವುದೊಂದು ಗರುವತನವೆ ? ಎಂದು ಆತನನ್ನೇ ಪ್ರಶ್ನಿಸಿದ್ದಾನೆ. ಭಕ್ತಿ ಎಂತಹದಯ್ಯ ದಾಸಯ್ಯ ಮಾಡಿದಂತಹುದಯ್ಯಾ ಎಂದು ಅನೇಕ ಬಾರಿ ದಾಸಯ್ಯನ್ನು ಸ್ಮರಿಸಿದ್ದಾರೆ.

ದಾಸಿಮಯ್ಯ ದುಗ್ಗಳೆಯರ ಕೀರ್ತಿ ಮುದನೂರನ್ನು ದಾಟಿ ದಶದಿಕ್ಕುಗಳಿಗೂ ಹರಡಿದೆ. ಜನತೆಯೆ ಆತನನ್ನು ಧರೆ ಕೊಂಡಾಡುವ ದಾಸಿಮಯ್ಯ ಎಂಬ ವಿಶೇಷಣದಿಂದ ಕರೆಯುತ್ತಿದ್ದರು. ಹೆಣ್ಣುಮಕ್ಕಳು ಕುಟ್ಟುವಾಗ, ಬೀಸುವಾಗ, ಕೂಸನ್ನು ಮಲಗಿಸುವಾಗ, ಹಾಗೆ ಗಂಡುಮಕ್ಕಳು ಉತ್ತುವಾಗ, ಬಿತ್ತುವಾಗ, ಒಕ್ಕುವಾಗ, ಜಗದೀಶ್ವರ ತಾನೇ ಕೊಳ್ಳಲು ಬಂದ ದೇವಾಂಗದೊಸ್ತರವ ಎಂದು ಹಾಡುತ್ತಿದ್ದರು. ಹೀಗೆ ಶಿವಕೃಪೆ, ತವನಿಧಿ, ರಾಜಮನ್ನಣೆ ಜೊತೆಗೆ ಆದರ್ಶ ಸಹಿ ಎಲ್ಲವೂ ಸೇರಿ ದಾಸಿಮಯ್ಯನದು ಪರಿಪೂರ್ಣತ್ವದ ಜೀವನವಾಗಿತ್ತು. ದಾಸಿಮಯ್ಯನ ಜೀವನದಲ್ಲೇ ಅನೇಕ ಪವಾಡಗಳನ್ನೇ ಕಾಣುತ್ತೇವೆ. ಈ ಪರಿಪೂರ್ಣತೆ ಆತನ ಮನದ ಮೂಲೆಯಲ್ಲಿ ಒಂದು ಸಣ್ಣ ಮಮಕಾರ (ಅಹಂ) ಉದಿಸುತ್ತದೆ ಎಂದೆನಿಸಿದ ಶಿವನು, ಲಿಂಗಸೂಗೂರಿನ ಕಂದಗಲ್ಲು ಗ್ರಾಮದ ಶಂಕರದಾಸಿಮಯ್ಯನೆಂಬ ಸೂಜಿ ಕಾಯಕದ (ಕೌದಿ ಹೊಲೆಯುವ) ಶರಣನ ಕನಸಿಗೆ ಹೋಗಿ 'ಮಗನೆ ಮುದನೂರಿಗೆ ಹೋಗು, ಉಪಾಯದಿಂದ ದಾಸಿಮಯ್ಯನ ಹಮ್ಮು ಕರಗುವಂತೆ ಮಾಡು' ಎಂದು ಹೇಳುತ್ತಾನೆ. ಶಿವನಾಜ್ಞೆಯಂತೆ ಶಂಕರದಾಸಿಮಯ್ಯನು ತನ್ನ ಸೇವಕ ವಕ್ತ್ರಪಾದನೊಂದಿಗೆ ಮುದನೂರಿಗೆ ಬರುತ್ತಾನೆ. ಆತನ ಕಣ್ಣಿಗೆ ಮುದನೂರು ಕಂಡ ಬಗೆಯನ್ನು ಈ ರೀತಿ ವರ್ಣಿಸಿದ್ದಾನೆ. ಆತನ ಕಣ್ಣಿಗೆ ಸಾತ್ವಿಕತೆಯ ಸ್ವರ್ಗದ ವೈಭೋಗವನ್ನೇ ನೀಡುತ್ತಿತ್ತು ಆ ಊರು.

**"ನೋಡಿದರ್ಗೆ ಶೈವ ಸಂಪದನೀವುತುಂ ನುಡಿಸಿದರ್ಗೆ**
**ಧರಣೀಶೈರತ್ವಮಂ ಕರುಣಿಸುತ್ತಂ, ಮೆಚ್ಚಿದ ಪ್ರಾಣಿಗಳಂ**
**ಸ್ವರ್ಗಕ್ಕೆ ಕಳಿಪುತ್ತುಂ, ಮುಟ್ಟಿದರಂ ಮುಕ್ತಿಪಥಕ್ಕೆ**
**ಸಲಿಸುತ್ತುಂ ಕೆಲವೆಡೆಗೆಯ್ದು ಪಲವೊರ್ಗಳಂ ಕಳೆದು**
**ಭಕ್ತಿರಸಂ ಮಡುಗಬ್ಬಿದಂತಿರ್ದ ಮುದನೂರ"**

ಹೀಗೆ ಕಂಡ ಮುದನೂರಿನಿಂದ ದಾಸಿಮಯ್ಯನಿತ್ತ ಧಾನ್ಯವನ್ನು ಬಂಡಿಗಳಲ್ಲಿ, ಎತ್ತಿನ ಮೇಲೆ, ಕುದುರೆಯ ಮೇಲೆ, ಕತ್ತೆಯ ಮೇಲೆ, ನೆತ್ತಿಯ ಮೇಲೆ ಹೇರಿಕೊಂಡು ತಂಡೋಪತಂಡವಾಗಿ ಬರುತ್ತಿದ್ದರು. ಅದನ್ನು ನೋಡಿದ ಶಂಕರ ದಾಸಿಮಯ್ಯನಿಗೆನ ದಾಸಯ್ಯನ ಮಮಕಾರಕ್ಕೆ ಕಾರಣ ತಿಳಿಯಿತು.

ಶಂಕರ ದಾಸಿಮಯ್ಯ ಊರಿಗೆ ಬಂದ ಸುದ್ದಿ ತಿಳಿದೊಡನೆ ದಾಸಿಮಯ್ಯ ದಂಪತಿಗಳು ಮತ್ತು ಪುರಜನರು ಅವರನ್ನು ಸಂಭ್ರಮದಿಂದ ಸ್ವಾಗತಿಸಿತು. ಎಲ್ಲಾ ಒಂದೆಡೆ ಸೇರಿ ಸಾಕಷ್ಟು ಸಮಯ ಶಿವಾನುಭವಗೋಷ್ಠಿಯನ್ನು ನಡೆಸಿದರು. ನಂತರ ರಾತ್ರಿಯ ಆರೋಗಣೆಗೆ ಭಿಕ್ಷೆಯನ್ನು ತರಲು ತನ್ನ ಸೇವಕ ವಕ್ತ್ರಪಾದನಿಗೆ ಶಂಕರ ದಾಸಿಮಯ್ಯ ಹೇಳಿದಾಗ, ಸಹಜವಾಗಿ ದಾಸಿಮಯ್ಯ 'ಶಿವ ಭಕ್ತರಿಗಿಂತ ಹಿರಿಯರಿಲ್ಲ, ಎನಗಿಂತ ಕಿರಿಯರಿಲ್ಲ" ಎನ್ನುವ ನುಡಿಯನ್ನು ಮರೆತು; ಭಾಸ್ಕರಂಗೆ ಬೆಳಗಂ ಕುಡುವಂತೆ, ವಹ್ನಿಗೆ ಉಷ್ಣವಂ ಕೊಡುವಂತೆ, ಶೀತಕರಂಗೆ ತಂಪನೀವಂತೆ, ಆರೋಗಣೆಗೆ ಧಾನ್ಯವಂ ತರಲೇಕೆ ! ಎನ್ನ ಮನೆಯಲ್ಲಿಯೆ ಸಾಕಷ್ಟಿದೆ. ನೀವು ನಮ್ಮವರು, ಹೊರಗೆ ಭಿಕ್ಷೆಗೆ ಹೋಗಲೇಕೆ, ನಿಮಗೆ ಎಷ್ಟು ಬೇಕಾದರೂ ಕೊಡುತ್ತೇನೆ ಎಂದಾಗ; ಇದೇ ಸಮಯಕ್ಕಾಗಿ ಕಾಯುತ್ತಿದ್ದ ಶಂಕರ ದಾಸಿಮಯ್ಯ "ನಿಜ ದಾಸಯ್ಯ, ನೀವು ತವನಿಧಿಯುಳ್ಳವರು, ಸಿರಿವಂತರು, ನಾವು ತಿರಿದುಂಬುವ ದರಿದ್ರರು. ಏನು ಮಾಡುವುದು, ನಮ್ಮ ದೇವರು ತಿರುಕ, ನಮಗೆ ಸಿರಿವಂತಿಕೆ ಎಲ್ಲಿಂದ ಬರಬೇಕು. ನಿಮ್ಮ ದಾನ ಬುದ್ಧಿ ಹೆಚ್ಚಿನದು. ನೀವು ಕೊಡುವೆನೆಂದುದೇ ಸಾಕು. ನಿಮ್ಮ ತವನಿಧಿಯ ಮಹಿಮೆಯಂಥದೋ ನಿಮ್ಮಿಂದ ಧಾನ್ಯ ದೊರೆತು ಉಪಕೃತರಾದೆವು" ಎಂದಾಗ; ದಾಸಿಮಯ್ಯನಿಗೆ ಮನಕ್ಕೆ ಮಾತು ಚುಚ್ಚಿ ಏನೋ ತಪ್ಪಾಯಿತೆಂದು ಪಶ್ಚಾತ್ತಾಪ ಪಡುತ್ತಾನೆ. ತವನಿಧಿಯಿಂದ ತನಗೆ ಸಿಕ್ಕಿದ್ದು ತನಗರಿವಿಲ್ಲದಂತೆ ಮಾಡಿದ ಹಮ್ಮು. ಇದು ನಮ್ಮ ಸರ್ವ ಪತನಕ್ಕೆ ಕಾರಣವಾಯಿತು ಎಂದು ದುಗ್ಗಲೆಯ ಬಳಿ ನಡೆದ ವಿಷಯವನ್ನೆಲ್ಲಾ ಹೇಳಿದಾಗ; ದುಃಖದಿಂದ ಇದೇನು ಮಾಡಿದಿರಿ,

**"ಬೇಡುವರೆ ಶಿವಪೂಜಕರು ? ನಾ**
**ಡಾಡಿ ಮಾನವರೊ ? ಅವರೊಳಿಂ**
**ಕಾಡಬಹುದೆ ? ಅವರಿಗಿಂ ಸಿರಿಯುಳ್ಳವರೆ ನೀವು ?**
**ರೂಢಿಸುವ ಮೋಕ್ಷವನು ದೇವರ**
**ಬೇಡಿಕೊಳ್ಳದೆ ನೆಲ್ಲನು**
**ಬೇಡಿಕೊಂಡರಿಗೇಕೆ ಮಾಹೇಶ್ವರೊಳಗೆ ಹಮ್ಮು"**

ಎಂದು ನುಡಿಯುತ್ತಾಳೆ. ಪಶ್ಚಾತ್ತಾಪದಿಂದ ನೊಂದ ದಂಪತಿಗಳೀರ್ವರು ಶಂಕರದಾಸಿಮಯ್ಯನ ಮನೆಗೆ ಹೋಗಿ ಅವರ ಅಡಿಗೆರಗಿ ತಮ್ಮ ತಪ್ಪನ್ನು ಮನ್ನಿಸೆಂದು ಬೇಡಿಕೊಂಡಾಗ ಕರುಣೆಯಿಂದ ಕರಗಿದ ಶಂಕರ ದಾಸಿಮಯ್ಯ, ಅವರನ್ನು ಹಿಡಿದೆತ್ತಿ ಗೌರವದಿಂದ ಉಪಚಾರ ಗೈಯ್ಯುತ್ತಾನೆ. ಅಲ್ಲದೆ ತನ್ನ ಸತಿ ಶಿವದಾಸಿಗೆ ಹೇಳಿ ಪ್ರಸಾದವನ್ನು ಸಿದ್ಧಗೊಳಿಸಿ ಎಲ್ಲ ಶರಣ ಗಣಂಗಳನ್ನು ಬರಮಾಡಿ ದಾಸೋಹವನ್ನು ನಡೆಸುತ್ತಾನೆ. ಇದರಿಂದ ದಾಸಿಮಯ್ಯ ದಂಪತಿಗಳು ಧನ್ಯರಾಗಿದ್ದರು. ಪ್ರಸಾದ ಸೇವನೆಯಿಂದ ಪರಮಾನಂದಭೂತರಾದ ಅವರು ತಮ್ಮ ಮನೆಗೆ ಹಿಂತಿರುಗಿ ಬಂದು ನೋಡಿದಾಗ ತವನಿಧಿ ಮುನ್ನಿಗಿಂತಲೂ ಇಮ್ಮಡಿಯಾಗಿದೆ. ಅದಕ್ಕಿಂತಲೂ ಹೆಚ್ಚಾಗಿ ಅವರಿಗೆ ಮತ್ತೊಂದು ತವನಿಧಿ ಸಿಕ್ಕಿದೆ, ಅದೇ ನಿಷ್ಕಾಮ, ನಿರಹಂಭಾವದ ತವನಿಧಿ. ಇದಕ್ಕೆ ಎಣೆಯುಂಟೆ ? ನಿರಹಂಕಾರವೆ ಆತ್ಮದರ್ಶನಕ್ಕೆ ದ್ವಾರ. ಇವರ ಅನ್ಯೋನ್ಯತೆಯಿಂದ ದಾಂಪತ್ಯಕ್ಕೆ ಒಂದು ಹೊಸ ವಿಶೇಷತೆ ಬಂದಿದೆ. ಸಂಸಾರ ಹೆಚ್ಚೊ ? ಸನ್ಯಾಸತ್ವ ಹೆಚ್ಚೊ ? ಎನ್ನುವ ಮಾತಿಗೆ ತಮ್ಮಜ ನಡತೆಯಿಂದ ಉತ್ತರ ಕೊಟ್ಟವರು. ಸದಾ ಶಿವನ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು, ಅದನ್ನು ತನ್ನ ವಚನದಲ್ಲಿ;

**"ಕಾಯ ನಿಮ್ಮದಾನ, ಜೀವ ನಿಮ್ಮದಾನ, ಕಾಯ ಉಳ್ಳಲ್ಲಿಯೆ ನಿಮ್ಮ ಪೂಜಿಸದ ನಾಯಿಗಳನೇನೆಂಬೆ ರಾಮನಾಥಾ"**

'ಕಾರ್ಯ ಕಾರಣ ಸಾಧನಂ ಶರೀರಂ' ಮನುಷ್ಯ ಏನನ್ನಾದರೂ ಸಾಧಿಸಲು ಕಾಯಕದ ಮೂಲಕವೇ ಸಾಧಿಸಬೇಕು. ಜೀವ ಇದ್ದಾಗಲೇ ಕಾಯಕದ ಮೂಲಕವೇ ಸಾಧಿಸಬೇಕು. ಜೀವ ಇದ್ದಾಗಲೇ ಕಾಯಕ್ಕೆ ಬೆಲೆ. ಜೀವಕ್ಕೆ ಕಾಯವೇ ಆಧಾರ. ಆದ್ದರಿಂದ ಮರಣ ಬರುವ ಮುನ್ನವೆ ಸತ್ಕಾರ್ಯಗಳನ್ನು ಮಾಡಬೇಕು. ಜನನ ಮರಣಗಳ ನಡುವಿನ ಜೀವನ ಸಾಧನೆ ಮಾಡಲು ದೇವರು ಕೊಟ್ಟ ಒಂದು ಅವಕಾಶ ಎಂದರಿಯಬೇಕು.

ದೇವರ ದಾಸಿಮಯ್ಯನ ವಚನಗಳಲ್ಲಿ ಲೋಕಾನುಭವ, ಶಿವಾನುಭವ ಮತ್ತು ವಸ್ತುಸ್ಥಿತಿಯ ವಿವರಣೆ ಇದೆ. ಕ್ರಿಯೆ ಮತ್ತು ಜ್ಞಾನಗಳು ಅನ್ಯೋನ್ಯ ಸಾಪೇಕ್ಷಗಳು ವೇಷಕ್ಕೆ ಅಂಜಿ, ದೋಷಕ್ಕೆ ಹೇಸಿ ನಡೆಯಬೇಕು. 'ಪರಿಶುದ್ಧ ಕಾಯಕವಿಡಿದು ಪವಿತ್ರ ಜೀವನ ನಡೆಸಬೇಕು'. ಮುಂತಾದ ಈತನ ಉಕ್ತಿಗಳು ಮುಂದೆ ಶರಣ ಧರ್ಮದ ತತ್ವಗಳಿಗೆ ಅಡಿಪಾಯವಾಗಿವೆ ಎಂದರೆ ತಪ್ಪಾಗಲಾರದು.

ದೇವರ ದಾಸಿಮಯ್ಯ ಮತ್ತು ದುಗ್ಗಳೆ ದಂಪತಿಗಳಿಗೂ ಒಬ್ಬ ಮಗನಿದ್ದನೆಂದೂ, ಅವರ ಹೆಸರು ವಿರೂಪಾಕ್ಷನೆಂದೂ, ಅವನು ಮಠಾಧೀಶನಾಗಿ, ಯಶೋಭರಿತನಾಗಿ, ಕೊಂಡುಗುಳಿಯ ಕೇಶಿರಾಜನ ದೀಕ್ಷಾಗುರುವಾಗಿ ಮೆರೆದನೆಂದು ತಿಳಿದುಬರುತ್ತದೆ.

**"ಕುಲಸ್ವಾಮಿ ನೀ ನಿಂದ ಹೆಜ್ಜೆಯಲ್ಲದೆ**
**ನಾನೊಂದು ಹೆಜ್ಜೆಯನಿಡನಯ್ಯಾ**
**ಎನಗೊಂದು ಹೆಜ್ಜೆಯಿಲ್ಲ**
**ನಿನ್ನ ಹೆಜ್ಜೆ ನನ್ನ ಹೆಜ್ಜೆ ಒಂದಾದ ಬೇಧವ**
**ಜಗದ ಅನ್ಯಾಯಿಗಳೆತ್ತ ಬಲ್ಲರೈ ರಾಮನಾಥಾ"**

ಭಕ್ತಿಯಿಂದ ಭಗವಂತನಲ್ಲಿ ನಂಬಿಕೆ ಇಟ್ಟು, ಆತನಿಟ್ಟಂತೆ ಇದ್ದು ಮತ್ತೊಂದು ಯೋಚಿಸದೆ ಬದುಕಿದ್ದ ರಾಮನಾಥಾ, ಕೊನೆಯಲ್ಲಿ ದಾಸಿಮಯ್ಯ ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು, ಹಿರಿಯಬಾರದ ಬಯಲನ್ನು ಬೆರೆದು ತಾನೂ ಬಯಲಾದ". ಇಂಥಹ ಮಹಶಿವಶರಣರ ದಿವ್ಯಪಾದದ ಗುರುತು ನಮ್ಮ ಬಾಳದಾರಿಯ ಹೆಗ್ಗುರುತಾಗಲಿ.

**ಮನವಿ : ನೊಳಂಬವಾಣಿ ಪತ್ರಿಕೆಯು ಪ್ರತಿ ಮೂರು ತಿಂಗಳಿಗೊಮ್ಮೆ ಜನವರಿ – ಮಾರ್ಚ್, ಏಪ್ರಿಲ್ – ಜೂನ್, ಜುಲೈ – ಸೆಪ್ಟಂಬರ್ ಮತ್ತು ಅಕ್ಟೋಬರ್– ಡಿಸೆಂಬರ್ ಕೊನೆಯ ವಾರದಂದು ಪ್ರಕಟಣೆಯಾಗಿ ಆ ತಿಂಗಳ ಕೊನೆಯ ದಿನಾಂಕಗಳೊಳಗೆ ಪೋಸ್ಟ್ ಮಾಡಲಾಗುತ್ತದೆ. 10ನೇ ತಾರೀಖಿನೊಳಗೆ ನಿಮ್ಮ ಮನೆ ಬಾಗಿಲಿಗೆ ಪತ್ರಿಕೆ ಬಂದು ತಲುಪುತ್ತದೆ. ಒಂದು ವೇಳೆ ಪತ್ರಿಕೆ ಸರಿಯಾಗಿ ತಲುಪದಿದ್ದರೆ ಅಥವಾ ವಿಳಂಬವಾದರೆ ಅಥವಾ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ, ಜಾಹೀರಾತು ವರದಿ ಇತ್ಯಾದಿಗಳು ಅಪಥ್ಯವಾಗಿದ್ದರೆ ನಮ್ಮ ಕಛೇರಿಗೆ ಲಿಖಿತವಾಗಿ ಬರೆದು ತಿಳಿಸಿ ನಾವು ಅದನ್ನು ಪರಿಶೀಲಿಸಿ ನಮ್ಮಿಂದ ಏನಾದರೂ ಲೋಪ ದೋಷಗಳಿದ್ದಲ್ಲಿ ತಿದ್ದಿಕೊಳ್ಳುತ್ತೇವೆ. ಅನಾವಶ್ಯಕ ಚರ್ಚೆ, ವಾಗ್ವಾದ, ಜಗಳ ಬೇಡವೇ ಬೇಡ. ನಿಮ್ಮ ಅಭಿಪ್ರಾಯಗಳನ್ನು ನಾವು ಗೌರವಿಸುತ್ತೇವೆ. ಹಾಗೂ ಬದಲಾದ ತಮ್ಮ ವಿಳಾಸಗಳನ್ನು ಪತ್ರಿಕೆಗೆ ತಿಳಿಸಲು ಕೋರುತ್ತೇವೆ.**

# ನೊಳಂಬ ದೇವಾಲಯಗಳು

**ಇಂದ್ರ :** ಇಲ್ಲಿ ಚಂದ್ರನ ದಿಕ್ಕನ್ನು ಸರಿಯಾಗಿಯೇ ತೋರಿಸಲಾಗಿದೆ. ಪೂರ್ವದಿಕ್ಕಿನ ಅಧಿಪತಿಯೇ ಇಂದ್ರ. ಇವನ ವಾಹನವೆಂದರೆ ಐರಾವತ. ಇದು ಬಿಳಿಯ ಆನೆ. ನಟರಾಜನ ತಲೆದೆಸೆಯ ಮಧ್ಯದ ಪೂರ್ವದಿಕ್ಕಿನ ಪಟ್ಟಿಕೆಯಲ್ಲಿ



ಸ್ವರ್ಗಾಧಿಪತಿಯಾದ ಇಂದ್ರನು ತನ್ನ ವಾಹನವಾದ ಐರಾವತದ ಮೇಲೆ ತಮ್ಮ ಪತ್ನಿಯಾದ ಶಚೀದೇವಿಯೊಡನೆ ಆಕಾಶದಲ್ಲಿ ಚಲಿಸುತ್ತಾ ನಟರಾಜನ ನಾಟ್ಯವನ್ನು ನೋಡಲು ಧಾವಿಸುತ್ತಿರುವಂತಿದೆ. ಐರಾವತಕ್ಕೆ ತಲೆಯಮೇಲೆ ಮಣಿಹಾರವನ್ನು ತೋರಿಸಲಾಗಿದೆ. ಕತ್ತಿನಲ್ಲಿ ಘಂಟಾಹಾರವನ್ನು ಕಟ್ಟಲಾಗಿದೆ. ಆನೆಯ ಬೆನ್ನಮೇಲೆ ಇಂದ್ರ ಮತ್ತು ಇಂದ್ರಾಣಿಯರು ಕುಳಿತುಕೊಳ್ಳಲು ವಸ್ತ್ರವನ್ನು ಹಾಕಿದ್ದು ಅದನ್ನು ಮೂರು ದಾರಗಳಿಂದ ಅದರ ಹೊಟ್ಟೆಗೆ ಬಿಗಿಯಲಾಗಿದೆ.

ಇಂದ್ರನು ಸರ್ವಾಭರಣ ಭೂಷಿತನಾಗಿದ್ದಾನೆ. ಕರಂಡ ಮುಕುಟವನ್ನು ಧರಿಸಿರುವ ಇಂದ್ರನು ಕಿವಿಗಳಲ್ಲಿ ಮಕರಕುಂಡಲಗಳನ್ನು ಧರಿಸಿದ್ದಾನೆ. ಯಜ್ಞೋಪವೀತವನ್ನು ಧರಿಸಿ ಉತ್ತರೀಯವನ್ನು ಹೊದ್ದಿದ್ದಾನೆ. ಅವನ ಸತಿ ಶಚೀದೇವಿಯೂ ಸಹ ಸಾಲಂಕೃತಳಾಗಿದ್ದರೂ ಇಂದ್ರನಷ್ಟು ಶ್ರೀಮಂತ ತೊಡುಗೆಗಳು ಇವಳಿಗಿಲ್ಲ. ಎಡಗೈಯಲ್ಲಿ ಉತ್ಪಲವನ್ನು ಹಿಡಿದಿದ್ದಾಳೆ. ಇಂದ್ರ ಮತ್ತು ಇಂದ್ರಾಣಿಯರ ಬಲಗೈ ಪತಾಕ ಹಸ್ತದಲ್ಲಿದೆ. ಇಂದ್ರನ ಎಡಗಡೆಗೆ ಇಂದ್ರಪತಾಕೆಯನ್ನು ಹೊತ್ತು ಸಾಗುತ್ತಿರುವ ಪತಾಕಾ ಪುರುಷನಿದ್ದರೆ, ಇಂದ್ರನ ಬಲಗಡೆಯಲ್ಲಿ ವಾದ್ಯಗಳಲ್ಲಿ ತೊಡಗಿರುವ ಗಂಧರ್ವರನ್ನು ಕೆತ್ತಲಾಗಿದೆ.

**ಈಶಾನ :** ಇಂದ್ರನ ಪಕ್ಕದಲ್ಲಿ ಅಗ್ನಿಯು ಬರಬೇಕು, ಆದರೆ ಇಲ್ಲಿ ಈಶಾನನನ್ನು ಕೆತ್ತಲಾಗಿದೆ. ಈಶಾನನು ಈಶಾನ್ಯದ ದಿಕ್ಕಿನ ಅಧಿಪತಿ. ಇವನು ಶಿವನ ಇನ್ನೊಂದು ಅವತಾರವೇ. ಶಿವನ ವಾಹನ ನಂದಿಯಂತೆಯೇ ಈಶಾನನ ವಾಹನವೂ ನಂದಿಯೇ. ಶಿವನ ಹೆಂಡತಿ ಗಿರಿಜೆ. ಇಲ್ಲಿ ಶಿವನ ವೇಗವನ್ನು ಉದ್ದೀಪನಗೊಳಿಸಲು ನಾಲ್ಕುಜನ ವಾದ್ಯಗಾರರನ್ನು ಕೂಡ ಶಿಲ್ಪಿಸಲಾಗಿದೆ. ಇವರೆಲ್ಲರು ಈಶಾನನ ಸುತ್ತಲೂ ಸೇರಿ ಅವರನ್ನು ಮಂಗಳ ವಾದ್ಯಗಳಿಂದ ಕರೆತರುವಂತೆ



ಚಿತ್ರಿಸಲಾಗಿದೆ. ವಿಶೇಷವೆಂದರೆ ಶಿವ ಮತ್ತು ಉಮೆಯನ್ನು ಸ್ವಾಗತಿಸಲು ಬಂದಿರುವ ಗಮಧರ್ವರು ಸಹ ವಿಶೇಷವಾಗಿದ್ದಾರೆ. ಈಶಾನನ ಮುಂದೆ ಇರುವ ಪತಾಕಾ ಪುರುಷನು ತನ್ನ ಕೈಯಲ್ಲಿ ಪತಾಕೆಯನ್ನು ಹಿಡಿಯುವ ಬದಲಿಗೆ ತ್ರಿಶೂಲವನ್ನು ಹಿಡಿದಿದ್ದಾನೆ. ಈಶಾನನ ಬಲಗಡೆಗೆ ಇರುವ ಇನ್ನೊಬ್ಬ ಈಶಾನನಂತೆಯೇ ಪತಾಕಾ ಹಸ್ತವನ್ನು ಹಿಡಿದಿದ್ದಾನೆ. ಕೆಳಗಿರುವ ಇನ್ನಿಬ್ಬರು ಮಾತ್ರ ಓಲಗವನ್ನು ನುಡಿಸುತ್ತಾ ಈಶಾನನನ್ನು ಕರೆದೊಯ್ಯುತ್ತಿದ್ದಾರೆ.

ಶಿವ ಮತ್ತು ಶಿವೆಯರನ್ನು ಹೊತ್ತೊಯ್ಯುತ್ತಿರುವ ನಂದಿಯ ಕುತ್ತಿಗೆಗೆ ಅತ್ಯಂತ ಸೊಗಸಾದ ಘಂಟಾಹಾರವನ್ನು ತೊಡಿಸಲಾಗಿದೆ. ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ನಂದಿಯ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಶಿವ ಮತ್ತು ಶಿವೆಯರು ಸರ್ವಾಭರಣ ಭೂಷಿತರಾಗಿದ್ದಾರೆ. ಶಿವನು ಜಟಾಮುಕುಟವನ್ನು ಧರಿಸಿದ್ದಾನೆ. ಶಿವನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಶಿವಪಾರ್ವತಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.

**ಅಗ್ನಿ :** ಅವನ ಪಕ್ಕದಲ್ಲಿ ದಕ್ಷಿಣದ ಯಮನಿರಬೇಕು. ಆದರೆ ಅವನ ಬದಲಿಗೆ



**ಸುಂಕಂ ಗೋವರ್ಧನ**
ಬೆಂಗಳೂರು
ಮೊ : 9535762464

ಇಲ್ಲಿ ಅಗ್ನಿಯನ್ನು ಕೆತ್ತಲಾಗಿದೆ. ಅಗ್ನಿಯು ಆಗ್ನೇಯ ದಿಕ್ಕಿನ ಒಡೆಯ. ಇವನ ವಾಹನ ಟಗರು. ಆತನ ಹೆಂಡತಿ ಸ್ವಾಹಾ. ಇಲ್ಲಿ ಅಗ್ನಿಯು ತನ್ನ ಹೆಂಡತಿಯಾದ ಸ್ವಾಹಾಳ ಜೊತೆ ಟಗರಿನ ಮೇಲೆ ಕುಳಿತು ನಟರಾಜನ ನೃತ್ಯವನ್ನು ನೋಡಲು ಧಾವಿಸುತ್ತಿದ್ದಾನೆ. ಇಲ್ಲಿ ಟಗರಿನ ಚಿತ್ರಣವು ನಮ್ಮನ್ನು ಬೆರಗುಗೊಳಿಸುತ್ತದೆ. ಟಗರಿನ ಹಾಗೆ ಕೊಂಬಿದ್ದರೂ ಮುಖ ಮಾತ್ರ ವಿಶೇಷವಾಗಿದೆ. ಟಗರಿನ ಕತ್ತಲ್ಲ ಘಂಟಾಹಾರಗಳಿವೆ. ಅಗ್ನಿಗಾಗಿ ಹಾಕಿರುವ ಮೆತ್ತೆಯನ್ನು ಒಂದು ದೊಡ್ಡ ಬಟ್ಟೆಯಿಂದ ಕಟ್ಟಿದ್ದರೆ ಟಗರಿಗೆ ಎಡಬಲವಾಗಿಯೂ ಒಂದು ಪಟ್ಟಿಕೆಯನ್ನು ಕಟ್ಟಲಾಗಿದೆ. ಅಗ್ನಿಯು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಸ್ವಾಹಾ ತನ್ನ ಎಡಗೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಅಗ್ನಿ ಮತ್ತು ಸ್ವಾಹಾ ಇಬ್ಬರೂ ತಮ್ಮ ಬಲಗೈಯನ್ನು ಪತಾಕ ಹಸ್ತದಲ್ಲಿ ಇಟ್ಟುಕೊಂಡಿದ್ದಾರೆ.



ಇವರೊಂದಿಗೆ ಇರುವ ಪರಿಚಾರಕರು ಕೂಡ ವಿಶೇಷವಾಗಿದ್ದಾರೆ. ಮುಂದೆ ಇರುವ ಪತಾಕಾ ಪುರುಷನು ಧ್ವಜವನ್ನು ಹಿಡಿದುಕೊಂಡು ಸಾಗುತ್ತಿದ್ದರೆ ಹಿಂದೆ ಇರುವ ಪರಿಚಾರಕನು ಪತಾಕ ಹಸ್ತನಾಗಿದ್ದಾನೆ. ಕೆಳಗಿರುವ ಇಬ್ಬರು ಗಂಧರ್ವರು ಶಂಖವನ್ನು ಊದುತ್ತಿದ್ದಾರೆ.

**ವಾಯು :** ಅದರ ಬಳಿಕ ನಿರುತಿಯು ನೈರುತ್ಯದಲ್ಲಿ ಇರಬೇಕು. ಆದರೆ ಇವನ ಬದಲಿಗೆ ಇಲ್ಲಿ ವಾಯುವು ಇದ್ದಾನೆ. ವಾಯು ವಾಯುವ್ಯ ದಿಕ್ಕಿನ ಅಧಿಪತಿ. ಇವನ ವಾಹನ ಜಿಂಕೆ. ಇವನ ಹೆಂಡತಿಯ ಹೆಸರು ಮೋಹಿನಿ. ವಾಯು ಮತ್ತು ಮೋಹಿನಿಯರನ್ನು ಹೊತ್ತಿರುವ ಜಿಂಕೆಯ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ಜಿಂಕೆಯ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಜಿಂಕೆಯ ಕತ್ತಿನಲ್ಲಿ ಎರಡು ಘಂಟಾಹಾರಗಳನ್ನು ಹಾಕಲಾಗಿದೆ. ವಾಯುವು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಮೋಹಿನಿಯೂ ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ವಾಯು ಮತ್ತು ಮೋಹಿನಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ. ಆದರೆ ಮೋಹಿನಿಯ ಬಲಗೈ ವಾಯುವಿನ ಶರೀರದಿಂದ ಮುಚ್ಚಲ್ಪಟ್ಟಿದೆ. ಇದರೊಂದಿಗೆ ಇರುವ ಪರಿಚಾರಕರು ಕೂಡ ವಿಶೇಷವಾಗಿದ್ದಾರೆ. ಮುಂದೆ ಇರುವ ಪತಾಕಾ ಪುರುಷನು ಧ್ವಜವನ್ನು ಹಿಡಿದುಕೊಂಡು ಸಾಗುತ್ತಿದ್ದರೆ ಹಿಂದೆ ಇರುವ ಪರಿಚಾರಕನು ಪತಾಕ ಹಸ್ತನಾಗಿದ್ದಾನೆ. ಕೆಳಗಿರುವ ಇಬ್ಬರು ಗಂಧರ್ವರಲ್ಲಿ ಒಬ್ಬನು ಶಂಖವನ್ನು ಊದುತ್ತಿದ್ದರೆ, ಇನ್ನೊಬ್ಬನು ತಾಳವನ್ನು ನುಡಿಸುತ್ತಿದ್ದಾನೆ.



**ವರುಣ :** ಈ ಪಟ್ಟಿಕೆಯಲ್ಲಿ ವರುಣನ ಸ್ಥಾನ ನಿರ್ದೇಶನವು ಸರಿಯಾಗಿಯೇ ಇದೆ. ವರುಣ ಪಶ್ಚಿಮ ದಿಕ್ಕಿನ ಅಧಿಪತಿ. ಇವನ ವಾಹನ ಮಕರ ಅಥವಾ ಮೊಸಳೆ. ಇವನ ಪತ್ನಿಯ ಹೆಸರು ವಾರುಣಿ. ವರುಣ ಮತ್ತು ವಾರುಣಿಯನ್ನು ಹೊತ್ತು ನಡೆಯುತ್ತಿರುವ ಮಕರವು ಅತ್ಯಂತ ಅಲಂಕಾರಿಕವಾಗಿದೆ. ಬಾಯಿಯನ್ನು ತೆರೆದು ಓಡುತ್ತಿರುವ ಮೊಸಳೆಯು ತನ್ನ ಮೈಯನ್ನು ಕೆದರಿಕೊಂಡು ಬಳ್ಳಿಯಂತಹ ಅಲಂಕರಣವನ್ನು ಉಂಟುಮಾಡಿದೆ. ಇಲ್ಲಿ ಮೊಸಳೆಯ ಬಾಯಿಯ ಜೊತೆಯಲ್ಲಿ ಮೊಸಳೆಗೆ ಆನೆಯ ಸೊಂಡಿಲನ್ನು ಕೆತ್ತಲಾಗಿದೆ. ಮೊಸಳೆಯ ಮೈ ಮುಳ್ಳುಗಳನ್ನು ಹೊಂದಿರುವುದರಿಂದ ಅದರ ಬೆನ್ನಮೇಲೆ ಕುಳಿತುಕೊಳ್ಳುವುದು ಕಷ್ಟಕರವಾದರೂ ಇಲ್ಲಿ ಅದನ್ನೇ ಬಹುಶಃ ಬಳ್ಳಿ ಹೂವುಗಳನ್ನು ಅದರ ಬೆನ್ನಿನ ಮೇಲೆ ಹರಡಿರಲೂಬಹುದು ಎಂದೆನಿಸುತ್ತದೆ. ವರುಣನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅದೋವಸ್ತ್ರವು ಅತ್ಯಂತ ನವುರಾಗಿದೆ. ವರುಣ ಮತ್ತು ವಾರಿಣಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ. ಇಲ್ಲಿನ ಸಂಯೋಜನೆ ಚೆನ್ನಾಗಿದೆ. ಮುಂದೆ ಪತಾಕಾ ಪುರುಷನು ಧ್ವಜವನ್ನು ಹಿಡಿದು ಮುಂದೆ ಸಾಗುತ್ತಿದ್ದರೆ, ಮಕರದ ಮುಖದಲ್ಲಿ ಒಬ್ಬ ಗಂಧರ್ವನು ಇದ್ದಾನೆ. ಪತಾಕಾ ಹಸ್ತವನ್ನು



ಧರಿಸಬೇಕಾಗಿದ್ದ ವ್ಯಕ್ತಿಯು ಮೊಸಳೆಯ ಕೆಳಗಡೆ ಬಂಧಿಯಾಗಿದ್ದಾನೆ.

**ನಿರುತಿ :** ಈಶಾನನ ಪಕ್ಕದಲ್ಲಿ ವಾಯುವು ಇರಬೇಕಾಗಿತ್ತು. ಆದರೆ ಇಲ್ಲಿ ನಿರುತಿಯನ್ನು ಕೆತ್ತಲಾಗಿದೆ. ನಿರುತಿ ನೈರುತ್ಯ ದಿಕ್ಕಿನ ಅಧಿಪತಿ. ಅವನ ವಾಹನ ಸಾಮಾನ್ಯವಾಗಿ ನರ. ಆತನ ಹೆಂಡತಿಯ ಹೆಸರು ಚಂಡಿಕೆ. ಇಲ್ಲಿ ನಿರುತಿಯು ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅದೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ನಿರುತಿಯು ಒಂದು ಕೈಯಲ್ಲಿ ಕಮಲ ಪುಷ್ಪವನ್ನು ಹಿಡಿದು ಇನ್ನೊಂದು ಕೈಯಲ್ಲಿ ಪತಾಕಾ ಹಸ್ತನಾಗಿದ್ದಾನೆ. ಮುಂದೆ ಪತಾಕಾ ಪುರುಷನು ಧ್ವಜವನ್ನು ಹಿಡಿದು ಸಾಗುತ್ತಿದ್ದರೆ ಕೆಳಗಿರುವ ಪರಿಚಾರಕರು ಕೊಂಬು ಕಹಳೆಗಳನ್ನು ಊದುತ್ತಾ ಸಾಗುತ್ತಿದ್ದಾರೆ.



**ಯಮ :** ಇಲ್ಲಿ ಕುಬೇರನು ಇರಬೇಕಾಗಿತ್ತು. ಆದರೆ ಇಲ್ಲಿ ಯಮನು ಇದ್ದಾನೆ. ಯಮನು ದಕ್ಷಿಣ ದಿಕ್ಕಿನ ಅಧಿಪತಿ. ಅವನ ವಾಹನ ಕೋಣ. ಅವನ ಪತ್ನಿಯ ಹೆಸರು ಧೂಮ್ರೋರ್ಣ. ಯಮ ಮತ್ತು ಧೂಮ್ರೋರ್ಣರನ್ನು ಹೊತ್ತು ಓಡುತ್ತಿರುವ ಕೋಣದ ಕತ್ತಿನಲ್ಲಿ ಘಂಟಾಹಾರವಿದೆ. ಕೋಣದ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ಕೋಣದ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಯಮನು ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅದೋವಸ್ತ್ರವು ಅತ್ಯಂತ ನವುರಾಗಿದೆ. ಯಮನು ಒಂದು ಕೈಯಲ್ಲಿ ಪತಾಕಾ ಹಸ್ತನಾಗಿದ್ದರೆ, ಇನ್ನೊಂದು ಕೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಇಲ್ಲೀ ಧೂಮ್ರೋರ್ಣಳು ಸಹ



ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ಯಮ ಮತ್ತು ಧೂಮ್ರೋರ್ಣ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ. ಮುಂದೆ ಇರುವ ಪತಾಕಾ ಪುರುಷನು ಧ್ವಜವನ್ನು ಹಿಡಿದುಕೊಂಡು ಸಾಗುತ್ತಿದ್ದರೆ ಹಿಂದೆ ಇರುವ ಪರಿಚಾರಕನು ತನ್ನ ಕೈಯಲ್ಲಿ ಹಿಡಿದಿರುವ ಛತ್ರಿಯು ಮುಂದಕ್ಕೆ ಬಂದಿದೆ. ಕೆಳಗಿರುವ ಗಂಧರ್ವನೊಬ್ಬ ಶಂಖವನ್ನು ಊದುತ್ತಿದಾನೆ.

**ಕುಬೇರ :** ಈಶಾನನು ಇರಬೇಕಾಗಿದ್ದ ಜಾಗದಲ್ಲಿ ಕುಬೇರನಿದ್ದಾನೆ. ಕುಬೇರ ಉತ್ತರ ದಿಕ್ಕಿನ ಅಧಿಪತಿ. ಇವನ ವಾಹನ ಕುದುರೆ. ಇವನ ಹೆಂಡತಿಯ ಹೆಸರು ಹಾರಿತಿ. ಈ ಪಟ್ಟಿಕೆಯಲ್ಲಿ ಕುಬೇರನು ತನ್ನ ಸತಿಯಾದ ಹಾರಿತಿಯೊಡನೆ ತನ್ನ ವಾಹನವಾದ ಕುದುರೆಯ ಮೇಲೆ ನಟರಾಜನ ನೃತ್ಯವನ್ನು ನೋಡಲು ಧಾವಿಸುತ್ತಿದ್ದಾನೆ. ಕುದುರೆಯು ಕತ್ತಿನಲ್ಲಿ ಅತ್ಯಂತ ಅಲಂಕೃತವಾದ ಘಂಟಾಹಾರಗಳು, ಮಣಿಹಾರಗಳು, ಕಂಠೀಹಾರಗಳೂ ಇವೆ. ಎಷ್ಟಾದರೂ ಕುಬೇರನು ಅತ್ಯಂತ ಶ್ರೀಮಂತ. ಎಲ್ಲಾ ಸಂಪತ್ತಿನ ಒಡೆಯ. ಹಾಗಾಗಿ ಕುಬೇರನ ಕುದುರೆಯೂ ಅಲಂಕೃತವಾಗಿದೆ. ಕುಬೇರ ಮತ್ತು ಹಾರಿತಿಯರು ಕುಳಿತಿರುವ ಕುದುರೆಯ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ಅದರ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಕುಬೇರನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅದೋವಸ್ತ್ರವು ಅತ್ಯಂತ ನವುರಾಗಿದ್ದು ಅತ್ಯಂತ ಶ್ರೀಮಂತ ವಾಗಿದೆ. ಇಲ್ಲಿ ಹಾರಿತಿ ಯೂ ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ಕುಬೇರ ಮತ್ತು ಹಾರಿತಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ. ಮುಂದೆ ಇರುವ ಪತಾಕಾ ಪುರುಷನು ಧ್ವಜವನ್ನು ಹಿಡಿದುಕೊಂಡು ಸಾಗುತ್ತಿದ್ದರೆ ಹಿಂದೆ ಮತ್ತು ಮುಂದೆ ಇರುವ ಪರಿಚಾರಕರು ತನ್ನ ಕೈಗಳನ್ನು ಪತಾಕಾ ಹಸ್ತರಾಗಿ ಇಟ್ಟು ಕೊಂಡಿದ್ದಾರೆ. ಕೆಳಗಿ ರುವ ಗಂಧರ್ವನೊಬ್ಬ ಶಂಖವನ್ನು ಊದುತ್ತಿದ್ದಾನೆ.



# ಆತ್ಮ ಯೋಗ

ಈ ಆತ್ಮ ಎಂಬುದು ಎಲ್ಲಾ ಪ್ರಾಣಿಗಳಲ್ಲಿ ಸುಪ್ತ ಸ್ಥಿತಿಯಲ್ಲಿ ಪ್ರಜ್ಞೆ, ಅರಿವು, ಜ್ಞಾನ, ಆಚಾರಗಳ ವೀಕ್ಷಕನಾಗಿ, ವಿಮರ್ಶಕನಾಗಿ, ಮಾರ್ಗದರ್ಶಕನಾಗಿ, ಅರಿವಿನ ಗುರುವಾಗಿ, ನಿಯಂತ್ರಕನಾಗಿ, ಸಾಕ್ಷಿ ಪ್ರಜ್ಞೆಯಾಗಿ, ಕಾರ್ಯ ನಿರ್ವಹಿಸುವಲ್ಲಿ ನಿರತವಾಗಿರುವ ಚೈತನ್ಯದ ಬಿಂದು.

**ಕುರುಹಿಲ್ಲ ಕುರುಹಿಲ್ಲ ಲಿಂಗವೆಂದೆಂಬಡೆ,**
**ತೆರಹಿಲ್ಲ ತೆರಹಿಲ್ಲ ಜಂಗಮವೆಂದೆಂಬಡೆ.**
**ಇದೆ ನೋಡಾ ಶಿವಾಚಾರ, ಇದೆ ನೋಡಾ ಶಿವದೊಡಕು!**
**ಆತ್ಮನಾಂ ಪ್ರಕೃತಿಃ ಸ್ವಭಾವ' ಎಂದುದಾಗಿ**
**ಮುಟ್ಟಬಾರದತಾವ ಮರೆಗೊಂಡಿರ್ಪ ಮಮಕರ್ತ**
**ಕೂಡಲಸಂಗಮದೇವ. – ಬಸವಣ್ಣ**

ಕೆಲವು ಸೂಕ್ಷ್ಮ ಮನಸ್ಥಿತಿ ಹೊಂದಿರುವರಲ್ಲಿ, ಮನುಕುಲದ, ಸಾಮಾಜಿಕ, ಸಮಷ್ಟಿಯ ಕಾಳಜಿ ಹೊಂದಿರುವರಲ್ಲಿ ಆತ್ಮ ಸದಾ ಎಚ್ಚರವಾಗಿರುತ್ತದೆ. ಇನ್ನೂ ಕೆಲವು ರಾಕ್ಷಸ ಪವೃತ್ತಿ ಹೊಂದಿರುವ ವಕ್ತಿಗಳಲ್ಲಿ ಆತ್ಮವು ಜಡವಾಗಿರುತ್ತದೆ. ಆತ್ಮ ದೇಹದ ಅಂಗವಲ್ಲ, ಕಾಣುವುದಿಲ್ಲ, ಆದರೆ ಅದರ ಇರುವಿಕೆಯ ಅನುಭವ ವಯಕ್ತಿಕವಾಗಿ ಅನುಭಾವಿಸಬಹುದು.

**ಮುಗಿಲ ಮರೆಯ ಮಿಂಚಿನಂತೆ,**
**ಒಡಲ ಮರೆಯ ಆತ್ಮನಂತೆ,**
**ನೆಲದ ಮರೆಯ ನಿಧಾನದಂತೆ ಇಪ್ಪ,**
**ನಿಮ್ಮ ನಿಲವನಾರು ಬಲ್ಲರು ದೇವಾ**
**ನಿಮ್ಮ ನಿಲವ ಹಲಕಾಲದಿಂದ ಕಂಡು ಕಂಡು ಕಡೆಗಣಿಸಿ,**
**ಮರೆದು ಮತಿಗೆಟ್ಟು ಮರುಳಾದೆನು.**
**ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ**
**ತ್ರಾಹಿ ತ್ರಾಹಿ ಕಾಯಯ್ಯಾ,**
**ಕೂಡಲಸಂಗಮದೇವಾ. – ಬಸವಣ್ಣ**

ದೇಹದ ಆರೋಗ್ಯಕ್ಕೆ ಹೇಗೆ ಆಹಾರ, ಯೋಗಾಸನ, ಕಾಯಕ, ಎಂಬ ಮಾರ್ಗಗಳಂಟು, ಹಾಗೆಯೇ ಆತ್ಮದ ಆರೋಗ್ಯಕ್ಕೆ ಪ್ರಜ್ಞೆ, ಜ್ಞಾನ, ಅವಲೋಕನ ಎಂಬ ಯೋಗಗಳು ಅವಶ್ಯವಾಗಿ ಬೇಕು ಅದನ್ನು ಅನುವು ಮಾಡುವುದು ನಮ್ಮ ಜವಾಬ್ದಾರಿ.ಆತ್ಮಕ್ಕೆ ಎಂತಹ ಆಹಾರವನ್ನು ಉಣಬಡಿಸಬೇಕು? ಎಂಬ ಜಿಜ್ಞಾಸೆ ಮೂಡುತ್ತದೆ, ಮೂಲವಾಗಿ ಸಮಷ್ಟಿಯ ಜ್ಞಾನ, ಪ್ರಕೃತಿಯ ಜ್ಞಾನವನ್ನು ಮೊದಲ ಹಂತದಲ್ಲಿ ನೀಡಬೇಕು. ಸಮಗ್ರವಾಗಿ ಈ ಜಗತ್ತನ್ನು ಅದರ ಮೂಲ ತತ್ವ, ಆಕಾರ, ಗುಣ, ಲಕ್ಷಣಗಳನ್ನು ತುಂಬಬೇಕು. ನಂತರದ ಹಂತದಲ್ಲಿ ಮನುಕುಲದ ಮನ್ವಂತರದ ಜ್ಞಾನವನ್ನು, ಮನುಳ್ಯನ ಸಕಾರಾತ್ಮಕ, ನಕಾರಾತ್ಮಕ ನಿಲುವು ಕೃತ್ಯಗಳ ಇತಿಹಾಸದ ಜ್ಞಾನವನ್ನು ತುಂಬಬೇಕು. ಸಹಜವಾಗಿ ಆತ್ಮವು ತನ್ನ ನ್ಯಾಯಾಲಯದಲ್ಲಿ ತೂಕ, ಅಳತೆಯ ಮಾಡಿ ವಿಂಗಡಿಸಿ ತಿರ್ಮಾನಿಸುತ್ತದೆ. ನಮ್ಮ ಕೆಲಸ ಆತ್ಮಕ್ಕೆ ಜ್ಞಾನವನ್ನು ತುಂಬುವುದು.

**ಮರಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ**
**ತರುಮರಾದಿಗಳ ಸುಡಲಾಯಿತ್ತು.**
**ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ ಹೊದ್ದಿರ್ದ**
**ತನುಗುಣಾದಿಗಳ ಸುಡಲಾಯಿತ್ತು.**
**ಇಂತಪ್ಪ ಅನುಭಾವರ ಅನುಭಾವವ ತೋರಿ ಎನ್ನ**
**ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ. – ಅಕ್ಕಮಹಾದೇವಿ**

ಸಕಲ ಜೀವಾತ್ಮರಿಗೂ ಲೇಸ ಬಯಸುವ ಜ್ಞಾನವನ್ನು, ದಯೆ, ಕರುಣೆ, ಪ್ರೀತಿ ಎಂಬ ಮನುಕುಲಕ್ಕೆ ಅವಶ್ಯಕತೆ ಇರುವ ಜ್ಞಾನಗಳನ್ನು ತುಂಬಬೇಕು. ಇತಿಹಾಸದ ಸತ್ಯದ ನೈಜ್ಯ ಪುರಾವೆಗಳನ್ನು ತುಂಬಬೇಕು. ಕಪೋಲ ಕಲ್ಪಿತ ತಿರುಚಿದ ಸುಳ್ಳು, ದ್ವೇಷ, ಪುರಾಣಗಳ ಕುತಂತ್ರದ ಅರಿವಿನ ಜ್ಞಾನವನ್ನು ತುಂಬಬೇಕು. ವಯಕ್ತಿಕವಾಗಿ ವಾಸ್ತವಿಕವಾಗಿ ಬದುಕನ್ನು ಕಟ್ಟಿಕೊಳ್ಳುವ ಜ್ಞಾನವನ್ನು ತುಂಬಬೇಕು, ಮಂತ್ರ ತಂತ್ರ, ಬೂಟಾಟಿಕೆಗಳ ಕುಟಿಲದ ಅರಿವಿನ ಜ್ಞಾನವನ್ನು ತುಂಬಬೇಕು. ಆಧುನಕ ಬದಲಾದ ವಾತಾವರಣದಲ್ಲಿ ಶಾಂತಿ, ಸಂಯಮದ ಜ್ಞಾನವನ್ನು ತುಂಬಬೇಕು. ವೈಚಾರಿಕವಾಗಿ ಚಿಂತಿಸುವು ಕಲೆಯೇ ಆತ್ಮದ ಯೋಗವಾಗಬೇಕು. ಮನುಷ್ಯ ಪ್ರೇಮ, ಮಾನವೀಯ ಮೌಲ್ಯಗಳು, ಸೌಹಾರ್ದತೆ, ಸಮತೆ, ಸಹಬಾಳ್ವೆ, ಅನುಭೂತಿ ಇವುಗಳು ನಿಜವಾದ ಮಹಯೋಗಗಳು ಆತ್ಮಕ್ಕೆ. ಈ ನಿಟ್ಟಿನಲ್ಲಿ ಶಿವಯೋಗವನ್ನು ಆದರಿಸಿದಾಗ್ಯೂ ಮಾತ್ರ ಆತ್ಮಕ್ಕೆ ಯೋಗವು ತಣಿಸುತ್ತದೆ.

**ಆತ್ಮತೇಜದಿಂದ ಹಣೆಗಣ್ಣ ತೆಗೆದಲ್ಲಿ, ಆತ್ಮಘಟವಳಿದವಂಗೆ,**
**ಕಾಲಕಣ್ಣ ತೆಗೆದು ಹಣೆಗಣ್ಣ ಮುಚ್ಚಿದೆನೆಂಬ ಅಹಂಕಾರವಡಗಿಯಲ್ಲದೆ,**
**ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಕ್ಕೊಳಗಲ್ಲ. – ಸಿದ್ಧರಾಮೇಶ್ವರ**

ಮನುಷ್ಯ ವಿರೋಧವಾದ ಕೃತಕ ಕಟ್ಟುಪಾಡುಗಳ ಅಹಂ ಬೇದಿಸಿ, ಬದುಕು ವಿಶ್ವಾಸದಿಂದ ಕಟ್ಟಿಕೊಳ್ಳಲು ಇರುವುದು, ನೋವು, ಸಾವುಗಳ ಸತ್ಯವ ಎದುರಿಸಿ ಕ್ರೌರ್ಯ, ಕಾಮಗಳ ಅಳಿಸಿ ಅತೃಪ್ತ ಆತ್ಮವ ವಿವೇಕ, ವಿನಯ, ವಿಚಾರ ಗಳಿಂದ ಶುದ್ಧಿಗೊಳಿಸಿ, ಮರು ಚೈತನ್ಯಗೊಳಿಸಿ ಸದ್ಭಾವದಿಂದ ಸದಾಶಯದಿಂದ ವಿಕಾಸಗೊಳ್ಳುವುದೇ ಆತ್ಮಯೋಗ. ಕಾಯಕ್ಕೆ ಮಜ್ಜನ ಪ್ರಾಣಕ್ಕೆ ಓಗರ ಇದ ಮಾಡಲೆ ಬೇಕು. ಸುಳಿವ ಸುಳುಹುಳ್ಳನ್ನಕ್ಕ ಇದ ಮಾಡಲೆಬೇಕು. ಗುಹೇಶ್ವರನೆಂಬ [ಲಿಂಗಕ್ಕೆ] ಆತ್ಮವುಳ್ಳನ್ನಕ್ಕ ಭಕ್ತಿಯ ಮಾಡಲೆ ಬೇಕು.



**ವಿನಯ್ ಆದಿಹಳ್ಳಿ**
ಶಿವಶಕ್ತಿ ಸಂಗಮ, ಆದಿಹಳ್ಳಿ,
ಅರಸೀಕೆರೆ ತಾಲ್ಲೂಕು, ಹಾಸನ
ಮೊ : 9901209374

# ಆರೋಗ್ಯಾಮೃತ 37

## ಜೀವಾಮೃತ

ಎಂತಹ ನರಕಯಾತನೆ ನೋಡಿ. ಅವರು ಬಹಳ ಶ್ರೀಮಂತರು, ಕೋಟ್ಯಾಧೀಶರು. ಭಾರತದ ಪ್ರಮುಖ ಆಸ್ಪತ್ರೆಗಳೆಲ್ಲಾ ಮುಗಿದಿದ್ದವು. ಇನ್ನು ವಿದೇಶಕ್ಕೆ ಹೋಗುವ ಆಲೋಚನೆಯಲ್ಲಿದ್ದರು. ಇದೆಂತಹ ಶಾಪ. ಅವರಿಗೆ ತಿಳಿಯುವಂತೆ ಈ ಜನ್ಮದಲ್ಲಿ ಅವರು ದೇವೇಂದ್ರನಂತಹ ತಪ್ಪನ್ನೇನೂ ಮಾಡಿಲ್ಲವೆನಿಸುತ್ತದೆ. ಈ ಸೃಷ್ಟಿಯಲ್ಲಿ ಎಲ್ಲಾ ಘಟನೆಗಳಿಗೂ ಕಾರಣವಾದ ಹಿನ್ನೆಲೆಯನ್ನು ಹುಡುಕುವುದು ನಮ್ಮ ಸೀಮಿತ ದೃಷ್ಟಿಗೆ ಸಾಧ್ಯವಿಲ್ಲ. ನಮ್ಮ ಜ್ಞಾನ–ವಿಜ್ಞಾನಗಳು ತುಂಬಾ ಸೀಮಿತವಾದವುಗಳು. ಸಾಗರದಲ್ಲಿನ ಒಂದು ಹನಿಯಷ್ಟು ಮಾತ್ರ. ಇಂತಹ ಅನೇಕ ಕಾಯಿಲೆಗಳಿಗೆ ನಮ್ಮ ಪೂರ್ವಜನ್ಮದ ದುಷ್ಕರ್ಮಗಳೇ ಕಾರಣವೆಂದು ಹೇಳಬೇಕಲ್ಲವೇ ಗತ್ಯಂತರವಿಲ್ಲ. ಈ ಸೃಷ್ಟಿಯಲ್ಲಿ ಯಾವುದೊಂದು ಘಟನೆಯೂ ಉದ್ದೇಶ ರಹಿತವಾಗಿ, ಆಕಸ್ಮಿಕವಾಗಿ ನಡೆಯುವಂತಹದ್ದಲ್ಲ. ಮೇಲಿನ ಘಟನೆಯನ್ನು ಹೇಳುತ್ತಿರುವ ಉದ್ದೇಶವಿಷ್ಟೇ; ಇಂದ್ರಿಯಗಳ ಸಹಜ ಧರ್ಮ ಭೋಗಾಸಕ್ತಿ ಮಾನವನಲ್ಲಿ ಇರಬಹುದು, ಇತರೆ ಜೀವಿಗಳೇ ಇರಬಹುದು, ತಿಳಿದೋ ತಿಳಿಯದೆಯೋ ಸಕಲ ಜೀವಿಗಳು ಭೋಗಾಸಕ್ತಿಯಿಂದ ಅನಂತ ದುಃಖಗಳಿಗೆ ತುತ್ತಾಗುವುದನ್ನು ಕಾಣುತ್ತೇವೆ. ಅದನ್ನು ಷಣ್ಮುಖ ಶಿವಯೋಗಿಗಳ ಮೇಲಿನ ವಚನ ಮನಮುಟ್ಟುವಂತೆ ವರ್ಣಿಸುತ್ತದೆ.

**ಘ್ರಾಣೇಂದ್ರಿಯ ವಿಷಯದಿಂದ ಭ್ರಮರ ಕೆಡುವುದು, ಸಂಪಿಗೆಯ ಪುಷ್ಪದಲ್ಲಿ**

ಘ್ರಾಣೇಂದ್ರಿಯ ಎಂದರೆ ಮೂಗು, ಮೂಗಿನ ವಿಷಯ ವಾಸನೆ. ಅನೇಕ ಸುವಾಸನೆ ದುರ್ವಾಸನೆಗಳನ್ನು ಮೂಗು ಗ್ರಹಿಸುತ್ತದೆ. ಕೆಲ ವಾಸನೆಗಳು ಮೂಗನ್ನು ಬಹಳವಾಗಿ ಆಕರ್ಷಿಸುತ್ತವೆ. ದುಂಬಿಗಳಿಗೆ ಹೂವಿನ ಮಕರಂದ ವೆಂದರೆ ಪ್ರಾಣ ಅಲ್ಲವೇ? ಅದು ನಿಮಗೆ ಚೆನ್ನಾಗಿ ಗೊತ್ತಿದೆ. ಅದರಲ್ಲಿಯೂ ವಿಶೇಷವಾಗಿ ಸಂಪಿಗೆ ಹೂವಿನ ಪರಿಮಳ, ಎಂತಹ ಮಧುರ. ದುಂಬಿ ಅದನ್ನು ಹೀರಲು ಹೂವಿನ ಮೇಲೆ ಹೋಗಿ ಕುಳಿತುಕೊಳ್ಳುತ್ತದೆ. ಮಕರಂದವನ್ನು ಹೀರುವುದರಲ್ಲಿ ಎಷ್ಟು ಮಗ್ನವಾಗುತ್ತದೆ ಎಂದರೆ ಹೂವಿನ ಪಕಳೆಗಳು ಮುಚ್ಚಿಕೊಂಡು ದುಂಬಿ ಅದರಲ್ಲಿಯೇ ಸಿಕ್ಕಿ ಸತ್ತುಹೋಗುತ್ತದೆ. ಅದಕ್ಕೆ ಮಕರಂದ ಹೀರಿ ತೃಪ್ತಿಯಾದ ಮೇಲೆ ಹೊರಬರಬೇಕೆಂಬ ಅರಿವು ನಷ್ಟವಾಗಿ ಹೋಗಿರುತ್ತದೆ.



ಶ್ರೀ ಶ್ರೀ ಬಸವಾನಂದಸ್ವಾಮಿಗಳವರು
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ವಿಚಿತ್ರವೇನು ಗೊತ್ತೇ ? ದುಂಬಿ ಮಧುರವಾದ ಸಂಪಿಗೆಯ ಮಕರಂದದಲ್ಲಿ ಜೀವ ನೀಗಿದರೆ ಮನುಷ್ಯನದು ಎಂತಹ ದುರಂತ ನೋಡಿ. ಸೇಂದಿ ಸಾರಾಯಿಗಳು, ಹುಳಿತ ಕೊಳೆತ ಪದಾರ್ಥಗಳಿಂದ ತಯಾರಾದವುಗಳು. ಅವುಗಳ ವಾಸನೆ ಮೂಗಿಗೆ ಅಸಹ್ಯ; ಅವುಗಳ ರುಚಿ ನಾಲಿಗೆಗೆ ಕಠೋರ. ಆದರೂ ಲಕ್ಷಾಂತರ ಮಂದಿ ಆ ಚಟಕ್ಕಾಗಿಯೇ ತಮ್ಮ ಜೀವನವನ್ನು ನೀಗಿಕೊಳ್ಳುತ್ತಿದ್ದಾರಲ್ಲ, ಇದು ಸೋಜಿಗವಲ್ಲವೇ ?

**ರಸನೇಂದ್ರಿಯ ವಿಷಯದಿಂದ ಮತ್ಸ್ಯ ಕೆಡುವುದು, ಜಾಲಗಾರನ ಬಲೆಯಲ್ಲಿ**

ರಸನೇಂದ್ರಿಯ ಎಂದರೆ ನಾಲಿಗೆ ನಾಲಿಗೆಯ ಆಸೆಗಾಗಿಯೋ, ಹಸಿವಿನ ಬೇಗೆಯಿಂದಲೋ ಮೀನು ಜಾಲಗಾರನು ಒಡ್ಡಿದ ಆಮಿಷಕ್ಕೆ ಗಾಳದಲ್ಲಿ ಸಿಕ್ಕು ಜೀವ ನೀಗಿಕೊಳ್ಳುತ್ತದೆ. ಮೀನಿನ ಪರಿಸ್ಥಿತಿ ಹೀಗಾದರೆ ಮನುಷ್ಯನ ನಾಲಿಗೆಯ ಚಟದ ದುಷ್ಪರಿಣಾಮಗಳನ್ನು ವರ್ಣಿಸುವುದು ಅಸಾಧ್ಯ. ಈ ಸಂದರ್ಭದಲ್ಲಿ ನಾಲಿಗೆಯನ್ನು ಕುರಿತು, ನಾಲಿಗೆಯ ನಿಯಂತ್ರಣವನ್ನು ಕುರಿತು ಕವಿ ಶ್ರೇಷ್ಠನಾದ ಸರ್ವಜ್ಞನು ಹೇಳಿರುವ ಕೆಲವು ವಚನಗಳನ್ನು ತಿಳಿದು ಕೊಳ್ಳೋಣ.

**ನಾಲಿಗೆಯ ಸವಿಸುಖಕೆ ಚೀಲವನು**
**ತುಂಬಿದರೆ ಶೂಲೆಗಳು ಹಲವು ।**
**ತೆರನಾಗಿ**
**ರುಜೆಗಳಿಂ ಕಾಲನೊಶನಕ್ಕು ಸರ್ವಜ್ಞ**

ನಮ್ಮ ಅಡುಗೆ ಮನೆಯಲ್ಲಿ ತಯಾರಾಗುವ ಬಹುಪಾಲು ಪದಾರ್ಥಗಳು ನಾಲಿಗೆಯನ್ನು ತಣಿಸಲು ತಯಾರಾಗುತ್ತಿವೆಯೇ

ಹೊರತು ಹೊಟ್ಟೆಯ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟು ಕೊಂಡಂತೆ ಕಾಣುವುದಿಲ್ಲ. ಹೀಗೆ ನಾಲಿಗೆಯ ಸವಿಗಾಗಿ ತಿಂದರೆ ಶೂಲೆಗಳು ಅಂದರೆ ನೋವುಗಳು; ಹೊಟ್ಟೆನೋವು, ತಲೆನೋವು, ಎದೆನೋವು, ಬೆನ್ನುನೋವು, ಮಂಡಿನೋವು ಮುಂತಾದ ಶೂಲೆಗಳು ಬಂದು 'ರುಜೆಗಳು' ಅಂದರೆ ರೋಗಗಳಿಂದ ನರಳಿ ಸಾಯಬೇಕಾಗುತ್ತದೆ. ನಾಲಿಗೆಯ ಸವಿಸುಖವನ್ನು ಬಯಸುವವನು ಹಿತಮಿತವಾಗಿ ತಿನ್ನುವುದಿಲ್ಲ. ಚೀಲವನ್ನು ತುಂಬಿದಂತೆ ಹೊಟ್ಟೆಯೆಂಬ ಚೀಲವನ್ನು ತುಂಬುತ್ತಿರುತ್ತಾನೆ. ಈ ಸಂದರ್ಭದಲ್ಲಿ ನಾಲಿಗೆಯ ರುಚಿಕರ ಹೀರೋ ಆದ ನೀರೋ ಚಕ್ರವರ್ತಿಯನ್ನು ನೆನೆಸಿಕೊಳ್ಳಬೇಕು. ಗ್ರೀಕ್ ನಾಗರೀಕತೆಯಲ್ಲಿ ಬರುವ ಇವನು ದಿನಕ್ಕೆ 15 ಸಾರಿ ಊಟ ಮಾಡುತ್ತಿದ್ದನಂತೆ. ಇಷ್ಟು ಸಾರಿ ಊಟ ಮಾಡುವವನಿಗೆ ಹಸಿವಾಗುವುದಂತೂ ಸಾಧ್ಯವೇ ಇಲ್ಲ. ಅವನು ಇಂಥಹ ಆಹಾರವನ್ನು ಹೊರಹಾಕಲು ವೈದ್ಯರಿಂದ ಮದ್ದು ತೆಗೆದುಕೊಂಡು ವಾಂತಿ ಮಾಡಿ ನಾಲಿಗೆಯ ಚಟಕ್ಕಾಗಿ ಮತ್ತೆ ತಿನ್ನುತ್ತಿದ್ದನಂತೆ. ಮುಂದೆ ಅವನು ಮಾಡಿದ ದುರಂತ ನಿಮಗೆಲ್ಲಾ ಗೊತ್ತೇ ಇದೆ. ಇಡೀ ರೋಮ್ ನಗರಕ್ಕೇ ಬೆಂಕಿ ಹಚ್ಚಿದವನಲ್ಲವೇ ? ನಿಜವಾಗಿ ಅವನೊಬ್ಬ ಹುಚ್ಚನೇ ಸರಿ. ನಾವುಗಳು ಅಷ್ಟು ಸಾರಿ ತಿನ್ನದಿದ್ದರೂ ಹಬ್ಬದ ದಿನಗಳಲ್ಲಿ ಅವನ ಅಣ್ಣ ತಮ್ಮಂದಿರೇ ಆಗಿರುತ್ತೇವೆ.

**ನಾಲಿಗೆಯ ಕಟ್ಟಿದನು ಕಾಲಂಗೆ ದೂರನಹ**
**ನಾಲಿಗೆಯ ರುಚಿಯ । ಮೇಲಾಡುತಿರಲವನ**
**ಕಾಲ ಹತ್ತಿರವು ಸರ್ವಜ್ಞ**

ಕೆಲವರಿಗೆ ದಿನವೂ ಮಾಂಸ ಬೇಕು. ಮತ್ತೆ ಕೆಲವರಿಗೆ ದಿನವೂ ಸಿಹಿ ತಿನಿಸು ಊಟದಲ್ಲಿ ಇರಲೇಬೇಕು. ಎಷ್ಟೋ ಜನ ಭಕ್ತರು ತಮ್ಮ ಮನೆಗಳಿಗೆ ಗುರುಗಳು ಅಥವಾ ಜಂಗಮರು ಬರುತ್ತಾರೆಂದರೆ ಹೋಳಿಗೆ ಮಾಡಲೇಬೇಕೆಂಬ ಸಂಪ್ರದಾಯವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಇದರ ಪರಿಣಾಮವೋ ಏನೋ ? ಬಹುಪಾಲು ಸ್ವಾಮಿಗಳಿಗೆ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯದ ಕಾಯಿಲೆಗಳು ಬಂದಿವೆ. ಇನ್ನು ನಮ್ಮ ರಾಜಕಾರಣಿಗಳ ಪರಿಸ್ಥಿತಿ ಹೇಳುವುದೇ ಬೇಡ. ಒಮ್ಮೆ ಮಂತ್ರಿಯೋ, ಮುಖ್ಯಮಂತ್ರಿಯೋ ಆಗಿ ಕೆಲ ತಿಂಗಳೋ ಅಥವಾ ವರ್ಷಗಳೋ ಕೆಲಸ ನಿರ್ವಹಿಸಿದರೆಂದರೆ ಮುಗಿಯಿತು. ಪದವಿ ಬಿಟ್ಟು ಕೆಳಗಿಳಿಯುವಷ್ಟರಲ್ಲಿ ಅನೇಕ ಕಾಯಿಲೆಗಳನ್ನು ಬಳುವಳಿಯಾಗಿ ಪಡೆದಿರುತ್ತಾರೆ. ಕಾರಣ, ಎಡಬಿಡದ ಕಾರ್ಯಕ್ರಮಗಳು, ಅಭಿಮಾನಿಗಳ ಪಾರ್ಟಿಗಳು, ಜಿಹ್ವೇಂದ್ರಿಯ, ಗುಹ್ಯೇಂದ್ರಿಯಗಳನ್ನು ಪ್ರಚೋದಿಸಿ ಹಳ್ಳಕ್ಕೆ ಬೀಳಿಸುವ ಹತ್ತಾರು ಪ್ರಸಂಗಗಳು. ಇಂತಹುಗಳಿಂದಾಗಿ ಪಾರಾಗಿ ಆರೋಗ್ಯವನ್ನು ಕಾಪಾಡಿಕೊಂಡು ನೈತಿಕತೆಯನ್ನು ಕಾಯ್ದುಕೊಂಡು ಪಾರಾಗುವ ರಾಜಾಕಾರಣಿಗಳು ಇಲವೆಂದೇ ನಾನು ಹೇಳುತ್ತಿಲ್ಲ. ಎಲ್ಲೊಬ್ಬರು ಇಲ್ಲೊಬ್ಬರು ಇರಬಹುದು. ಇಂತಹವರು ತುಂಬಾ ಅಪರೂಪ. ನಮಗೆ ದೊರೆತ ಪೂರ್ಣ ಆಯುಷ್ಯವನ್ನು ಬಳಸಿಕೊಂಡು ಆನಂದವಾಗಿ ಬದುಕುವ ಕ್ರಮವನ್ನು ಸರ್ವಜ್ಞನು ಹೇಳಿಕೊಡುತ್ತಾನೆ.

**ನಾಲಿಗೆಯ ಕಟ್ಟಿದನು ಕಾಲಂಗೆ ದೂರನಹ**

ನಾಲಿಗೆಯನ್ನು ಕಟ್ಟಿದನು ಎಂದರೆ ನಾಲಿಗೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡವನು, ಕಾಲಂಗೆ ದೂರನಹ ಎಂದರೆ ಸಾವಿಗೆ ದೂರನಾಗುತ್ತಾನೆ. ಅಕಾಲಿಕ ಮೃತ್ಯು ಅಪಮೃತ್ಯುಗಳಿಂದ ಪಾರಾಗುತ್ತಾನೆ. 'ನಾಲಿಗೆಯ ರುಚಿಯ ಮೇಲಾಡುತಿರಲವನ ಕಾಲ ಹತ್ತಿರವು ಸರ್ವಜ್ಞ' ನಾಲಿಗೆಯ ಮಾತನ್ನು ಕೇಳಿ ಸಿಕ್ಕ ಸಿಕ್ಕಲ್ಲಿ ಸಿಕ್ಕ ಸಿಕ್ಕಿದ್ದನ್ನೆಲ್ಲಾ ತಿಂದರೆ ಅವನ ಸಾವು ಹತ್ತಿರವೆನ್ನುತ್ತಾನೆ. ಇಷ್ಟೇ ಹೇಳಿ ಸರ್ವಜ್ಞ ನಮ್ಮ ಕೈ ಬಿಡುವುದಿಲ್ಲ. ನಾಲಿಗೆಯನ್ನು ಗೆಲ್ಲುವ ಗುಟ್ಟನ್ನೂ ಹೇಳಿಕೊಡುತ್ತಾನೆ.

**ನಾಲಿಗೆಯ ಕೀಲವನು ಶೀಲದಲಿ ತಾನರಿದು**
**ಶೂಲವದು ರುಚಿಯು ಎಂದಿಹನು । ಮುದಿಯಲ್ಲಿ**
**ಬಾಲನಂತಿಹನು ಸರ್ವಜ್ಞ**

ಬಹಳ ಮಾರ್ಮಿಕವಾದ ವಚನವಿದು. ಇಷ್ಟು ದೊಡ್ಡ ಶರೀರವನ್ನು ಇಡೀ ಭೂಮಂಡಲವನ್ನೇ ವ್ಯಾಪಿಸಿಕೊಳ್ಳುವಷ್ಟು ಶಕ್ತಿಶಾಲಿಯಾದ ಪ್ರಾಣಶಕ್ತಿಯನ್ನು ಸೂರ್ಯ ಚಂದ್ರ ನಕ್ಷತ್ರಗಳನ್ನೂ ಮೀರಿಸುವ ಪ್ರಜ್ಞೆಯನ್ನು ಹೊಂದಿರುವ ಆತ್ಮವನ್ನು ಒಂದು ಸಣ್ಣ ನಾಲಿಗೆ ಮೂರಿಂಚಿನ ಈ ನಾಲಿಗೆ; ಲಕ್ಷಾಂತರ ರುಚಿ ಗುಳ್ಳೆಗಳನ್ನು ಹೊಂದಿರುವ ಈ ಚಪ್ಪಟೆಯಾದ ಎಲುಬಿಲ್ಲದ ಈ ನಾಲಿಗೆ ಬಳಲಿಸಿ ಬೆಂಡಾಗಿಸುತ್ತದಲ್ಲ ! ರೋಗಕ್ಕೀಡು ಮಾಡಿ ಒದ್ದಾಡಿಸುತ್ತಲ್ಲ ! ಅದಕ್ಕೇ ಇರಬಹುದು ದಾಸವರೇಣ್ಯರಾದ ಪುರಂದರದಾಸರ 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ" ಎಂದು ಸಿಟ್ಟಿನಿಂದ ಕಠೋರವಾಗಿ ಹೇಳಿದ್ದಾರೆ.

**ಮುಂದುವರೆಯುವುದು......**

# ಸಿಂಹ ಘರ್ಜನೆ




ನಂದಿಗಾವಿ ಪ್ರಾಂತ್ಯದ ಪಾಳ್ಯಗಾರನ ಆಡಳಿತದಲ್ಲಿದ್ದ ಅನೇಕ ಕುಟುಂಬಗಳು ತುಂಗಾ–ಭದ್ರ ನದಿಯ ದಡದಲ್ಲಿ ವಾಸಿಸುತ್ತಿದ್ದು ಅವರೆಲ್ಲರೂ ಕೃಷಿಯನ್ನು ಅವಲಂಭಿಸಿದವರಾಗಿದ್ದರು. ಆಗಾಗ ಅರಸರ ದಬ್ಬಾಳಿಕೆಯಿಂದ ಕಂಗಾಲಾಗಿದ್ದು ಜೀವನ ಸಾಗಿಸುವುದು ಕಷ್ಟಕರವಾಗಿತ್ತು. ನಂದಿಗಾವಿ ಸಮೀಪದ ಪಾಳ್ಯ ಪ್ರದೇಶ ಫಲವತ್ತಾದ ಭೂಪ್ರದೇಶವನ್ನು ಹೊಂದಿದ್ದು ವಿಜಯನಗರದ ಅರಸ ಕಾಲದಲ್ಲಿ ಕೃಷಿ ಪ್ರಧಾನ ಸಮೃದ್ಧ ಜನಜೀವನ, ಶಾಂತಿ ಸಹಬಾಳ್ವೆ, ಪ್ರೀತಿ ವಿಶ್ವಾಸ ನೆಲೆಗೊಂಡಿತು. ವಿಜಯನಗರ ಅರಸರಿಗೆ ಪಾಳ್ಯದ ಪಾಳ್ಯಗಾರನು ತನ್ನ ನಿಷ್ಠೆ ಪ್ರಾಮಾಣಿಕತನದಿಂದ ನಡೆದುಕೊಳ್ಳುತ್ತಿದ್ದ ಎಂದು ಇತಿಹಾಸದ ದಾಖಲೆಗಳು ತಿಳಿಸುತ್ತವೆ. ಆಗಾಗ ಬರಗಾಲ, ಅರಸರ ಕದನಗಳಿಂದ ಕಂಗೆಟ್ಟು ಜೀವ ಉಳಿಸಿಕೊಳ್ಳಲು ಕಾಡುಮೇಡುಗಳನ್ನು ಆಶ್ರಯಿಸಬೇಕಾಯಿತು.

ಪಾಳ್ಯದಿಂದ ಪಲಾಯನಗೊಂಡ ಅನೇಕ ಕುಟುಂಬಗಳು ಕುಂಸಿ ನಾಡಿನ ಕಾಡುಪ್ರದೇಶದಲ್ಲಿ ತಲೆಮರೆಸಿಕೊಂಡು ಜೀವನ ನಡೆಸುವಂತಾಯಿತು. ದಿನಗಳುರುಳಿದಂತೆ ಬಯಲುಪ್ರದೇಶದಲ್ಲಿ ಉತ್ತಿ, ಬಿತ್ತು ಕೃಷಿ ಆರಂಭಿಸಿ ಜೀವನಕ್ಕೆ ಭದ್ರತೆಯನ್ನು ಕಂಡುಕೊಂಡ ಜನಾಂಗ, ಪಾಳ್ಯದ ನೊಳಂಬ ವಂಶದವರು ಅವರು ನೆಲೆನಿಂತ ಕುಗ್ರಾಮ ಕೊನಗವಳ್ಳಿ ಗ್ರಾಮ, ಶಿವಮೊಗ್ಗಕ್ಕೆ ಸು. 12 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪಕ್ಕದಲ್ಲಿ ತಾಳಗುಪ್ಪ ಬೆಂಗಳೂರು ರೈಲ್ವೆ ಮಾರ್ಗವಿದೆ. ಪಾಳ್ಯದ ಲಂಕೇಶ್ ಈ ಗ್ರಾಮದವರು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಏಕೆಂದರೆ ಲಂಕೇಶ್ ಒಬ್ಬ ಮೇಷ್ಟ್ರಾಗಿ, ಉತ್ತಮ ಲೇಖಕರಾಗಿ, ನಾಟಕಕಾರರಾಗಿ, ಅದರಲ್ಲೂ ಪತ್ರಿಕಾ ಮಾಧ್ಯಮದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಗರ್ಜಿಸಿದವರು. ಅನೇಕ ತಳಸಮುದಾಯದ ಲೇಖಕರನ್ನೂ ಪತ್ರಿಕಾ ಬರಹದ ಮೂಲಕ ಬೆಳಕಿಗೆ ತಂದವರು. ಅವರ ದೂರದೃಷ್ಟಿ ಜನಸಮುದಾಯದ ಕಡೆಗಿತ್ತು. ಅವರ ಆಲೋಚನೆಗಳು ಅಲ್ಪಸಂಖ್ಯಾತರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಮೇಲೆತ್ತುವತ್ತ ಸಾಗಿತ್ತು. ಉದಾ : ಅವರು ಪ್ರತಿ ತಿಂಗಳು ಅವರ ಗ್ರಾಮದ ಕಮ್ಮಾರ, ಬಡಗಿ, ಅಗಸ ಇತರ ಬಡ ಕುಟುಂಬದವರಿಗೆ ಕಳುಹಿಸುತ್ತಿದ್ದ ಮಾಸಿಕ ವೇತನ ಸಾಕ್ಷಿ. ಕೊನಗವಳ್ಳಿ ಕುಗ್ರಾಮವಾಗಿದ್ದರೂ ಸಹ ಮಲೆನಾಡಿನ ಪರಿಸರದ ಸುಂದರ ಗ್ರಾಮವಾಗಿತ್ತು. ಲಂಕೇಶ್‌ರವರ ಅನೇಕ ಬರಹಗಳಲ್ಲಿ ನಾವು ಗಮನಿಸಬಹುದಾದ ಅಂಶಗಳು ಅವರ ಒಡನಾಡಿಗಳು ಪ್ರೀತಿಯ ಸ್ನೇಹಿತರು, ಹಾರನಹಳ್ಳಿಯ ಪರಿಸರದ ಗೆಳೆಯರ ಕುರಿತು ಬರೆದ ಬರಹಗಳಿಂದ ತಿಳಿದು ಬರುತ್ತದೆ. ಲಂಕೇಶ್ ಮೇಷ್ಟ್ರಿಗೆ ಕೊನಗವಳ್ಳಿ ಗ್ರಾಮದೇವತೆ ಕರಿಯಮ್ಮದೇವಿ ಅಚ್ಚುಮೆಚ್ಚು. ಅವರ ಬಾಲ್ಯ ಜೀವನದಿಂದ ಓದು, ವಿದ್ಯಾಭ್ಯಾಸ, ಸರ್ಕಾರಿ ಸೇವೆ, ಸಿನಿಮಾ, ಪತ್ರಿಕೆ ಪ್ರಾರಂಭ ಮಾಡುವವರೆಗೆ ಅನೇಕ ಏಳುಬೀಳುಗಳನ್ನು ತಮ್ಮ ಜೀವನದಲ್ಲಿ ಕಂಡಿದ್ದಾರೆ. ಯಾವುದಕ್ಕೂ ಜಗ್ಗದ ಕುಗ್ಗದ ವ್ಯಕ್ತಿತ್ವ ಲಂಕೇಶ್ ಮೇಷ್ಟ್ರದ್ದು. ಅವರ ಬರವಣಿಗೆ ಸಿಂಹ ಗರ್ಜನೆಯಂತಿದ್ದರೂ ಎಲ್ಲರೂ ಅವರನ್ನು ಪ್ರೀತಿಸುವರೇ ಆಗಿದ್ದರು. ಉದಾ : ಲಂಕೇಶ್ ಪತ್ರಿಕೆ 24 ವರ್ಷ ಪೂರೈಸಿದ ಸಮಾರಂಭ ಸಾಕ್ಷಿಯಾಗಿದ್ದು.

ಲಂಕೇಶ್ ಕುಂಟುಂಬದ ಹಿರಿಯರು ಪಾಳ್ಯದಿಂದ ವಲಸೆ ಬಂದು ನೆಲೆಸಿದವರಾಗಿದ್ದರೂ ಸಹ ಮೂಲ ಮಣ್ಣಿನ ಸಂಬಂಧವನ್ನು ಕಡಿದುಕೊಂಡಿರಲಿಲ್ಲ. ಪಾಳ್ಯದ ನಂದಿಬಸಪ್ಪ, ತಾಯಿ ದೇವಿರಮ್ಮ (ಒಡ ಹುಟ್ಟಿದವರಾದ ಶಿವರುದ್ರಪ್ಪ, ಸಿದ್ಲಿಂಗಮ್ಮ, ದೊಡ್ಡಕ್ಕ–ಸಣ್ಣಕ್ಕ) ಅವರೊಂದಿಗೆ ಕಿರಿಯರಾಗಿ ಜನಿಸಿದ್ದು, ಮಲೆನಾಡಿನ ಪರಿಸರದೊಂದಿಗೆ ಬೆಳೆದು ಕೊನಗವಳ್ಳಿ, ಆಯನೂರು, ಹಾರ್ನಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜ್, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಉನ್ನತ ಶಿಕ್ಷಣ ಮುಗಿಸಿ ಮರಳಿ ತವರಿಗೆ ಬಂದರು.

ಶಿವಮೊಗ್ಗ ನಗರದ ಸಮಾಜ ಸೇವಕ ಎಸ್.ಕೆ.ಸೋಮ ಸುಂದರಪ್ಪ ಕುಸ್ಕೂರು ಇವರ ಮಗಳಾದ ಶ್ರೀಮತಿ ಇಂದಿರಾ ರವರನ್ನು ಸಂಗಾತಿಯನ್ನಾಗಿ ಮಾಡಿಕೊಂಡರು. ಲಂಕೇಶ್ ಮತ್ತು ಇಂದಿರಾರವರಿಗೆ ಮೂರುಜನ



**ಕತ್ತಿಗೆ ಚನ್ನಪ್ಪ**
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

ಮಕ್ಕಳು. ಅವರಲ್ಲಿ ಲಿಂ|| ಗೌರಿ ಲಂಕೇಶ್, ಇಂದ್ರಜಿತ್ ಲಂಕೇಶ್, ಕವಿತಾ ಲಂಕೇಶ್.




ಲಂಕೇಶ್ ಪತ್ರಿಕೆ ಓದುಗರ ನಿದ್ರೆಗೆಡಿಸುತ್ತಿತ್ತು. ನೀಲು ಅವರ ಕಲ್ಪನೆಯ ಕೂಸು. ಇವರು ಬಳಸುವ ಭಾಷೆ, ಶಬ್ದ ಜೋಡಣೆ, ಚಿತ್ರವಿನ್ಯಾಸ ಇವು ಓದುಗರಿಗೆ ಪ್ರಿಯವಾಗಿತ್ತು. ಪತ್ರಿಕಾರಂಗದಲ್ಲೂ ಸಹ ಲಂಕೇಶ್‌ರವರಿಗೆ ಮನಸ್ಸಿಗೆ ಸಮಾಧಾನವಿರಲಿಲ್ಲ. ಅನೇಕ ಕಡೆ ಆಪಾದನೆಗಳನ್ನು ನಿಂದನೆಗಳನ್ನು ಎದುರಿಸಬೇಕಾಯಿತು.

ಛಲಬಿಡದ ತ್ರಿವಿಕ್ರಮನಂತೆ ಆನೆ ನಡೆದದ್ದೇ ದಾರಿ ಎಂಬಂತೆ ಮೇಷ್ಟ್ರು ಸಾಗಿದ್ದರು. ಅಪ್ರಾಮಾಣಿಕತೆ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇವುಗಳನ್ನು ಕಾಣುತ್ತೇವೆ. ಇವು ಲಂಕೇಶ್ ಜೀವನದಲ್ಲೂ ಸಹ ಹೊರತಾಗಿರಲಿಲ್ಲ. ಲಂಕೇಶ್ ಪತ್ರಿಕೆ ಮೂಲಕ ತನ್ನ ಸಾಮರ್ಥ್ಯವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಏಕೈಕ ವ್ಯಕ್ತಿ. ಲಂಕೇಶ್ ಮೇಷ್ಟ್ರು ಎರಡು ನೆನಪಿನ ಸುರುಳಿ ನೆನಪಿಸಿಕೊಳ್ಳುತ್ತೇನೆ. ಅವರ ಹೆಸರಲ್ಲಿ ಒಂದು ರಂಗಮಂದಿರ ನಿರ್ಮಾಣದ ಉದ್ಘಾಟನೆಗೆ ಕರೆಯಲು ಹೋದಾಗ ಅವರು ಹೇಳಿದ ಮಾತು, ನನ್ನ ಹೆಸರಿನ ಕಟ್ಟಡ ಉದ್ಘಾಟನೆಗೆ ನಾನು ಬಂದರೆ ನನ್ನನ್ನು ಕ್ರೈಂ ಎಂದು ಹೇಳುತ್ತಾರೆ. ಅದರ ಬದಲು ಶ್ರೀ ಟಿ.ಎಂ.ಮಂಜುನಾಥ್‌ರವರನ್ನು ಕರೆದುಕೊಂಡು ಹೋಗಲು ತಿಳಿಸಿದ್ದು, ಅವರೇ ದೂರವಾಣಿ ಮೂಲಕ ಮಾತನಾಡಿ ಒಪ್ಪಿಸಿದರು. ಅನಂತರದಲ್ಲಿ ಯುವಕ ಯುವತಿಯರು ಉದ್ಯೋಗ ಮಾಡುವುದರ ಮೂಲಕ ಗ್ರಾಮೀಣ ಹೆಣ್ಣು ಮಕ್ಕಳು ಗುಡಿ ಕೈಗಾರಿಕೆಗಳಲ್ಲಿ ತಮ್ಮನ್ನು ತೊಡಗಿಸಿ




ಕೊಳ್ಳಬೇಕು. ಆರ್ಥಿಕ ಸ್ವಾವಲಂಬನೆಗಳಾಗಬೇಕೆಂಬ ದೂರದೃಷ್ಟಿ ಅವರ ಮಾತನ್ನು ಪುಷ್ಟೀಕರಿಸುವಂತೆ ನಾನು ಕೈಗಾರಿಕಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಲಂಕೇಶ್‌ರವರ ಸ್ವಗ್ರಾಮದಲ್ಲಿ ಹಾಗೂ ಒಂದು ತಿಂಗಳ ಕಾಲ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಿದ್ದು ಅಲ್ಲಿಯ ಹೆಣ್ಣುಮಕ್ಕಳು ಹೊಲಿಗೆ ತರಬೇತಿ, ಕಸೂತಿ, ಕರಕುಶಲ ವಸ್ತು ತಯಾರು ಮಾಡುವಂತೆ ಮಾರ್ಗದರ್ಶನ ನೀಡಲಾಯಿತು. ಹೊನ್ನಾಳಿ ತಾಲ್ಲೂಕಿನ ಅನೇಕ ಗ್ರಾಮಗಳಿಗೆ ಭೇಟಿಕೊಟ್ಟಿದ್ದ ಸಂದರ್ಭದಲ್ಲಿ ಲಂಕೇಶ್‌ರವರ ಹಪ್ಪಳ, ಉಪ್ಪಿನಕಾಯಿ, ಕೌದಿ ತಯಾರಿಕೆ, ಚಟ್ನಿಪುಡಿ, ಕೆಂಪು ಹಿಂಡಿ ಇವುಗಳನ್ನು ತಯಾರು ಮಾಡಿ ಬೆಂಗಳೂರಿಗೆ ಕಳುಹಿಸಿಕೊಡಿ ನಾನು ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ಹೇಳಿ, ಅದೇ ರೀತಿ ಈ ಭಾಗದ ಹೆಣ್ಣುಮಕ್ಕಳಿಗೆ ಆರ್ಥಿಕ ಸದೃಢತೆಯನ್ನು ಕಲ್ಪಿಸಿಕೊಟ್ಟರು. ಲಂಕೇಶ್‌ರವರ ಹೆಸರೇ ಸೂಚಿಸುವಂತೆ ಲಂಕಾಧಿಪತಿ ಅವರ ನಿಲುವು ಅವರಿಗೆ ಸರಿಸಾಟಿಯಾಗಿತ್ತು. ರಾಜಕೀಯ ಸ್ಥಿತ್ಯಂತರವನ್ನು ತಲೆಕೆಳಗು ಮಾಡಬಲ್ಲದು ಒಂದು ಪತ್ರಿಕೆ ಎಂಬುದನ್ನು ಲಂಕೇಶ್ ಪತ್ರಿಕೆ 'ಬಂ' 'ಗುಂ' ಮೂಲಕ ತೋರಿಸಿಕೊಟ್ಟಿತ್ತು ಎಂಬುದನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರೂ ಮರೆಯುವಂತಿಲ್ಲ.

**ನೊಳಂಬವಾಣಿಯ ಚಂದಾದಾರರಲ್ಲಿ ಮನವಿ**

ನೊಳಂಬವಾಣಿಯ ಚಂದಾದಾರರು ವಿಳಾಸ ಬದಲಾವಣೆ ಮಾಡಬೇಕಾದರೆ ಮತ್ತು ಪತ್ರಿಕೆ ಬಾರದೇ ಇದ್ದಲ್ಲಿ, ಚಂದಾ ಹಣದ ಮೂಲ ರಸೀದಿ, ಅವಧಿ, ಹಳೆಯ ವಿಳಾಸ, ಕ್ರಮ ಸಂಖ್ಯೆ ಹಾಗೂ ಹೊಸ ವಿಳಾಸದ ಪೂರ್ಣ ಪಿನ್‌ಕೋಡ್ ಸಂಖ್ಯೆ, ಮೊಬೈಲ್ ನಂಬರನ್ನು ಸಂಪಾದಕರ ದೂರವಾಣಿ ಸಂಖ್ಯೆಗೆ ವಾಟ್ಸ್ ಅಪ್ ಮೂಲಕ ಕಳುಹಿಸಬೇಕಾಗಿ ತಮ್ಮಲ್ಲಿ ವಿನಂತಿ.

# ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗ

**ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ**
**ಎನ್ನ ಬಾಳುವೆ**
**ಸಂಸಾರ ಸಂಗವ ಬಿಡದು ನೋಡೆನ್ನ ಮನವು**
**ಕೂಡಲಸಂಗಮದೇವಯ್ಯಾ ನಿಮ್ಮಧರ್ಮಾ**
**ಶುನಕಪ್ಪುದಲ್ಲದೆ ಪರುಷವಾಗದು............**
**ಕೋಣ ಹೇರಿಂಗೆ ಕುನ್ನಿ ಬುಸುಗುತ್ತ ಬಡುವಂತೆ............**
**ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟ ಜ್ಞಾನವೆಂಬ ಜ್ಞಾನ**
**ತ್ರಯಂಗಳೇ ನಾದ........**
**ಶ್ವಾನ ಮಡಕೆಯನಿಳುಹಿ ಬೋನವ ತಿಂದು**
**ಏರಿಸಲರಿಯದಂತೆ,**
**ಕಾಂಚಾನವೆಂಬ ನಾಯ ನೆಚ್ಚಿ ಬೆಲ್ಲವ ತಿಂದ ಕೋಡಗನಂತೆ..**
**ಶ್ವಾನನ ನಿದ್ರೆ ಅಜ್ಞಾನಿಯ ತಪದಂತೆ**
**ತುಡುಗು ನಾಯನು ಹಿಡಿದು ತಂದು**
**ಸಾಕಿದಡೆ ತನ್ನೊಡೆಯಂಗೆ ಬಗಳುವಂತೆ,**
**ನಾಯಿಗೆ ನಾರಿವಾಣವನಿಕ್ಕುವುದೆ ?**
**ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ**
**ಹೊಗುವಂತೆ ಆನೆಯ ಮೇಲೆ ಹೋಗುವವನ ಶ್ವಾನ**
**ಕಚ್ಚಬಲ್ಲುದೆ ? ಕುಡಿಕೆಗೆ ಮೆಚ್ಚಿದ ಸೊಣಗ**
**ಅಮೃತದ ರುಚಿಯ ಬಲ್ಲುದೆ ?**
**ಹೊರಿಸಿಕೊಂಡು ಹೋದ ನಾಯಿ ಮೊಲನೇನ**
**ಹಿಡಿವುದಯ್ಯಾ.........**
**ನಾಯ ಮೊಲೆಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ**
**ಸಲ್ಲದಯ್ಯಾ..................**
**ವೇಷ ಅವಿಚಾರದಲ್ಲಿ ನಡೆಯಿತ್ತೆಂದು ಆತುರದಲ್ಲಿ ಬಗುಳುವ**
**ಕುನ್ನಿನೀ ಕೇಳಾ,**
**ಒಂದು ಮೊಲಕ್ಕೆ ನಾಯನೊಂಭತ್ತು ಬಿಟ್ಟಂತೆ.............**

ವಚನ ಸಾಹಿತ್ಯದಲ್ಲಿ ಪ್ರಕೃತಿ, ಪ್ರಾಣಿ, ಪಕ್ಷಿ, ನದಿ ಗಿಡ ಮರ ಬಳ್ಳಿ, ಸೂರ್ಯ, ಚಂದ್ರ, ಸಮುದ್ರ, ಮುಂತಾದವನ್ನು ಹೇರಳವಾಗಿ ತಮ್ಮ ವಚನಗಳಲ್ಲಿ ಪ್ರತಿಮೆಗಳನ್ನಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಅವುಗಳ ಗುಣ ವಿಶೇಷಗಳನ್ನು, ರೀತಿ ನೀತಿ, ಅವುಗಳ ಸ್ವಭಾವಗಳ, ದೇಹರಚನೆ, ಓಡಾಟ, ಒಡನಾಟ, ಎಲ್ಲವನ್ನು ಹಲವು ವಚನಕಾರರ ವಚನಗಳಲ್ಲಿ ಕಾಣಬಹುದು.

ಇವುಗಳಲ್ಲಿ ನಾಯಿಯ ಪ್ರತಿಮೆಯ ಮೂಲಕ ಬಸವಣ್ಣನವರು ತಮ್ಮ ಅನುಭವಗಳನ್ನು ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ಹಲವು ವಚನಗಳಲ್ಲಿ ನಾವು ನೋಡಬಹದು. ಮನುಷ್ಯನ ಮನೋವಿಕಾರವನ್ನು ನಾಯಿಯ ರೂಪಕದಿಂದ ತಿಳಿಸಿದ್ದಾರೆ. ಹಲವೊಮ್ಮೆ ನಾಯಿಯ ಸ್ವಭಾವವನ್ನು ಹೋಲುತ್ತದೆಂಬುದನ್ನು ಈ ವಚನದಿಂದ ತಿಳಿಯಬಹುದು. ನಾಯಿ ತುಂಬ ಕ್ರಿಯಾಶೀಲವಾದರು ಅಷ್ಟೆ ತೀವ್ರವಾದ ಚಂಚಲತೆಯನ್ನು ಹೊಂದಿರುವಂತದ್ದು. ನಮ್ಮ ಮನಸ್ಸಿನ ಚಂಚಲತೆಯನ್ನು ಮಂಗ, ನಾಯಿ ಕೋತಿಗಳಿಗೆ ಸಾಮಾನ್ಯವಾಗಿ ಹೋಲಿಸುವುದನ್ನು ಕಾಣುತ್ತೇವೆ. ಬಸವಣ್ಣನವರು ತಾವು ಜೀವನದಲ್ಲಿ ಕಂಡುಂಡ ಸತ್ಯಗಳನ್ನೆ ಇಲ್ಲಿ ಬಿಚ್ಚಿಡುತ್ತಾ ಹೋಗುತ್ತಾರೆ. ಮಹಾಮನೆಯ ಶಿವಗಣ ತಿಂತಿಣಿಯ ನಡುವೆ ಪ್ರಸಾದ ವಿನಿಯೋಗದ ಸಂದರ್ಭದಲ್ಲುತಾನು ನಾಯಿತೇಜವ ಹೊತ್ತುಕೊಂಡವನೆಂದು ತಮ್ಮ ಆತ್ಮವಿಮರ್ಶೆಯನ್ನು ತಾವೇ ಮಾಡಿಕೊಳ್ಳುತ್ತಿರುವ ಬಸವಣ್ಣನವರು ಒಬ್ಬ ಉತ್ತಮ ಆತ್ಮಚಿಕಿತ್ಸಕರು.

ಮನುಷ್ಯನ ಮನಸ್ಸಿನ ಚಂಚಲತೆಯನ್ನು ತಿಳಿಸಿದ್ದಾರೆ. ಮನುಷ್ಯನ ಮನೋವಿಕಾರ ನಾಯಿಯ ಸ್ವಭಾವಕ್ಕೂ ಸ್ವಾಮ್ಯತೆಯನ್ನು ಇಲ್ಲಿ ಕಾಣಬಹುದು. ಮನೋ ಚಿಕಿತ್ಸಕನಾಗಿರುವ ಬಸವಣ್ಣನವರು ಮನೋವಿಕಾರದಿಂದಲೆ ಕಾಯ ವಿಕಾರವೆನ್ನುತ್ತಾರೆ. ಸೊಣಗ ನಮ್ಮೊಳಗಿನ ವಿಕಾರಗಳ ಸಂಕೇತ. ನಾಯಿ ನಿಯತ್ತಿನ ಪ್ರಾಣಿ. ನಿಷ್ಠಾವಂತ ಪ್ರಾಣಿ. ನಾಯಿಗೆ ಘ್ರಾಣೇಂದ್ರಿಯ ಶಕ್ತಿ ಬಹಳ. ಇದನ್ನುಗೂಢಾಚಾರದ ಕೆಲಸಕ್ಕು ಹಚ್ಚುತ್ತಾರೆ. ತನ್ನ ಈ ಶಕ್ತಿಯಿಂದಲೆ ಆಹಾರವನ್ನು ಹುಡುಕಿ ಬಿಡುತ್ತದೆ. ಹಿಂದಿನವರು ಕಬ್ಬಿಣ ಮುಂತಾದವುಗಳಿಂದ ಮಾಡಿದ ವಸ್ತುಗಳಿಗೆ ಎಣ್ಣೆ ಅಥವಾ ತುಪ್ಪವನ್ನು ಹಚ್ಚುತ್ತಿದ್ದರು. ಕಾರಣ ಅವು ತುಕ್ಕು ಹಿಡಿಯಬಾರದೆಂದು. ಅದೊಮ್ಮೆ ಚೂಪಾದ ಆಯುಧದ ಮೇಲೆ ತುಪ್ಪ ಅಂಟಿರುವುದು ನಾಯಿಗೆ ತಿಳಿದುಬಿಡುತ್ತದೆ. ಸರಿ ಕೇಳಬೇಕೇ? ತುಪ್ಪದ ಸವಿಗೆ ಮೆಚ್ಚುತ್ತಾ ಆ ಅಲಗಿನ ತುದಿಯನ್ನು ನೆಕ್ಕುತ್ತಾ ಹೋಗುತ್ತದೆ. ತುಪ್ಪ ಮುಗಿದರೂ ಅಲಗಿನ ತುದಿ



**ಸುಶೀಲ ಸೋಮಶೇಖರ್**
'ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ನೆಕ್ಕುವುದನ್ನು ಮಾತ್ರ ಅದು ಬಿಡುತ್ತಿಲ್ಲವೆಂಬುದು ವಾಸ್ತವಿಕ ಸತ್ಯ. ಜೋರಾಗಿ ನೆಕ್ಕುತ್ತಾ ಹೋದಂತೆಚೂಪಾದ ಅಲಗಿನ ತುದಿಗೆ ಸಿಕ್ಕ ನಾಲಗೆಯಿಂದ ರಕ್ತ ಸುರಿಯಲಾರಂಭಿಸುತ್ತದೆ. ಅದನ್ನೂ ಗಮನಿಸದೆ ಅದೂ ನೆಕ್ಕುತ್ತಲೆ ಹೋದಂತೆ ನಾಲಗೆ ತುಂಡಾಗಿ ಮರಣ ಹೊಂದುತ್ತದೆ. ಸಾಮಾನ್ಯವಾಗಿ ಯಾರಿಗೆ ಆಗಲಿ ತೃಪ್ತೋಸ್ಮಿ ಎಂಬುದಿಲ್ಲ. ಸದಾ ಅತೃಪ್ತಿಯಲ್ಲಿ ಬಳಲುವ ಮನುಷ್ಯನ ಮನಸ್ಸನ್ನು ಇಲ್ಲಿ ನಾಯಿಯ ನಾಯಿತನವನ್ನು ಕಟ್ಟಿಕೊಡುವುದರ ಜತೆಜತೆಯಲ್ಲೆ ನಿಸ್ಸಂಕೋಚವಾಗಿ ನಮ್ಮ ಬದುಕನ್ನೂ ಸಮೀಕರಿಸುತ್ತಾರೆ. ಬಸವಣ್ಣನವರದು ಎಂತಹ ಅದ್ಭುತ ಆಲೋಚನೆ. ಇಂತಹ ನಾಯಿತನದ ಮನವನ್ನು ಹೋಗಲಾಡಿಸು ಎಂದು ಬೇಡುತ್ತಿದ್ದಾರೆ.

ನಮಗರಿವಿಲ್ಲದೆ ಆ ನಾಯಿತನ ನಮ್ಮನ್ನೂ ಆಳುತ್ತದೆ. ಕೇವಲ ಆಶೋತ್ತರಗಳ ಮಹಾಪೂರವನ್ನೆ ಹೊತ್ತಿರುವ ನಾವೂ ಕೂಡ ವಿಷಯಗಳೆಂಬ ಸುಖದ ತುಪ್ಪದ ಸವಿಗೆ ಸಂಸಾರವೆಂಬ ಅಲಗನ್ನು ನೆಕ್ಕುತ್ತಾ ಹೋಗುತ್ತೇವೆ. ತುಪ್ಪವೆಂಬ ಸುಖ ನಮಗೆ ಬೇಕು ನಿಜ. ಆದರೆಅದನ್ನೆ ನೆಕ್ಕುತ್ತಾ ಹೋದಂತೆ ನಮ್ಮ ಒಳಜ್ಞಾನವನ್ನೆ ಕಳೆದುಕೊಳ್ಳುತ್ತೇವೆ. ಪ್ರಭುದೇವರು ಹೇಳುವಂತೆ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಪಡುತ್ತೇವೆ. ಅಷ್ಟು ಬೇಕು ಇಷ್ಟು ಬೇಕು ಇನ್ನಷ್ಟು ಬೇಕು ಎಂಬ ಧಾವಂತದಲ್ಲಿ ಸುಖದ ಸುಖವನ್ನು ಅರಸುತ್ತಾ ಹೋಗುತ್ತೇವೆ. ಇಂದಿಗಷ್ಟೆ ಅಲ್ಲ. ನಾಳೆಗೂ ಕೂಡಿಡುತ್ತೇವೆ. ಸಂಗ್ರಹದ ಭ್ರಮೆಯಲ್ಲಿ ನಮ್ಮ ಆತ್ಮವನ್ನು ನಾವೆ ಮರೆತುಬಿಡುತ್ತೇವೆ. ಹಣಗಳಿಕೆಯೊಂದೇ ಜೀವನದ ಪರಮಗುರಿಯಾಗಿ ಇಹಪರ ಸಾಧನೆ ನಮ್ಮೊಳಗೆ ಇಣುಕದಂತಾಗುತ್ತದೆ. ಆಧ್ಯಾತ್ಮ ಸಂಪತ್ತಿನಲ್ಲಿ ಶ್ರೀಮಂತರಾಗಬೇಕು. ನಿಶ್ಚಿಂತ ನಿರಾಳ ಬದುಕಾಗಬೇಕು ಎಂಬ ಹಂಬಲ ಇವರದು.

**ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು**
**ಮುನ್ನಿನ ಸ್ವಭಾವವನು ಸುಡು ಸುಡು ಮನವಿದು**
**ವಿಷಯಕ್ಕೆ ಹರಿವುದು ಮೃಡ ನಿಮ್ಮನನುದಿನ**
**ನೆನೆಯಲೀಯದು ಎನ್ನೊಡೆಯ ಕೂಡಲ ಸಂಗಮದೇವಾ**
**ನಿಮ್ಮಚರಣವ ನೆನೆವಂತೆ ಕರುಣಿಸು**
**ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮಾ**

ತಮ್ಮ ಈ ವಚನದಲ್ಲಿ ಬಸವಣ್ಣನವರು ಹೀಗೆ ಹೇಳುತ್ತಾರೆ. ಕೆಲವರು ತಮ್ಮ ಕಪಟ ವೇಷಗಳನ್ನು ಹೊತ್ತು ಡಂಭಾಚಾರವನ್ನು ಮೆರೆಯುತ್ತಾರೆ. ಅಲ್ಲಿ ಜ್ಞಾನವಿಲ್ಲದ ಪೂಜೆ ಮಾಡುತ್ತಾರೆ. ನಾಯಿ ತುಂಬಾ ಸೂಕ್ಷ್ಮಜೀವಿ. ಒಂದು ಸಾಸಿವೆ ಕಾಳು ಬಿದ್ದರೂ ನಿದ್ರೆಯನ್ನು ಕಳೆದುಕೊಳ್ಳುತ್ತದೆ. ಅಂತೆಯೆ ಮನುಷ್ಯರೂ ಕೂಡ. ಸಿಂಹಾಸನವನ್ನು ಏರಿದ ನಾಯಿ ಅತ್ತಇತ್ತ ಮಾಂಸದ ಚೂರನ್ನೊ ಮೂಳೆಯನ್ನೋ ಕಂಡರಾಯಿತು. ತಾನಿರುವ ಜಾಗವನ್ನೆ ಅದು ಮರೆತು ಬಿಡುತ್ತದೆ. ಮಾಂಸಕ್ಕೆ ಜೋತು ಬಿದ್ದ ನಾಯಿಯ ಸ್ಥಿತಿ ತನ್ನದಾಗಿದೆ. ಕೀಳು ಆಸೆಗಳು ಕಣ್ಣು ಕಿವಿಗೆ ರಾಚಿ ಅಪ್ಪಳಿಸುತ್ತವೆ. ಶಿವ ಚಿಂತೆಯ ಬದಲು ವಿಷಯಗಳ ಚಿಂತೆಯು ಸಂತೆಯಾಗುತ್ತದೆ ನಮ್ಮ ಮನಸ್ಸು. ನಿನ್ನನ್ನು ಅನುದಿನ ನೆನೆಯಲು ಇವು ಬಿಡವು. ನನ್ನೊಳಗಿನ ಮನೋವಿಕಾರಗಳನ್ನು ಹರಿದೊಗೆದು ನನ್ನನು ನಿನ್ನೊಳಗಿರಿಸು ಎಂದು ಕೂಡಲ ಸಂಗಯ್ಯನಲ್ಲಿ ಬೇಡುತ್ತಿದ್ದಾರೆ. ವಿಷಯಾಸಕ್ತಿಗೆ ಜೋತು ನಿನ್ನನ್ನು ಮರೆತಿದ್ದೇನೆ. ನನ್ನ ಈ ಮನೋವಿಕಾರವನ್ನು ಸುಡು ಸುಡು ಎಂದು ಬೇಡುತ್ತಿದ್ದಾರೆ.

---

**4ನೇ ಪುಟದಿಂದ.....**

ಭಗವದ್ಗೀತೆಯ ಪ್ರಕಾರ ಕರ್ಮಕ್ಕೆ (ಕಾಯಕ/ಅಕ್ಷನ್) ಫಲವನ್ನು(ರಿಸಲ್ಟ್) ಅಪೇಕ್ಷಿಸಬಾರದು. ಫಲಾಪೇಕ್ಷೆಯನ್ನು ಮನಸ್ಸಿನಿಂದ ತೊಡೆದು ಹಾಕಬೇಕು. ಹೀಗೆ ಕಾಯಕ ಅಥವಾ ಕರ್ಮದ ಫಲವನ್ನು 'ತ್ಯಾಗ' ಮಾಡುವುದಾದರೆ ಅಲ್ಲಿ ಬದುಕು ಹೇಗೆ ಸಾಧ್ಯ, ಅಭಿವೃದ್ಧಿ ಹೇಗೆ ಸಾಧ್ಯ?. ಈ ಕಾರಣದಿಂದ ಭಗವದ್ಗೀತೆಯ 'ಕರ್ಮಫಲತ್ಯಾಗ' ಸಿದ್ಧಾಂತವು ಅಭಿವೃದ್ಧಿಯನ್ನು ಜನಕಲ್ಯಾಣವನ್ನು ವಿರೋಧಿಸುವ ಸಿದ್ಧಾಂತವಾಗಿದೆ. ಈ ವ್ಯವಸ್ಥೆಯಲ್ಲಿ ಯಾರು ಯಾವ ಜಾತಿಯಲ್ಲಿ ಹುಟ್ಟಿರುತ್ತಾರೋ ಮತ್ತು ಯಾವ ವೃತ್ತಿಯನ್ನು ಮಾಡುತ್ತಿರುತ್ತಾರೋ ಅದರಲ್ಲಿಯೇ ಬದುಕನ್ನು ಕಳೆಯಬೇಕು. ವೈದಿಕ ವ್ಯವಸ್ಥೆಯಲ್ಲಿ ಜಾತಿ–ವೃತ್ತಿಯನ್ನು ಬದಲಾಯಿಸುವಂತಿಲ್ಲ. ಇದೊಂದು ಯಥಾಸ್ಥಿತಿವಾದಿ ಸಿದ್ಧಾಂತವಾಗಿದೆ.

ಆದರೆ ಬಸವ ಸಂವಿಧಾನದ ಕರ್ಮಫಲ ಭೋಗ ಸಿದ್ಧಾಂತವು ಗತಿಶೀಲವಾದುದು ಮತ್ತು ವೃತ್ತಿಯು ಜಾತಿಗೆ ಸಂಬಂಧಿಸಿದುದಲ್ಲ. ಬಸವಣ್ಣನವರೇ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಅವರು ಮಂತ್ರಿ ವೃತ್ತಿಯನ್ನು ನಿರ್ವಹಿಸಿದರು. ಆದ್ದರಿಂದ ಇಂದು ನಮ್ಮ ಸಮಾಜಕ್ಕೆ, ಆರ್ಥಿಕತೆಗೆ ಅಗತ್ಯವಾಗಿರುವುದು ಕರ್ಮಫಲಭೋಗ ಸಿದ್ಧಾಂತವೇ ವಿನಾ ಕರ್ಮಫಲ ತ್ಯಾಗ ಸಿದ್ಧಾಂತವಲ್ಲ.

# ಸಾರ್ಥಕ ಸಾಧನೆಯ ಹಾದಿಯ ಶ್ರೇಯಾಂಕ್

ಮನುಷ್ಯ ವಿಶೇಷ ಬುದ್ಧಿವಂತಿಕೆಯನ್ನು ಪಡೆದುಕೊಂಡು ಹುಟ್ಟಿದ್ದಾನೆ. ಆದರೆ ತನ್ನ ಬುದ್ಧಿಶಕ್ತಿ ಮತ್ತಷ್ಟು ಪ್ರಕಾಶಗೊಳ್ಳಲು ಮತ್ತಷ್ಟು ಸಂಸ್ಕಾರ ದೊರೆಯುವುದು ವಿದ್ಯಾರ್ಜನೆಯಿಂದ ಮಾತ್ರ. ಸರಿಯಾದ ಶಿಕ್ಷಣ ದೊರೆಯದೆ ಹೋದಲ್ಲಿ ಪ್ರಾಣಿಗಳಿಗೂ ಮನುಷ್ಯನಿಗೂ ವ್ಯತ್ಯಾಸವೇ ಇರುವುದಿಲ್ಲ. ಚಿಂತನೆ ಇಲ್ಲದಿದ್ದರೆ ಯಶಸ್ಸು ಸಿಕ್ಕುವುದಿಲ್ಲ. ಹಾಲಿನಲ್ಲಿ ಅಡಗಿರುವ ತುಪ್ಪದಂತೆ ಪ್ರತೀ ಜೀವಿಯಲ್ಲಿ ಅಂತರ್ಗತ ಸಾಧನೆಗೆ ಪೂರಕಜ್ಞಾನ ಸೃಷ್ಟಿಸಿಕೊಳ್ಳುವ ಹಾಗೂ ಪಡೆದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವವನೇ ಸಾರ್ಥಕ ಸಾಧನೆಗಳಿಂದ ಗೆಲ್ಲುವವನು ಎನ್ನುವ ಹಿರಿಯರ ಅನುಭವದ ನುಡಿಗಳಿಗೆ ಪೂರಕವಾಗುವಂತಹ ವಿಶಿಷ್ಟ ಯುವ ಸಾಧಕರು ಶ್ರೇಯಾಂಕ್. ಕರ್ನಾಟಕದ ಕಲ್ಪತರು ನಾಡು ಎಂಬ ಪ್ರಖ್ಯಾತಿ ಪಡೆದುಕೊಂಡಿರುವ ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕಿನ ಕಟ್ಟಿಗೇನಹಳ್ಳಿ ಮಾದರಿ ಗ್ರಾಮವಾಗಿದ್ದು ಕೃಷಿಪ್ರಧಾನ. ತೆಂಗು, ಅಡಿಕೆ, ಬಾಳೆ ತೋಟಗಳ ಶ್ರಮಿಕ ರೈತರ, ಸಾಕಷ್ಟು ವಿದ್ಯಾವಂತರ, ವೈವಿಧ್ಯಮಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ, ಸೃಜನಶೀಲತೆ, ಸೌಹಾರ್ದತೆ ಸಮೃದ್ಧಿಯ ಕುಟುಂಬಗಳ ಗ್ರಾಮವಾಗಿದೆ.

ನ್ಯಾಯವ್ಯಾಪ್ತಿ ಕೇವಲ ನ್ಯಾಯಾಲಯಕ್ಕೆ ಸೀಮಿತವಾದುದಲ್ಲ. ತಮ್ಮ ಮಾತುಕತೆ, ನಡೆನುಡಿ, ಆಚಾರ ವಿಚಾರಗಳಲ್ಲೂ, ಸಮಾಜ ಸಂಬಂಧದಲ್ಲು ನ್ಯಾಯಶೀಲತೆಗೆ ಹೆಸರಾದ ಶರಣ ನಂಜಪ್ಪನವರ ಸಹಧರ್ಮಿಣಿ ಶರಣೆ ಉಷಾದೇವಿಯವರ ಸುಖೀ ಆದರ್ಶ ಕುಟುಂಬದ ಕುಡಿ ಶ್ರೇಯಾಂಕ್‌ರವರು. ಎಲ್ಲದಕ್ಕಿಂತ ತಂದೆತಾಯಿಗಳು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಉತ್ತಮ ಲಾಲನೆ ಪಾಲನೆ ಮಾಡಿ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಬಾಲ್ಯದಲ್ಲಿಯೇ ನೀಡುತ್ತಾ ಆದರ್ಶ ಮಾರ್ಗದರ್ಶನ ಮಾಡುತ್ತಿದ್ದ, ಪ್ರಾಮಾಣಿಕ ನ್ಯಾಯನಿಷ್ಠುರಿಗಳೂ ಆಗಿದ್ದ ನ್ಯಾಯಾಧೀಶ ನಂಜಪ್ಪನವರ ಹುದ್ದೆ. ಊರಿಂದ ಊರಿಗೆ ಆಗಾಗ ವರ್ಗಾವಣೆ ಸಹಜವಾಗಿ ಆಗುತ್ತಿತ್ತು. ಮೈಸೂರು, ಬೆಂಗಳೂರು, ಮಂಡ್ಯ ಮುಂತಾದ ಊರುಗಳಿಗೆ ವರ್ಗಾವಣೆಯಾಗುತ್ತಿದ್ದು ದರಿಂದ ಬಾಲಕ ಶ್ರೇಯಾಂಕ್ ಸ್ಥಿರವಾಗಿ ಒಂದೇಕಡೆ ವ್ಯಾಸಂಗ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಆಗೂಹೀಗೂ ಪ್ರೌಢಶಾಲೆ ಹತ್ತನೇ ತರಗತಿಯಲ್ಲಿ ಉತ್ತೀರ್ಣರಾದ ನಂತರ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಪದವಿಪೂರ್ವ ಪಿ.ಸಿ.ಎಂ.ಬಿ. ಅಭ್ಯಾಸ ನಂತರ ಜಿ.ಎಸ್.ಎಸ್. ತಾಂತ್ರಿಕ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ ಕಮ್ಯುನಿಕೇಷನ್‌ನಲ್ಲಿ ಪದವಿ ಉತ್ತಮ ಶ್ರೇಣಿಯಲ್ಲಿ ಪಡೆದು ಭಾರತೀಯ ರಕ್ಷಣಾ ಇಲಾಖೆಗೆ ಸಂಬಂಧಪಟ್ಟಂತಹ ಡಿ.ಆರ್.ಡಿ.ಓ. ಹಾಗೂ ಈಗ ಕಿರ್ಲೋಸ್ಕರ್ ಸಂಸ್ಥೆಗಳಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ, ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಬಹುರಾಷ್ಟ್ರೀಯ ಸಂಸ್ಥೆ ಕಾಗ್ನಿಸೆಂಟ್, ಚೆನ್ನೈನಲ್ಲಿ ಕೆಲವು ಕಾಲ ಸೇವೆ ಸಲ್ಲಿಸುತ್ತಿರುವಾಗಲೇ ಶ್ರೇಯಾಂಕ್‌ರವರು ಬರೀ ಜ್ಞಾನದಿಂದ ಪ್ರಯೋಜನವಿಲ್ಲ. ಅದನ್ನು ಅನುಷ್ಠಾನಕ್ಕೆ ತರಬೇಕು. ಸಮಯ ಯಾರನ್ನೂ ಕಾಯುವುದಿಲ್ಲ. ಅದುರ ಸದುಪಯೋಗ ವಿವೇಕಿಗಳ ಲಕ್ಷಣ. ಜೀವನದ ಪ್ರತಿಕ್ಷಣ ಮಹತ್ವವಾದುದು. ಹೊಸದಾಗಿ ಏನನ್ನಾದರೂ ಸಾಧಿಸಬೇಕೆನ್ನುವ ತುಡಿತ ಸದಾಕಾಲ ಶ್ರೇಯಾಂಕ್‌ರವರ ಯುವ ಮನದಲ್ಲಿ ತಲ್ಲಣಿಸುತ್ತಿತ್ತು. ನಮ್ಮ ಕನ್ನಡ ನಾಡಿನ ಹೆಸರಾಂತ ಗೀತ ರಚನೆಕಾರ, ಸಂಗೀತ ಸಂಯೋಜಕ, ನಾದಬ್ರಹ್ಮ ಹಂಸಲೇಖರ ದೇಸೀ ವಿದ್ಯಾಶಾಲೆ ಶ್ರೇಯಾಂಕ್‌ರವರನ್ನು ಕೈಬೀಸಿ ಕರೆಯಿತು. ಸದಾ ಚಟುವಟಿಕೆ, ಪ್ರಯೋಗಶೀಲತೆ, ಆಸಕ್ತಿಯಿಂದ ತೊಡಗಿಸಿಕೊಳ್ಳುತ್ತಿದ್ದವರಿಗೆ, ಆಧುನಿಕ ತಂತ್ರಜ್ಞಾನದ ತರಬೇತಿಯನ್ನು ಪಡೆದುಕೊಂಡು, ಈ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಬೇಕೆಂದು ತೀರ್ಮಾನಿಸಿದರು. ಮಗನ ಪ್ರತಿಭೆ ಪರಿಶ್ರಮಕ್ಕೆ ಪೂರಕ ಪ್ರೋತ್ಸಾಹ ನೀಡುತ್ತಿದ್ದ ಪೋಷಕರಿಗೆ ಪುಣೆಯ ಫಿಲಂ ಇನ್ಸ್‌ಟಿಟ್ಯೂಟ್‌ನಲ್ಲಿ ವಿಶೇಷ ತರಬೇತಿ ಪಡೆದುಕೊಳ್ಳಲು ಬಯಸುತ್ತಿದ್ದ ಇಂಗಿತವನ್ನು ತಿಳಿಸಿ ಅನುಮತಿ ಪಡೆದುಕೊಂಡು ಪುಣೆಗೆ ಹೋದಾಗ ಬೇರೆ ರಾಜ್ಯಗಳಿಂದ ಸಂದರ್ಶನಕ್ಕೆ ಬಂದಿದ್ದ ವಿದ್ಯಾರ್ಥಿಗಳ ಪೈಪೋಟಿಯಲ್ಲಿ ಜಯಶಾಲಿಯಾಗಿ ಉತ್ತಮ ಶ್ರೇಣಿ ಪಡೆದು ವಿದ್ಯಾರ್ಥಿವೇತನ ಪಡೆದುಕೊಂಡ ಹೆಗ್ಗಳಿಕೆ ಶ್ರೇಯಾಂಕ್‌ರವರದ್ದು.



ಎ.ಬಿ.ಬಸವರಾಜ್
#13, ಬಸವಕಿರಣ, 5ನೇ ಅಡ್ಡರಸ್ತೆ,
ನಂಜಾರೆಡ್ಡಿ ಕಾಲೋನಿ,
ಬೆಂಗಳೂರು–560 017.
ಮೊ : 9448102779

ಪ್ರಯತ್ನವೆಂಬುದು ಎಂದಿಗೂ ವ್ಯರ್ಥ ಸಾಹಸವಲ್ಲ. ಪ್ರಯತ್ನದಲ್ಲಿ ಪ್ರಗತಿ ಅಡಗಿದೆ. ಸಾಧನೆಗೆ ಸ್ಫೂರ್ತಿ ಎನ್ನುವಂತೆ

ಫಿಲಂ ಇನ್ಸ್‌ಟಿಟ್ಯೂಟ್‌ನಲ್ಲಿ ಕಮರ್ಷಿಯಲ್ ಹಾಗೂ ಕಲಾತ್ಮಕ ಚಿತ್ರಗಳ ಕುರಿತಂತೆ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಒದಗಿ ಬಂದಿತ್ತು. ಛಲ ಬಿಡದ ತ್ರಿವಿಕ್ರಮನಂತೆ ಶ್ರೇಯಾಂಕ್‌ರವರು ಮುಂಬೈ-ಪುಣೆ-ಬೆಂಗಳೂರು ತ್ರಿಕೋಣಾ ಕಾರ್ಯಕ್ಷೇತ್ರಗಳಲ್ಲಿ ಧ್ವನಿ ತಂತ್ರಜ್ಞಾನದ ವಿವಿಧ ಮಜಲುಗಳನ್ನು ಕರಗತ ಮಾಡಿಕೊಳ್ಳುತ್ತಾ ಅನೇಕ ಸವಾಲುಗಳನ್ನು ಸ್ವೀಕರಿಸುತ್ತಾ, ಯಶಸ್ವೀ ಸ್ಟುಡಿಯೋಗಳಲ್ಲಿ ನಿರ್ದೇಶಕರುಗಳ ಮಾರ್ಗದರ್ಶನದಲ್ಲಿ ತಾವೂ ಪ್ರಯೋಗಾತ್ಮಕವಾಗಿ ಪ್ರಯತ್ನಿಸಿದ ವಿಶಿಷ್ಟ ಧ್ವನಿತಂತ್ರಜ್ಞಾನ ಸಧ್ಬಳಕೆ ಮಾಡಿಕೊಂಡು, ಆರ್ಟಿಕಲ್ 15, ಕಬೀರ್‌ಸಿಂಗ್ ಮುಂತಾದ ಚಿತ್ರಗಳಿಗೆ ಪೂರಕ ಯಶಸ್ಸು ತಂದುಕೊಟ್ಟರು. ಬೆಂಗಳೂರಿನಲ್ಲಿ ರಕ್ಷಿತ್‌ಶೆಟ್ಟಿ, ವೃಷಭ್‌ಶೆಟ್ಟಿ ನಿರ್ಮಾಣದಲ್ಲಿ ಪೆಡ್ರೋ, ಶಿವಮ್ಮ, ಮಿಥ್ಯ ಮುಂತಾದ ಚಿತ್ರಗಳಿಗೆ ವಿಶಿಷ್ಟರೀತಿಯ 'ಸಿಂಕ್ ಸೌಂಡ್' ಎನ್ನುವ ಸೂಕ್ಷ್ಮಾತಿಸೂಕ್ಷ್ಮ ಧ್ವನಿತರಂಗಗಳನ್ನು ಮೂಲಧ್ವನಿ, ಭಾವನೆಗಳಿಗೆ, ಸನ್ನಿವೇಷಗಳಿಗೆ ಕಿಂಚಿತ್ತೂ ಲೋಪವಾಗದಂತೆ ಪ್ರೇಕ್ಷಕರ ಕಿವಿಗಳಿಗೆ ಮನಸ್ಸಿಗೆ ಮುದನೀಡುವ ಅಪ್ಯಾಯಮಾನವಾದ ಧ್ವನಿಗ್ರಹಣ, ನೇರ ಧ್ವನಿಮುದ್ರಣ, ವಸ್ತುನಿಷ್ಠವಾದಂತೆ ಮಳೆಹನಿಯ ಬೀಳುವ, ಹರಿವ ನದಿಯ ಜುಳು ಜುಳು ಶಬ್ದ, ಜೀರುಂಡೆ, ದುಂಬಿಗಳ ಝೇಂಕಾರದ ನಾದ, ರಭಸದ ಗಾಳಿ ಬೀಸುವ, ಮರದ ಎಲೆಗಳು ಶಬ್ದಮಾಡುವ, ಪ್ರಾಣಿ ಪಕ್ಷಿಗಳ ಉಸಿರು ಕೂಡ ಧ್ವನಿಮುದ್ರಿತವಾಗುವ ಮಧುರ ಅನುಭವ ನೀಡುವ ಧ್ವನಿ ತರಂಗಗಳನ್ನು ಮೂಲ ಧ್ವನಿತರಂಗಗಳಿಗೆ ಧಕ್ಕೆಯಾಗದಂತೆ ಕೃತಕವಾಗಿ ಸೃಷ್ಟಿಸಿ ಮರು ಧ್ವನಿ ಮುದ್ರಿಸಿಕೊಳ್ಳುವಕುಶಲತೆಯ ತಂತ್ರಜ್ಞಾನ ಕರಗತವಾಯಿತು.

ಜೀವನದಲ್ಲಿ ಎಷ್ಟೇ ಎತ್ತರಕ್ಕೆ ಏರಲು ಎಂಥದೇ ಸ್ಥಾನಮಾನ, ಅಧಿಕಾರ, ಅಂತಸ್ತು, ಪ್ರಶಸ್ತಿ, ಪುರಸ್ಕಾರ, ಗೌರವ ಗಳಿಸಲು ಅಹಂಕಾರ ಎಳ್ಳಷ್ಟೂ ಇರಕೂಡದು ಎನ್ನುವ ಶ್ರೇಯಾಂಕ್‌ರವರದೊಂದು ಪ್ರಮುಖ ಸಾಧನೆ "ದಿ ಎಲಿಫೆಂಟ್ ವಿಸ್ಪರರ್ಸ್" ಸಾಕ್ಷ್ಯಚಿತ್ರ. ತಮಿಳು ಭಾಷೆಯಲ್ಲಿ ಮಾತನಾಡುವ ಬುಡಕಟ್ಟು ಜನಾಂಗದವರು ಇರುವ ಸ್ಥಳ. ಮಧುಮಲೈ ಎಲಿಫೆಂಟ್ ಕ್ಯಾಂಪ್‌ನಲ್ಲಿ ಬೊಮ್ಮಬೇಲಿ ಎಂಬ ಮಾವುತರುಗಳು ಮರಿಯಾನೆಯ ಆರೈಕೆ ರಕ್ಷಣೆಯಲ್ಲಿ ಮಾವುತ ಮರಿಯಾನೆಯ ಆತ್ಮೀಯತೆ, ಆರೈಕೆ, ರಕ್ಷಣೆ, ಕಾಳಜಿಯ ಬಗ್ಗೆ ಹೃದಯಸ್ಪರ್ಶಿ ಸನ್ನಿವೇಷಗಳ ಸಾಕ್ಷ್ಯಚಿತ್ರ. ವಿಶೇಷ ಆಸ್ಕರ್ ಪ್ರಶಸ್ತಿ ಪಡೆದುಕೊಂಡಂತಹ ಶುಭಸಂದರ್ಭದಲ್ಲಿ ಚಿತ್ರತಂಡವನ್ನು ಭಾರತದ ಘನತೆವೆತ್ತ ರಾಷ್ಟ್ರಪತಿಗಳು ಭೇಟಿಮಾಡಿ ಶುಭ ಹಾರೈಸಿದರು. ಶ್ರೇಯಾಂಕ್‌ರವರ ಸಿಂಕ್ ಸೌಂಡ್ ಸೂಕ್ಷ್ಮ ಧ್ವನಿಗ್ರಹಣದ ಮಾಂತ್ರಿಕತೆಯೂ ಸಹ ಯಶಸ್ಸಿಗೆ ಕಾರಣವಾಯಿತು.

ಸಂಗೀತ ನಿರ್ದೇಶನದೊಂದಿಗೆ ಧ್ವನಿ ಮತ್ತು ಸಮನ್ವಯತೆಯೊಂದಿಗೆ ಧ್ವನಿತರಂಗಗಳನ್ನು ಅಗತ್ಯಕ್ಕೆ ತಕ್ಕಂತೆ ವಿವಿಧ ರೀತಿಯ ತರಂಗಗಳನ್ನು ಬಳಕೆ ಮಾಡಿಕೊಂಡದ್ದು ವಿಶೇಷ. ಬಹಳ ಹಿಂದೆ ಮ್ಯಾಗ್ನಟಿಕ್ ಟೇಪ್‌ಗಳಲ್ಲಿ ಧ್ವನಿಮುದ್ರಣ ಈಗ ಮೈಕ್ರೋಫೋನ್‌ಗಳ ಮೀಡಿಯಾ ಟೆಕ್ನಾಲಜಿಯಲ್ಲಿ 5 ಹೆಜ್ಜೆ ಸದ್ದಿನಿಂದ 100 ಹೆಜ್ಜೆ ದೂರದ ಸಪ್ಪಳವನ್ನು ಡಿಜಿಟಲ್ ಹಾರ್ಡ್‌ಡಿಸ್ಕ್‌ನಲ್ಲಿ ಧ್ವನಿಮುದ್ರಿಸಿಕೊಳ್ಳಬಹುದು. ಪೋಲಿ ಸೌಂಡ್ ಮ್ಯಾಚಿಂಗ್, ದೂರ ಹತ್ತಿರದ ಸಂಭಾಟಣೆ, ವಿವಿಧ ತರಂತಗಗಳ ಮಿಕ್ಸಿಗ್ ಕಾರ್ಯ ಲೇಸರ್ ಮೈಕ್ ಆಗಿ ಅಂಗಿ ಉಡುಪಿನಲ್ಲಿ ಸಿಕ್ಕಿಸಿಕೊಂಡು ಆಂಬಿಯನ್ಸ್ ವಾತಾವರಣದ ಶಬ್ದ. ರೈಲು ದೂರದಲ್ಲಿ ಆಗಮಿಸುತ್ತಿರುವುದು ಸೂಕ್ಷ್ಮತರಂಗ, ಧ್ವನಿಮುದ್ರಣ 2010ರಿಂದ ಸ್ವಂತ ಸ್ಟುಡಿಯೋ ಹೊಂದಿರುವ ಶ್ರೇಯಾಂಕ್, ವಿದೇಶ ಪ್ರವಾಸ ಕೆನಡಾ, ಇಟಲಿ, ಫ್ರಾನ್ಸ್, ವಿಯೆಟ್ನಾಂ, ಕಾಂಬೋಡಿಯಾ ಮುಂತಾದ ಕಡೆ ಪ್ರವಾಸ ಮಾಡುವಾಗಲೂ ಅಲ್ಲಿ ದೊರೆಯಬಹುದಾದ ವಿಶೇಷ ಧ್ವನಿ ಮುದ್ರಣ ಮಾಡಿಕೊಂಡು ಸಿಂಕ್ ಸೌಂಟ್‌ನಲ್ಲಿ ಅಳವಡಿಸಿಕೊಳ್ಳುತ್ತಾರೆ.

ಆಧುನಿಕ ಮೈಕ್ರೋಫೋನ್‌ಗಳ ಮೀಡಿಯ ಟೆಕ್ನಿಕ್‌ನಲ್ಲಿ, ಪೋಲಿಸೌಂಡ್ ಮ್ಯಾಚಿಂಗ್ ತಂತ್ರಜ್ಞಾನ ವಿಶೇಷವಾದುದು, ಒಂದು ಪುಟ್ಟ ನಾಯಿಮರಿಯ ಐದು ಹೆಜ್ಜೆಗಳ ಶಬ್ದದೊಂದಿಗೆ ನೂರು ಹೆಜ್ಜೆಗಳ ಅಂತರದ ಸದ್ದುಗಳನ್ನು, ದೂರದ ಹತ್ತಿರದ ಸಂಭಾಷಣೆಗಳ ಏರಿಳಿತಗಳನ್ನು ಸೂಕ್ಷ್ಮ ತರಂಗಗಳನ್ನೂ ಮಿಕ್ಸಿಂಗ್ ಮುದ್ರಣ, ಅಲ್ಲದೆ ಆಂಬಿಯನ್ಸ್ ಧ್ವನಿತಂತ್ರಜ್ಞಾನವೂ ಸೇರಿದಂತೆ ವಿಶೇಷ ಧ್ವನಿ ತಂತ್ರಜ್ಞರು ಶ್ರೇಯಾಂಕ್. ನಮ್ಮ ನೊಳಂಬ ಸಮಾಜದ ಅನೇಕ ಪ್ರತಿಭಾವಂತ ಸಾಧಕರಲ್ಲಿ ವಿಶೇಷ ಧ್ವನಿತಂತ್ರಜ್ಞಾ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡುತ್ತಿರುವ ಯುವ ಪ್ರತಿಭೆ ಶ್ರೇಯಾಂಕ್‌ರವರು ಇನ್ನೂ ಹೆಚ್ಚಿನ ಸಾಧನೆ ಮಾಡಿ ಕೀರ್ತಿ, ಪ್ರಶಸ್ತಿ, ಪುರಸ್ಕಾರಗಳನ್ನೂ ಪಡೆದುಕೊಳ್ಳುವ ಸದವಕಾಶ ದೊರೆಯಲಿ ಎಂದು ಸಮಾಜ ಹಾಗೂ ನೊಳಂಬ ವಾಣಿ ಬಳಗ ಶುಭವನ್ನು ಹಾರೈಸುತ್ತದೆ.



# ಶ್ರೀಗುರುಸಿದ್ಧರಾಮೇಶ್ವರರ 851ನೇ ಜಯಂತಿ ಅಭಿನಂದನೆಗಳು

ಕುಲದೈವವಾದ ಶ್ರೀ ಗುರು ಸಿದ್ಧರಾಮೇಶ್ವರರಲ್ಲಿ ಹಣೆಮಡಿದು,

ಮಾನ್ಯರೇ, ದಿನಾಂಕ 24-03-2024ನೇ ಭಾನುವಾರ ಮುಂಜಾನೆ 10.30ಕ್ಕೆ ಚಿಕ್ಕಬಾಸೂರು ಗ್ರಾಮದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ಕಲ್ಯಾಣಮಂಟಪದಲ್ಲಿ ಶ್ರೀಗುರುಸಿದ್ಧರಾಮೇಶ್ವರರ 851ನೇ ಜಯಂತಿಯ ಜಮಾ-ಖರ್ಚು ಮಂಡನೆ ಹಾಗೂ ಅಭಿನಂದನಾ ಸಭೆಯಲ್ಲಿ ಭಾಗವಹಿಸಿದ ತಮಗೆಲ್ಲರಿಗೂ ತುಂಬು ಹೃದಯದ ಅಭಿನಂದನೆಗಳು.

ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರಿನಲ್ಲಿ ಜನವರಿ 14 & 15 ರಂದು ಅತ್ಯಂತ ವಿಜ್ರಂಭಣೆಯಿಂದ ಲಕ್ಷಾಂತರ ಭಕ್ತಸಮೂಹದ ಮಧ್ಯೆದಲ್ಲಿ ಜರುಗಿದ ಶ್ರೀ ಗುರು ಸಿದ್ಧರಾಮೇಶ್ವರರ 851ನೇ ಜಯಂತ್ಯೋತ್ಸವದಲ್ಲಿ ಸೇವೆಗೈದ ಭಕ್ತಮಹಾಶಯರಿಗೆ ಶರಣೆಂದು. "ಅರಿವೇ ಗುರು" ಅಂತಹ ಅರಿವಿನ ಗುರುವಾದ ಮಹಾ ಶಿವಯೋಗಿ, ಕರ್ಮಯೋಗಿ ಶ್ರೀ ಗುರು ಸಿದ್ಧರಾಮೇಶ್ವರರ 851ನೇ ಜಯಂತಿ ಮಹೋತ್ಸವವನ್ನು ಅರೆಮಲೆನಾಡಿನ ಪ್ರದೇಶದಲ್ಲಿರುವ ಚಿಕ್ಕದಾದರೂ ಚೊಕ್ಕವಾದ ನೊಳಂಬವಾಡಿ ಅರಸೊತ್ತಿಗೆಯ ಉತ್ತರ ಸೀಮೆಯ ಗಡಿಯಂಚಿನ ಚಿಕ್ಕಬಾಸೂರಿನಲ್ಲಿ ಆಚರಿಸುವಲ್ಲಿ ತಮ್ಮ ಧಿವ್ಯ ನೇತೃತ್ವ ವಹಿಸಿ ಅಹರ್ನಿಷಿ ನಮ್ಮನ್ನು ಹರಿಸಿ ಹಾರೈಸಿ ಯಶಸ್ವಿಗೆ ಆಶೀರ್ವದಿಸಿದ ನಂದಿಗುಡಿ ಬೃಹನ್ಮಠದ ಜಗದ್ಗುರುಗಳಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ 1008 ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕ ದೀರ್ಘದಂಡ ನಮಸ್ಕಾರಗಳನ್ನು ಅರ್ಪಿಸುತ್ತೇನೆಜಯಂತಿ ಮಹೋತ್ಸವದ ಧಿವ್ಯ ಸಾನಿಧ್ಯ ವಹಿಸಿ ನಿರಂತರವಾದ ಪ್ರೇರಣೆಯೊಂದಿಗೆ ಮಾರ್ಗದರ್ಶನ ಮಾಡಿ ಯಶಸ್ವಿಗೆ ಆಶೀರ್ವದಿಸಿದ ಪುಷ್ಪಗಿರಿ ಬೃಹನ್ಮಠದ ಜಗದ್ಗುರುಗಳಾದ ಪರಮ ಪೂಜ್ಯ ಡಾ॥ ಶ್ರೀ ಶ್ರೀ ಶ್ರೀ 1008 ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕ ದೀರ್ಘದಂಡ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ನಾಡಿನ ಎಲ್ಲ ಮಠಗಳ ಪರಮ ಪೂಜ್ಯರುಗಳ ದರ್ಶನಾಶೀರ್ವಾದಗಳಿಂದ ನಮ್ಮೆಲ್ಲರನ್ನು ಪುನೀತಗೊಳಿಸಿದ್ದಲ್ಲದೆ ಜಯಂತಿಯ ಯಶಸ್ವಿಗೆ ಆಶೀರ್ವದಿಸಿದ್ದಕ್ಕಾಗಿ ಅವರ ಪವಿತ್ರ ಚರಣಾರವಿಂದಗಳಿಗೆ ಭಕ್ತಿಪೂರ್ವಕವಾದ ಅನಂತ ಕೋಟಿ ದೀರ್ಘದಂಡ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ನೊಳಂಬ ಲಿಂಗಾಯತ ಸಂಘ(ರಿ) ಬೆಂಗಳೂರಿನ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ ರವರ ಅನವರತ ಶ್ರಮ ಹಾಗೂ ಮಾರ್ಗದರ್ಶನವನ್ನು ಇಲ್ಲಿ ಸ್ಮರಿಸಲೇ ಬೇಕಾಗುತ್ತದೆ. ಗ್ರಾಮೀಣ ಭಾಗದಲ್ಲಿ ಹೇಗೆ ಜಯಂತಿಯನ್ನು ನಿರ್ವಹಿಸುತ್ತಾರೆ ಎಂಬ ಆತಂಕದೊಟ್ಟಿಗೆ ನಮ್ಮ ಮೇಲೆ ವಿಶ್ವಾಸವಿರಿಸಿ ಜಯಂತಿಯನ್ನು ಆಚರಿಸಲು ಅನುಮತಿ ನೀಡಿದ್ದಲ್ಲದೇ ಸದಾ ಸಂಪರ್ಕದಲ್ಲಿದ್ದು ಪ್ರತಿ ಹೆಜ್ಜೆಯಲ್ಲೂ ನಮಗೆ ದೀವಿಗೆಯಂತೆ ಮಾರ್ಗದರ್ಶನದ ಬೆಳಕನ್ನು ನೀಡುತ್ತಾ ಜಯಂತಿಯನ್ನು ಗ್ರಾಮೀಣ ಭಾಗದಲ್ಲೂ ಸಹ ಅತ್ಯಂತ ವ್ಯವಸ್ಥಿತವಾಗಿ ಮಾಡಬಲ್ಲರೂ ಎಂಬುದಕ್ಕೆ ಇಂಬು ನೀಡಿದ ಮಾನ್ಯ ಅಧ್ಯಕ್ಷರಿಗೆ ಹೃನ್ಮನಪೂರ್ವಕವಾದ ಅಭಿನಂದನೆಗಳು.

ನೊಳಂಬ ಲಿಂಗಾಯತ ಸಂಘ(ರಿ) ಬೆಂಗಳೂರಿನ ಉಪಾಧ್ಯಕ್ಷರು ಗೌರವ ಕಾರ್ಯದರ್ಶಿಗಳು, ಖಜಾಂಚಿಗಳು, ಎಲ್ಲ ನಿರ್ದೇಶಕರಗಳು ಹಾಗೂ ಸಿಬ್ಬಂದಿಗಳಾದಿಯಾಗಿ ಅವ್ಯಾಹತವಾಗಿ ಜಯಂತಿಯ ಯಶಸ್ಸಿಗೆ ಭಕ್ತಿಪೂರ್ವಕವಾಗಿ ಸೇವೆಗೈದಿದ್ದು, ಅವರೆಲ್ಲರಿಗೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನೊಳಂಬ ಲಿಂಗಾಯತ ಸಂಘ(ರಿ) ಹಾವೇರಿಯ ಮಾನ್ಯ ಅಧ್ಯಕ್ಷರು ಉಪಾಧ್ಯಕ್ಷರು ಗೌರವ ಕಾರ್ಯದರ್ಶಿಗಳು, ಖಜಾಂಚಿಗಳು, ಎಲ್ಲ ನಿರ್ದೇಶಕರಗಳು ಹಾಗೂ ಸಿಬ್ಬಂಧಿಗಳಾದಿಯಾಗಿ ಸತತವಾಗಿ ಜಯಂತಿಯ ಯಶಸ್ಸಿಗೆ ಸೇವೆಗೈದಿದ್ದು,



**ಸೋಮಶೇಖರಪ್ಪ ನಿಂ. ಕಣಗಲಬಾವಿ**
ಸ್ವಾಗತ ಸಮಿತಿ ಅಧ್ಯಕ್ಷರು
ಚಿಕ್ಕಬಾಸೂರು.

ಅವರೆಲ್ಲರಿಗೂ ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇನೆ. ನನ್ನೊಂದಿಗೆ ಹಗಲಿರುಳೆನ್ನದೇ 5–6 ತಿಂಗಳುಗಟ್ಟಲೇ ಶ್ರಮವಹಿಸಿದ ಸ್ವಾಗತ ಸಮಿತಿಯ ಉಪಾಧ್ಯಕ್ಷರುಗಳು, ಗೌರವ ಕಾರ್ಯದರ್ಶಿಗಳು ಹಾಗೂ ಖಜಾಂಚಿಗಳಿಗೆ ನನ್ನ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸ್ವಾಗತ ಸಮಿತಿಯ ಮಾರ್ಗದರ್ಶನದಲ್ಲಿ ತಿಂಗಳಾನುಗಟ್ಟಲೇ ಸೇವೆಗೈಯುವ ಮೂಲಕ ಜಯಂತಿಯ ಮುಂಚೂಣಿಯಲ್ಲಿ ನಿಂತು ದುಡಿದು ಯಶಸ್ವಿಗೊಳಿಸಿದ್ದಕ್ಕಾಗಿ ಎಲ್ಲ ಉಪ ಸಮಿತಿಗಳ ಪದಾಧಿಕಾರಿಗಳಿಗೆ ನನ್ನ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬರಗಾಲದಲ್ಲಿ ಒದಗಿ ಬಂದ ಈ ಮಹಾನ್ ಕಾರ್ಯಕ್ರಮವನ್ನು ಹೇಗೆ ನಿಭಾಯಿಸುವುದೆಂಬ ಆತಂಕದಲ್ಲಿರುವಾಗ ನಮಗೆ ಜಯಂತಿ ಆಚರಿಸಲು ಆರ್ಥಿಕವಾಗಿ ಶಕ್ತಿ ನೀಡಿದ ಮಹಾಪೋಷಕರು, ಪೋಷಕರು ಹಾಗೂ ದಾನಿಗಳಿಂದಾಗಿ ಈ ಕಾರ್ಯ ನೀರೊಳಗಿನ ಕಲ್ಲೆತ್ತಿದಂತೆ ಭಾಸವಾಗಲು ಕಾರಣೀಕರ್ತರಾದ ದಾನಿಗಳೆಲ್ಲರಿಗೂ, ತನು–ಮನ–ಧನವನ್ನರ್ಪಿಸಿ ನಿಸ್ವಾರ್ಥವಾಗಿ ಸೇವೆಗೈದ ಅಪಾರ ಭಕ್ತ ಸಮೂಹಕ್ಕೆ ನನ್ನ ಅನಂತ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಸಹ ನಮ್ಮ ಬೇಡಿಕೆಯನ್ನು ಪುರಸ್ಕರಿಸಿ ರೂ 50ಲಕ್ಷಗಳ ಅನುದಾನವನ್ನು ನೀಡಿದ್ದಲ್ಲದೇ ಸನ್ಮಾನ್ಯ ಮುಖ್ಯ ಮಂತ್ರಿಗಳಾದಿಯಾಗಿ ಆಡಳಿತ ಹಾಗೂ ವಿರೋದ ಪಕ್ಷಗಳ ಮುಖಂಡರುಗಳು ಜಯಂತಿಯನ್ನು ಸಾಕ್ಷೀಕರಿಸಿದ್ದಕ್ಕಾಗಿ ಗೌರವಾನ್ವಿತರೆಲ್ಲರಿಗೂ ಗೌರವ ಪೂರ್ವಕ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ಹಾವೇರಿಯ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್, ಜಿಲ್ಲಾ ಪಂಚಾಯತ್, ಸರ್ವ ಇಲಾಖೆಗಳ ಸಹಾಯ ಸಹಕಾರ ಸ್ಮರಣೀಯವಾದದ್ದು, ಅವರೆಲ್ಲರನ್ನೂ ಅತ್ಯಂತ ಗೌರವಯುತವಾಗಿ ಅಭಿನಂದಿಸುತ್ತೇನೆ. ಹಾಗೆಯೇ ದೃಶ್ಯ ಮಾಧ್ಯಮ ಹಾಗೂ ಮುದ್ರಣ ಮಾಧ್ಯಮಗಳೆರಡನ್ನು ಸ್ಮರಿಸುತ್ತಾ ಅವರಿಗೂ ಸಹ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಅವರಿವರೆನ್ನದೇ ಜಯಂತಿಯ ತಯಾರಿಯ ಪ್ರಾರಂಭದಿಂದ ಜಯಂತಿಯ ಎರಡೂ ದಿನ ಸಾಕ್ಷೀಕರಿಸಿದ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಜಯಂತಿಯ ಯಶಸ್ಸಿಗೆ ಸಹಕರಿಸಿದ/ಸೇವೆಗೈದ ಸರ್ವರಿಗೂ ನನ್ನ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸರ್ವರಿಗೂ ಕಾರುಣ್ಯ ಮೂರ್ತಿ ಶ್ರೀ ಗುರು ಶಿವಯೋಗಿ ಸಿದ್ಧರಾಮೇಶ್ವರರ ಅನುಗ್ರಹ ಅನವರತ ಇರಲೆಂದು ಬೇಡುತ್ತಾ ಮತ್ತೊಮ್ಮೆ ತಮ್ಮೆಲ್ಲರಿಗೂ ಸೋಮಣ್ಣ ಕಣಗಲಬಾವಿ, ಸ್ವಾಗತ ಸಮಿತಿ ಅಧ್ಯಕ್ಷನಾದ ನಾನು ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಜೈ ಸಿದ್ಧರಾಮ.

ಶರಣು ಶರಣಾರ್ಥಿಗಳು

---

## ನಂದಿ ವಿದ್ಯಾಸಂಸ್ಥೆ, ಶಿವಮೊಗ್ಗ

ಪ್ರಿಯ ಸ್ನೇಹಿತರೆ, ತಮಗೆಲ್ಲಾ ಈಗಾಗಲೆ ಅಂಚೆ ಮೂಲಕ ಇಲ್ಲ ವಾಟ್ಸ್ ಅಫ್ ಸಂದೇಶದಮೂಲಕ ನಂದಿ ವಿದ್ಯಾಸಂಸ್ಥೆ ಹಾಗು ಅದರ ಸೋದರ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ ಪ್ರಯುಕ್ತ 19–5–2024 ಭಾನುವಾರ ಬೆಳಿಗ್ಗೆ 10–30 ರಿಂದ ಸಂಜೆ 6 ಗಂಟೆಯವರೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಸವ ಜಯಂತಿಯ ಈ ಶುಭ ಸಂದರ್ಭದಲ್ಲಿ ನಮ್ಮವರೇ ಆದ ಕಾರ್ಯಪಾಲಕ ಅಭಿಯಂತರ ಹುದ್ದೆಯಲ್ಲಿದ್ದು. ನಮ್ಮ ಗ್ರಾಮಾಂತರ ಹಳ್ಳಿಗಳನ್ನು ದೃಷ್ಠಿಯಲ್ಲಿ ಇಟ್ಟುಕೊಂಡು ನೀರಾವರಿ ಸೌಲಭ್ಯವನ್ನು ನಮ್ಮಹಳ್ಳಿಗಳಿಗೆ ಒದಗಿಸಲು ಪ್ರಯತ್ನಿಸಿ ಸಫಲರಾದ ಸನ್ಮಾನ್ಯ ಶ್ರೀ ಬಿ.ಸುರೇಶ್ ರವರು ಈಗ ನಿವೃತ್ತರಾಗಿದ್ದಾರೆ. ಕಳೆದ ತಿಂಗಳು. ಅವರ ಸ್ವಾಭಿಮಾನ ಹಾಗು ಶ್ರಮಕ್ಕೆ ನಮ್ಮ ನಂದಿವಿದ್ಯಾಸಂಸ್ಥೆ ಹಾಗು ಅದರ ಸೋದರಸಂಸ್ಥೆಗಳು ಗೌರವಪೂರ್ವಕವಾಗಿ ನಮಿಸುತ್ತಾ ಅವರನ್ನು ಸನ್ಮಾನಿಸಲಾಯಿತು. ತಾವೆಲ್ಲ ಈ ಶುಭ ಸಂದರ್ಭಕ್ಕೆ ಸಾಕ್ಷಿಯಾದಿರಿ.

1) ಕಾರ್ಯಕ್ರಮದ ಮುಖ್ಯ ಆಕರ್ಷಣೆ ನಿಮ್ಮವರೆ ನಿಮ್ಮ ಸ್ನೇಹಿತರಿಂದಲೆ ಶರಣರ ವಿಚಾರ ಮಂಥನ ಕಾರ್ಯಕ್ರಮ ನಡೆಯಿತು.
2) ಅಪರೂಪದ ವಚನಗಳನ್ನು ಗುಂಪಾಗಿ ಹಾಡುವ ಹಾಡುಗಾರಿಕೆ ನಡೆಯುತು.
3) ಕರ್ನಾಟಕದಲ್ಲಿರುವ ನೊಳಂಬ ಲಿಂಗಾಯತ ಮಠಗಳು ಎಷ್ಟು, ಅವುಗಳ ಬಗ್ಗೆ ಒಬ್ಬೊಬ್ಬರೇ ಒಂದೊಂದು ಮಠದ ಬಗ್ಗೆ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು.

ಕೊನೆಯಲ್ಲಿ ನಮ್ಮ ಮಠ : ನಮ್ಮ ಹೆಮ್ಮೆ ಮಾತು ಕೇಳಿದ ತಮ್ಮೆಲ್ಲರಿಗೂ ಟೀ ಪಾನದಿಂದ ಬೀಳ್ಕೊಡಲಾಯಿತು

**ಡಿ.ಬಿ.ಶಂಕರಪ್ಪ,** ಅಧ್ಯಕ್ಷರು
ನಂದಿ ವಿದ್ಯಾಸಂಸ್ಥೆ, ಶಿವಮೊಗ್ಗ.

# ಗಂಡರಲ್ಲ ಪುಂಡರು ಭಂಡರು...

ಹದಿಹರೆಯದ ವಿದ್ಯಾರ್ಥಿಗಳ ಭಾವನೆಗಳೇ ಸೊಗಸು. ಅದಮ್ಯ ಉತ್ಸಾಹ, ಪ್ರತಿಯೊಂದರಲ್ಲೂ ತುಂಟತನದ ಚುರುಕು, ವಿರುದ್ಧ ಲಿಂಗಗಳ ಕಡೆ ಆಕರ್ಷಣೆ. ಮಾತನಾಡುವ ಕಾತುರ, ಎಲ್ಲದರಲ್ಲೂ ಭಾಗವಹಿಸುವ ಕುತೂಹಲ, ಹಿರೋಯಿಸಂ ಸ್ವಭಾವ, ತರಗತಿಯ ಹೊರಗೆ ಕಾಲಿಟ್ಟಕೂಡಲೇ ಕುಣಿದು ಕುಪ್ಪಳಿಸುವ ಪಾದರಸದಂತಹ ವೇಗ. ಇವುಗಳೆಲ್ಲ ಅಂತರ್ಯದಲ್ಲಿ ಸಮ್ಮೇಳನದಂತೆ ಮೆರವಣಿಗೆ ಹೊರಟಾಗ ಅವರನ್ನು ಹಿಡಿಯುವುದು ಸಾಧ್ಯವೆ! ಇಲ್ಲ, ಸಾಧ್ಯವಿಲ್ಲ. ಅವರನ್ನು ನಿಯಮಗಳಲ್ಲಿ ಬಂಧಿಸಲೂಬಾರದು. ಹಾಗೆಂದು ಶ್ವೇಚ್ಛಾಚಾರಕ್ಕೆ ಅವಕಾಶ ಕೊಡಬಾರದು. ಹದವರಿತು ಅವರನ್ನು ಪಳಗಿಸಬೇಕು. ಇಲ್ಲೇ ಪೋಷಕ ಮತ್ತು ಶಿಕ್ಷಕರ ಬುದ್ಧಿ ವ್ಯಯವಾಗಬೇಕಾಗಿದೆ. ನೀತಿ ಮತ್ತು ಅನೀತಿಗಳ ಆಯ್ಕೆಗಾಗಿ ಸಂಘರ್ಷ ನಡೆಯುವಂತೆ ನೋಡಿಕೊಳ್ಳಬೇಕು. ಆ ದಾರಿಯಲ್ಲಿ ಹೋಗುವುದಕ್ಕಿಂತ ಈ ದಾರಿಯಲ್ಲಿ ಹೋದರೆ ಮುಂದೆ ಉತ್ತಮ ಫಲಗಳನ್ನು ಪಡೆಯಬಹುದು ಎಂಬುದನ್ನು ಪ್ರೀತಿಯಿಂದ ಅರ್ಥೈಸಬೇಕಾಗಿದೆ. ಹೀಗೆ ಮಾಡುವಾಗ 'ಅದು ಮಾಡಬೇಡಿ, ಇದು ಬೇಡ' ಎಂಬ ನಿಷೇಧಗಳನ್ನು ಹೇರಲೇಬಾರದು. ಅವರ ಉತ್ಸಾಹಗಳಲ್ಲಿ ಭಾಗಿಯಾಗಬೇಕು. ಅವರು ಹುಂಬುತನದಲ್ಲಿ ಮುನ್ನುಗ್ಗುವುದು, ಹೇಳಿದ ಬುದ್ಧಿ ಮಾತುಗಳನ್ನೆಲ್ಲ ಗಾಳಿಗೆ ತೂರುವುದು, ಬೈದರೆ ಆಕಳಿಸಿ ಚಿಟಕಿ ಹಾರಿಸುವ ಉಡಾಫೆ. ಪ್ರತಿಯೊಂದಕ್ಕೂ ನಗುವ ಚಾಳಿ, ಉಪನ್ಯಾಸಕರು ಬರುವುದು ಸ್ವಲ್ಪ ವಿಳಂಭವಾದರೂ ಕೂಗುವುದು, ಸಿಳ್ಳೆ ಹಾಕುವುದು, ವಿಚಿತ್ರವಾಗಿ ಧ್ವನಿ ಹೊರಡಿಸಿ ಅರಚಿಕೊಳ್ಳುವುದು. ಆ ತರಗತಿಗಳಿಂದ ಈ ತರಗತಿಗಳಿಗೆ ಇಲ್ಲವೇ ಸ್ಟಾಫ್‌ರೂಮ್‌ನಿಂದ ಪ್ರಾಚಾರ್ಯರ ಛೇಂಬರ್‌ಗೆ ಹೋಗಿ ಬರುವ ಉಪನ್ಯಾಸಕರುಗಳ ಹೆಸರುಗಳನ್ನು ಕಿಟಕಿಯ ಮೂಲಕ ವ್ಯಂಗವಾಗಿ ಜೋರಾಗಿ ಕೂಗಿ ಮುಜುಗರ ಉಂಟುಮಾಡುವುದು. ಅಬ್ಬಾ ಒಂದಾ ಎರಡಾ! ನಮ್ಮ ಪಿಯು ಮಕ್ಕಳ ಅವತಾರಗಳು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೆ ಸ್ವಲ್ಪ ಅಂಕೆಯಲ್ಲಿರುತ್ತಾರೆ. ಒಂದು ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿಗಳು ಸೇರಿ ಸಾವಿರ ದಾಟಿದರೆ ಅವರುಗಳನ್ನು ಹಿಡಿಯುವುದೇ ಕಷ್ಟ. ನಮ್ಮ ತೀರ್ಥಹಳ್ಳಿ ಸರ್ಕಾರಿ ಪಿಯು ಕಾಲೇಜಿನಲ್ಲಿ ನೂರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿ ತರಗತಿಯ ವಿಭಾಗಗಳಲ್ಲೂ ಇರುತ್ತಾರೆ. ಇಂತಹ ಹದಿನಾಲ್ಕು ವಿಭಾಗಗಳು ನಮ್ಮಲ್ಲಿವೆ. ಈ ಸಂಖ್ಯೆ ನಮಗೆಂದೂ ಹೊರೆಯಾಗಿಲ್ಲ.

ಇಷ್ಟೊಂದು ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ ನಡೆಯುವ ಕೀಟಲೆಗಳು ಅಧಿಕವಾಗಿವೇ ಇರುತ್ತವೆ. ಅವುಗಳಿಗಾಗಿ ತಲೆಕೆಡಿಸಿಕೊಂಡು ತಲೆ ಭಾರವಾಗಿಸಿಕೊಳ್ಳುವ ಪ್ರವೃತ್ತಿ ಉಪನ್ಯಾಸಕರಿಗೆ ಇರುವುದಿಲ್ಲ, ಇರಲೂಬಾರದು. ಎಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸಿ ಸರಳವಾಗಿ ತೆಗೆದುಕೊಳ್ಳುತ್ತ ಮಮತೆಯಿಂದ ತಿದ್ದುವುದು ಅಭ್ಯಾಸವಾಗಿ ಬಿಡಬೇಕು. ಹೀಗಿದ್ದರೂ ಶಿಸ್ತಿನ ಬೋಧನೆಯಲ್ಲಿ ವಿಷಯದ ಗಹನತೆಯನ್ನು ಅರಿಯುವ ರಸಘಟ್ಟದಲ್ಲಿ 'ಕಿಸಕ್' ಎಂದು ನಕ್ಕು ಇಡೀ ತರಗತಿಯನ್ನು ನಗೆಗಡಲಲ್ಲಿ ತೇಲಿಸಿ ಬಿಡುವ ಕಿಲಾಡಿ ಹುಡುಗರನ್ನು ಯದ್ವಾತದ್ವ ಬೈಯ್ಯುವ ಇಲ್ಲವೇ ಗದರುವ ಬದಲು ಅವರ ಚೇಷ್ಟೆಯಿಂದ ಮನಸ್ಸಿಗೆ ಕಚಗುಳಿ ಇಟ್ಟಂತಾಗಿ ಅವರೊಂದಿಗೆ ನಾವೂ ನಕ್ಕು ಮನಸ್ಸನ್ನು ಹಗುರ ಮಾಡಿಕೊಂಡ ಪ್ರಸಂಗಗಳನ್ನು ಮರೆಯಲಾಗುವುದಿಲ್ಲ. ಗಾಂಭೀರ್ಯದಿಂದ ಆಲಿಸುವಂತೆ ಮಾಡುವುದು ಸುಲಭ. ಆದರೆ ಸಾಹಿತ್ಯದ ತರಗತಿಗಳನ್ನು ಈ ಬಗೆಯ ಅತಿಯಾದ ಶಿಸ್ತಿನಿಂದ ಬೋಧಿಸುವುದರಲ್ಲಿ ಯಾವ ಸ್ವಾರಸ್ಯವೂ ಇರುವುದಿಲ್ಲ. ಕಲಾ ವಿಷಯವು ಕಲಾತ್ಮಕವಾಗಿದ್ದರೆ ಅದಕ್ಕೊಂದು ಮೆರಗು ಬರುತ್ತದೆ. ಏಕೆಂದರೆ, ಉಳಿದ ವಿಷಯಗಳನ್ನು ಬಹಳ ಗಂಭೀರವಾಗಿ ಆಲಿಸುವ ಮಕ್ಕಳಿಗೆ ಕನ್ನಡ ಮತ್ತು ಇಂಗ್ಲೀಷ್ ತರಗತಿಗಳಲ್ಲಿ ಸ್ವಲ್ಪ ಮುಕ್ತ ವಾತಾವರಣವನ್ನು ಸೃಷ್ಠಿ ಮಾಡುವುದು ಅನಿವಾರ್ಯವಾಗಿದೆ. ಇಲ್ಲವಾದರೆ ಕಲಾ ವಿಷಯಗಳನ್ನು ತಲೆ ಭಾರ ವಿಷಯಗಳೆಂದು ತೀರ್ಮಾನಿಸಿ ಅವುಗಳ ಮೇಲೆ ನಿರಾಸಕ್ತಿಯನ್ನು ಬೆಳಸಿಕೊಳ್ಳಲೂ ಬಹುದು. ಅಂದರೆ ಭಾಷಾ ಪತ್ರಗಳಲ್ಲಿ ಹೆಚ್ಚು ಅಂಕಗಳನ್ನೇನೊ ಗಳಿಸಬಹುದು. ಆದರೆ ಅವುಗಳ ಬಗ್ಗೆ ಆಸಕ್ತಿ ಬೆಳಸಿಕೊಳ್ಳುವುದಿಲ್ಲ. ಮಾತ್ರವಲ್ಲ ಸಾಹಿತ್ಯವನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಉತ್ಸಾಹವೂ ಇಲ್ಲವಾಗಬಹುದು.



**ಡಾ. ಹಾಲಪ್ಪ ಹೆಚ್.ಕೆ.ಕುಂಟೆ**
ಜಾನಪದ ವಿದ್ವಾಂಸರು
ಮೊ : 9731190236

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಂತೂ ಕಲಾ ತರಗತಿಗಳು ಒಂದು ರೀತಿಯಲ್ಲಿ ಮನಕ್ಕೆ ಮುದ ನೀಡಿ ರಿಲ್ಯಾಕ್ಸ್ ಆಗುವಂತಿದ್ದರೆ ಒಳ್ಳೆಯದು. ಒಂದು ವೇಳೆ ಕನ್ನಡ ಮತ್ತು ಇಂಗ್ಲಿಷ್ ಎರಡನ್ನೂ ವಿಜ್ಞಾನದಂತೆ ಹಿಂಜಿ ಹಿಂಜಿ ಬೋಧಿಸಿದರೆ ಸಾಹಿತ್ಯಾಸಕ್ತರನ್ನು ತರಗತಿ ಒಳಗೇ ಸಮಾಧಿ ಮಾಡಿ ಕೇವಲ ಹೆಚ್ಚಿನ ಅಂಕ ಪಡೆಯುವ ಗಿಳಿಗಳನ್ನು ತಯಾರುಮಾಡಿದಂತೆ ಆಗುತ್ತದೆ ಎನ್ನುವ ಸೂಕ್ಷ್ಮತೆ ಭಾಷಾ ಉಪನ್ಯಾಸಕರಿಗೆ

ಇರಬೇಕಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳನ್ನು ಖುಷಿ ಮೂಡಿನಲ್ಲಿಯೇ ಇರಿಸಿಕೊಳ್ಳುವ ಪ್ರಯತ್ನವನ್ನೆ ಮಾಡುತ್ತಿರಬೇಕು.

ಒಂದು ದಿನ ದ್ವಿತೀಯ ಪಿಯು ವಿಜ್ಞಾನ ವಿಭಾಗದ ತರಗತಿಯಲ್ಲಿ ಅಬ್ದುಲ್ ಕಲಾಂ ಜೀವನ ಕುರಿತಾದ "ಬದುಕನ್ನು ಪ್ರೀತಿಸಿದ ಸಂತ" ಎಂಬ ಗದ್ಯ ಪಾಠವನ್ನು ಬೋಧಿಸುತ್ತಿರುವಾಗ ಅದರೊಳಗೆ ಬರುವ "ಬದುಕಿನ ರಸ ನಿಮಿಷಗಳು" ಎಂಬ ಭಾಗದಲ್ಲಿ ಶಾಲಾ ಬಾಲಕಿಯೊಬ್ಬಳು ಪೃಥ್ವಿ ಕ್ಷಿಪಣಿಯ ಮಾದರಿ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಳು. ಇದನ್ನು ವಿಜ್ಞಾನಿಗಳು ಗಮನಿಸಿದರು. ಈ ಸುದ್ದಿ ತಿಳಿದ ಅಬ್ದುಲ್ ಕಾಲಂರು 'ಆ ಮಗುವನ್ನು ನಮ್ಮ ಸಂಶೋಧನಾ ಕೇಂದ್ರಕ್ಕೆ ಆಹ್ವಾನಿಸಿ' ಎಂದು ಸಲಹೆಯನ್ನು ಮಾಡಿದರು. ಅದರಂತೆ ಆ ಬಾಲಕಿಯನ್ನು ಪ್ರಯೋಗಾಲಯಕ್ಕೆ ಕರೆಯಿಸಿ ನಿಜವಾದ ಪೃಥ್ವಿ ಕ್ಷಿಪಣಿಯನ್ನು ನೋಡಲು ಅವಕಾಶ ಮಾಡಿಕೊಡಲಾಯಿತು. "ಕ್ಷಿಪಣಿಯ ಮೈ ಸವರಿದ ಆ ಬಾಲಕಿಯ ಮನಸ್ಸಿನಲ್ಲಿ ಎನೆಲ್ಲಾ ಭಾವನೆಗಳು ಮುಡಿದವು..." ಎಂಬ ಭಾಗದ ವಿವರಣೆ ನೀಡುವಾಗ "ಪೃಥ್ವಿಯ ಮೈ ಸವರಿದ ಆ ಬಾಲಕಿಯಲ್ಲಿ ಎಂಥ ರೋಮಾಂಚನವನ್ನೂ! ಮತ್ತು ತನ್ನ ಬದುಕಿನ ರಸ ನಿಮಿಷಗಳನ್ನು ಅನುಭವಿಸಿರಬಹುದು'' ಎಂದು ನನ್ನ ವಾಕ್ಯ ಪೂರ್ಣಗೊಳಿಸುವ ಮೊದಲೆ ಮುಂಭಾಗದ ಎರಡನೆ ಬೆಂಚಿನಲ್ಲಿ ಕುಳಿತ ಹುಡುಗರು 'ಕೊಕ್ಕಕ್.... ಕೊಕ್ಕಕ್ಕ್....ಕೊಕ್..,' ಎಂದು ನಕ್ಕುಬಿಟ್ಟರು.

ಡಿಸೆಂಬರ್ ತಿಂಗಳ ತಣ್ಣನೆಯ ಗಾಳಿಯಲ್ಲೂ ಮೈ ಬೆವತು ಹೋದಾಗ ನನ್ನ ಮುಂದು ಹಿಂದೂ ನೋಡಿಕೊಳ್ಳಬೇಕು ಎನ್ನಿಸಿತು. ತಕ್ಷಣ ನೋಡವ ಧೈರ್ಯ ಸಾಲದೆ ನಕ್ಕಂತಹ ಬೆಂಚಿನ ಮಕ್ಕಳ ಕಡೆಗೆ ನೋಡಿದೆ. ದೂರ್ವಾಸರಂತೆ ಘರ್ಜಿಸದೆ ಮುಗುಳು ನಗುತ್ತಲೆ ತಣ್ಣಗೆ "ಯಾಕೆ ನಗುತ್ತಿದ್ದಿರಿ?" ಎಂದೆ. ಪೃಥ್ವಿ ಹೆಸರಿನ ಹುಡುಗ ಅಲ್ಲಿ ಇರುವುದು ತಿಳಿಯಿತು.

ಎಲ್ಲರೂ ಅವನನ್ನೇ ನೋಡುತ್ತಿದ್ದರು. ಪೃಥ್ವಿ ಕ್ಷಿಪಣಿಯ ಮೈ ಸವರಿದಳು ಎನ್ನದೆ ಕೇವಲ "ಪೃಥ್ವಿಯ ಮೈ ಸವರಿದಳು" ಎಂದದ್ದು ನನ್ನ ಎಡವಟ್ಟು ಎಂದು ಅರಿತುಕೊಂಡು ಹುಡುಗರಿಗೆ "ಕಲಾಂ ಪಾಠದಲ್ಲಿ ಸ್ಪರ್ಶ ಸುಖದ ಭಾವನೆ ಹೇಗೆ ನುಸುಳಿತ್ರೋ" ಎಂದು ನಗುತ್ತ ಕೇಳಿದಾಗ ಎಲ್ಲರೂ ನಕ್ಕರು. ಅಲ್ಲಿಂದ ತರಗತಿ ಪಾಠ ಸಹಜವಾಗಿ ಮುಂದುವರೆಯಿತು. ಇಲ್ಲಿ ನಕ್ಕರು ಎಂದ ಮಾತ್ರಕ್ಕೆ ಸಿಟ್ಟಾಗಿ ಬೈಯುವ ಬದಲು, ನಾವು ನಗುತ್ತಲೆ ಅವರ ಭಾವನೆಗಳ ಒತ್ತಡವನ್ನು ಅರ್ಥಮಾಡಿಕೊಂಡು ಹಿತವಾಗಿ ವರ್ತಿಸಿದರೆ ಮಕ್ಕಳು ಶಿಕ್ಷರನ್ನು ಮತ್ತು ಅವರ ಪಾಠವನ್ನೂ ಇಷ್ಟಪಡುತ್ತಾರೆ ಎನ್ನುವುದನ್ನು ಇದರಿಂದ ತಿಳಿಯಬಹುದು.

ಮತ್ತೊಂದು ದಿನ ದ್ವಿತೀಯ ಪಿಯುಸಿಯ ವಾಣಿಜ್ಯ ವಿಭಾಗದ ಮಕ್ಕಳಿಗೆ ಕುಮಾರವ್ಯಾಸ ಕವಿಯ "ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು" ಎಂಬ ಪದ್ಯವನ್ನು ಬೋಧಿಸುತ್ತಿದ್ದೆನು. ಅದರಲ್ಲಿ ಪಾಂಡವರು ಅಜ್ಞಾತ ವಾಸದಲ್ಲಿ ವಿರಾಟರಾಜನ ಆಸ್ಥಾನದೊಳಗೆ ಮಾರುವೇಷದಲ್ಲಿ ಆಶ್ರಯವನ್ನು ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ಅರಮನೆಯ ರಾಣಿವಾಸದಲ್ಲಿ ದಾಸಿಯ ವೇಷದಲ್ಲಿದ್ದ ದ್ರೌಪದಿಯ ರೂಪಕ್ಕೆ ವಿರಾಟನ ಅಳಿಯನಾದ ಕೀಚಕನು ಮೋಹಗೊಂಡು ಇನ್ನಿಲ್ಲದಷ್ಟು ಉಪಟಳವನ್ನು ಅವಳಿಗೆ ನೀಡುತ್ತಾನೆ. ಇವನ ಕಿರುಕುಳವನ್ನು ನನ್ನ ಐದು ಜನ ಪತಿಗಳಲ್ಲಿ ಯಾರು ಪರಿಹರಿಸುವವರು? ಎಂದು ಆಲೋಚಿಸಿದ ದ್ರೌಪದಿ, ಕೊನೆಗೆ ಭೀಮನೊಬ್ಬನೆ ರೋಷವುಳ್ಳ ವೀರನೆಂದು ತೀರ್ಮಾನಿಸುತ್ತಾಳೆ. ಹಗಲಿನಲ್ಲಿ ಭೀಮನ ಬಳಿ ಮಾತನಾಡಿದರೆ ಧರ್ಮರಾಯ ಗಮನಿಸುತ್ತಾನೆಂದು ಅರಿತು ನಡುರಾತ್ರಿಯಲ್ಲಿ ಭೀಮನಿದ್ದ ಪಾಕಶಾಲೆಗೆ ಹೋಗಿ ಅವನ ಹೊದಿಕೆಯ ಮುಸುಕನ್ನು ಮೆಲ್ಲನೆ ಸಡಲಿಸಿ ಗಲ್ಲ ಹಿಡಿದು ಅಲುಗಾಡಿಸಿ ಎಚ್ಚರಗೊಳಿಸುತ್ತಾಳೆ. ಭೀಮನು ಎಚ್ಚರಗೊಂಡ ಮೇಲೆ 'ಈ ಇರುಳಿನಲ್ಲಿ ಏಕೆ ಬಂದೆ ಲತಾಂಗಿ ಹೇಳೆಂದು?' ಕೇಳುತ್ತಾನೆ. ಆಗ ದ್ರೌಪದಿ 'ನಿನ್ನೆ ಹಗಲಿನಲ್ಲಿ ರಾಜಸಭೆಯೊಳಗೆ ನಿಮ್ಮ ಐವರ ಎದುರಿನಲ್ಲಿ ಕೀಚಕನೆಂಬ ಕುನ್ನಿ ನನಗೆ ಕಾಲಿನಿಂದ ಒದೆದನು. ಈ ಅಪಮಾನ ನಿಮಗೆ ಗೌರವ ತರುತ್ತದೆಯೇ? ಅವನ ಕಿರುಕುಳ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದನ್ನು ಸಹಿಸಿಕೊಂಡು ನಾನು ಬದುಕಲಾರೆನು, ನಾನು ಸತ್ತರೆ ಆ ಪಾಪ ನಿನಗೆ ತಾಗುತ್ತದೆ...' ಎಂದು ಹೇಳಿ 'ಆ ದುಷ್ಟನಿಂದ ನನ್ನನ್ನು ರಕ್ಷಸು' ಎಂದು ಬೇಡಿಕೊಳ್ಳುತ್ತಾಳೆ. ಭೀಮನು 'ರಮಿಸಲು ಆ ನಾಲ್ಕು ಜನ ಪತಿಗಳು ಬೇಕು, ಕಷ್ಟಕಾಲದಲ್ಲಿ ಯುದ್ಧಮಾಡಿ ನಿನ್ನ ರಕ್ಷಣೆ ಮಾಡಲು ಮಾತ್ರ ನಾನು ಬೇಕೆ? ಹೋಗು ಅವರಲ್ಲೆ ನಿನ್ನ ಕಷ್ಟವನ್ನು ಹೇಳಿಕೊ' ಎಂದುಬಿಡುತ್ತಾನೆ. ದ್ರೌಪದಿ ಅತಿಯಾಗಿ ಕೋಪಗೊಂಡು 'ಹೆಂಡಿತಿಯ ಮಾನ-ಅಪಮಾನದ ಪ್ರಸಂಗ ಬಂದಾಗ ಒಬ್ಬನೆ ಗಂಡನಿದ್ದರೂ ಪ್ರಾಣವನ್ನಾದರು ಪಣಕ್ಕಿಟ್ಟು ವೈರಿಗಳನ್ನು ತುಂಡು ಮಾಡಿ ಹೆಂಡತಿಯ ಮಾನವನ್ನು ಕಾಪಾಡುತ್ತಾನೆ. ಆದರೆ ನೀವು ಐದು ಜನ ಇದ್ದೀರಿ, ಮೂರು ಲೋಕಗಳ ವೀರರು. ಆದರೆ ಪ್ರಯೋಜನವೇನು? ಒಬ್ಬ ಹೆಂಡತಿಯ ಮಾನವನ್ನು ರಕ್ಷಣೆ ಮಾಡಲಾಗದಂತಹ ಭಂಡರು, ಅಯ್ಯಾ ಭೀಮ ನೀನು ತಿನ್ನುವುದಕ್ಕಾಗಿಯೇ ಬದುಕಿರುವ ಕೂಳುಬಾಕ' ಇತ್ಯಾದಿಯಾಗಿ ಭೀಮನನ್ನು ಹಂಗಿಸಿ ಕೆರಳುವಂತೆ ಮಾಡುತ್ತಾಳೆ.

ಈ ಪಧ್ಯಭಾಗವನ್ನು ವಿವರಸುತ್ತಿರುವಾಗ ಕಿಟಕಿಯ ಪಕ್ಕದಲ್ಲಿ ಕುಳಿತ ವಿದ್ಯಾರ್ಥಿನಿಯೊಬ್ಬಳು ಪದೇ ಪದೇ ಹೊರಗೆ ನೋಡುವುದು, ಅಕ್ಕಪಕ್ಕದವರೊಡನೆ ಗುಸು ಗುಸು ಮಾತನಾಡುವುದನ್ನು ಮುಂದುವರೆಸೇ ಇದ್ದಳು. ಇಂಥ ವಿದ್ಯಾರ್ಥಿಗಳ ಕಡೆ ಎರಡು ಬಾರಿ ನೋಡುವುದರಲ್ಲಿ ಅವರು ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳುತ್ತಾರೆ. ಹೀಗೆ ನೋಡಿದಾಗಲೂ ಸರಿಯಾಗದಿದ್ದರೆ ಅವರನ್ನು ಬೋಧನೆಯ ಕೊನೆಯಲ್ಲಿ ಮಾತನಾಡಿಸಬೇಕಾಗುತ್ತದೆ. ಮಧ್ಯದಲ್ಲಿಯೇ ಇಂಥವರನ್ನು ತಮಾಷೆಯ ಮೂಲಕ ಪಾಠ ಆಲಿಸುವುದರ ಕಡೆಗೆ ಗಮನ ನೀಡುವಂತೆ ಮಾಡಬಹುದು. ಆದರೆ ಈ ತಮಾಷೆ ಉಳಿದವರ ಏಕಾಗ್ರತೆಯನ್ನು ಕದಡುವಂತೆ ಇರಬಾರದು. ಆದ್ದರಿಂದ ಆ ಅವಧಿಯ ಉದ್ದಕ್ಕೂ ಅವರನ್ನು ಗಮನಿಸುತ್ತಲೆ ಇದ್ದು ಕೊನೆಯಲ್ಲಿ 'ನಿನಗೆ ಸಮಯ ನಷ್ಟ ಹೇಗೆ ಆಗಿದೆ' ಎಂಬುದನ್ನು ಎರಡೇ ಮಾತುಗಳಲ್ಲಿ ಹೇಳಿದರೆ ಅಂತಹ ಮಕ್ಕಳು ತಿದ್ದಿಕೊಳ್ಳುತ್ತಾರೆ.

ಹೀಗೆ ಅಂದು ಕಿಟಕಿಯ ಕಡೆಗೆ ತಲ್ಲೀನಳಾಗಿದ್ದ ಪೂರ್ವಿಕಳನ್ನು ಬೋಧನೆಯ ಕೊನೆಯಲ್ಲಿ ಬೋಧಿಸಿದ ಪದ್ಯದ ಭಾವಾರ್ಥವನ್ನು ಹೇಳುವಂತೆ ಸೂಚಿಸಿದೆನು. ಆ ದಿನ ಪಠ್ಯಪುಸ್ತಕವನ್ನೆ ತರದಿದ್ದ ಅವಳು ತಬ್ಬಿಬ್ಬಾಗಿ ಪಕ್ಕದವಳಿಂದ ಪಠ್ಯವನ್ನು ಎರವಲು ಪಡೆದು “ಈ ಪದ್ಯದಲ್ಲಿ ದ್ರೌಪದಿ 'ನಿನ್ನೆ ರಾಜಸಭೆಯಲ್ಲಿ ಕೀಚಕನು ನಾಯಿ ಕುನ್ನಿಯನ್ನು ಹೊದ್ದನು. ಇದನ್ನು ನೋಡಿಯೂ ಸುಮ್ಮನಿರುವ ನೀವು ಐದು ಜನರು ಮೂರು ಲೋಕದ ಗಂಡರು, ನನ್ನ ಒಬ್ಬಳನ್ನು ಆಳಲಾರದ ನೀವುಗಳು ಗಂಡರಲ್ಲ ಮುಂಡರು, ಭಂಡರು, ಷಂಡರು' ಎಂದು ಭೀಮನನ್ನು ಕೆಣಕುತ್ತಾಳೆ ದ್ರೌಪದಿ” ಎಂದು ಪೂರ್ವಿಕ ಪ್ರಾಸಬದ್ಧವಾಗಿ ಹೇಳಿದಾಗ ಇಡೀ ತರಗತಿ ನಗೆಗಡಲಲ್ಲಿ ಮುಳುಗಿತು. ನನಗೂ ನಗುವನ್ನು ಬಿಗಿ ಹಿಡಿಯಲು ಸಾಧ್ಯವಾಗದೆ ಅವರೊಂದಿಗೆ ನಕ್ಕುಬಿಟ್ಟೆನು. ತರಗತಿಯಲ್ಲಿ ನಗುವಿನ ಬುಗ್ಗೆ ಚಿಮ್ಮಲು ಕಾರಣ 'ಕೀಚಕನು ನಾಯಿಕುನ್ನಿಯನ್ನು ಹೊದ್ದನು' ಎಂದದ್ದು. ಪದ್ಯದಲ್ಲಿ ದ್ರೌಪದಿ ಕೀಚಕನನ್ನು ನಾಯಿಕುನ್ನಿಗೆ ಹೋಲಿಸಿದ್ದಾಳೆ. ಏಕೆಂದರೆ ಪಾಂಡವ ವೀರರ ಮುಂದೆ ಅವನು ಕುನ್ನಿ(ನಾಯಿಮರಿ)ಯಷ್ಟೆ ಎನ್ನುವುದು ಅವಳ ತೀರ್ಮಾನ. ಪದ್ಯ ಭಾಗವನ್ನು ಕೇಳಿಸಿಕೊಳ್ಳದ ಪೂರ್ವಿಕ ಕುನ್ನಿಯನ್ನು ಸೃಷ್ಟಿ ಮಾಡಿದ್ದಳು. ಮಾನ–ಅಪಮಾನಗಳ ಪ್ರಸಂಗ ಬಂದಾಗ ಪತಿಯಾಗಲಿ, ಪತ್ನಿಯಾಗಲಿ ಪೌರುಷದಿಂದ ವರ್ತಿಸಬೇಕೆ ಹೊರತು, ಷಂಡರಂತೆ ಮೂಕ ಪ್ರೇಕ್ಷರಾಗಿರಬಾರದೆಂದು ಸಂದರ್ಭದ ತೀವ್ರತೆಯನ್ನು ಅರ್ಥೈಸಲು ಈ ಪದವನ್ನು ಬಳಸಿದ್ದೆನು. ಇದೇ ಪದ ವಿದ್ಯಾರ್ಥಿನಿಯಿಂದ ಹೊರ ಬಂದಾಗ ನಗುವಿನ ಕಟ್ಟೆ ಹೊಡೆಯಿತು.

ಎಲ್ಲರಲ್ಲೂ ಕಚಗುಳಿ ಇಟ್ಟಂತಾಗಿ ಕುಹಕ ನಗುವಿಗೂ ಕಾರಣವಾಗಿತ್ತು. ವಿದ್ಯಾರ್ಥಿಗಳ ನಗುವಿನ ಅಲೆ ಶಾಂತವಾಗುವವರೆಗೆ ತರಗತಿಯಲ್ಲಿ ಯಾರ ಮಾತು ಕೇಳಿಸುವಂತೆ ಇರಲಿಲ್ಲ. ಪೂರ್ವಿಕ ನನಗೇ ಪ್ರಶ್ನೆ ಕೇಳಿದರು ಎನ್ನುವ ಸಿಟ್ಟಿನಿಂದಲೋ, ಗಾಬರಿಯಿಂದಲೋ ಅಥವ ಇನ್ನಾರ ಮೇಲಿನ ಕೋಪದಿಂದಲೋ ಏನೋ ಹಾಗೆ ಅಂದುಬಿಟ್ಟಳು. ಪೂರ್ವಿಕ ಸ್ವಲ್ಪ ತುಂಟತನವುಳ್ಳ ಹುಡುಗಿಯೂ ಹೌದು. ಯಾವಾಗಲೂ ಕಿಟಕಿಯಾಚೆ ನೋಡುತ್ತಾಳೆಂಬುದು ಎಲ್ಲಾ ಉಪನ್ಯಾಸಕರು ಅವಳ ಮೇಲೆ ದೂರು ಹೇಳುವುದು ಮಾಮೂಲಿಯಾಗಿತ್ತು.

ಹೀಗಾಗಿ ಅವಳೆಂದರೆ ವಿದ್ಯಾರ್ಥಿ ವರ್ಗದಲ್ಲಿ ಕೆಲವರಿಗೆ ಖುಷಿ ಕೆಲವರಿಗೆ ಮುನಿಸು. ಹಿಂದಿನ ಬೆಂಚಿನಿಂದ 'ಆಳಲಾರದವರು ಯಾರು?' ಎಂಬ ಕೂಗು ಹುಡುಗರಿಂದ ಹಾರಿ ಬಂದಿತು. ಆಗ ನಾನು 'ಧರ್ಮಭೀಮಾರ್ಜುನ ನಕುಲಸಹದೇವರು' ಎಂದೆನು. “ನನ್ನ” ಎಂಬ ಆತ್ಮಾರ್ಥಕ ಸರ್ವನಾಮ ಬಳಸಿದ್ದೇ ಮತ್ತೊಂದು ಅವಾಂತರವಾಗಿತ್ತು. ಇಂಥ ವೇಳೆ ಯಾವ ಉಪನ್ಯಾಸಕ ತಾನೆ ನಗದಿರಲು ಸಾಧ್ಯ! ನಗಲೇಬೇಕು. ಆಮೇಲೆ ನಾನು ಪೂರ್ವಿಕಳನ್ನು ಸಮರ್ಥಿಸಿ ಕೊಳ್ಳಬೇಕಾಯಿತು. ದ್ರೌಪದಿಯ ಮಾತುಗಳನ್ನು ಯಥಾವತ್ತಾಗಿ ಹೇಳಿದ್ದಾಳೆ. ನೀವು ಹೇಳಿದ್ದರೂ ಹಾಗೆ ಹೇಳುತ್ತಿದ್ದಿರಿ, ಇಲ್ಲಿ ನನ್ನ ಎಂದರೆ ದ್ರೌಪದಿಯೇ ಹೊರತು ಬೇರೆಯವರಲ್ಲ ಎಂದು ಹೇಳಿ ಪಾತ್ರ ಮತ್ತು ಪ್ರೇಕ್ಷಕರ ನಡುವಿನ ಉದಾಹರಣೆಯನ್ನೂ ವಿವರಿಸಿ ಪೂರ್ವಿಕಳ ಬೆಂಬಲಕ್ಕೆ ನಿಂತೆನು. ಹೀಗೆ ಮಾಡಲೇಬೇಕು. ಏಕೆಂದರೆ ವಿದ್ಯಾರ್ಥಿಗಳು ಮತ್ತೊಂದು ದಿನ ಉಪನ್ಯಾಸಕರು ಕೇಳಿದ ಪಠ್ಯದ ವಿವರಣೆಯನ್ನು ಹೇಳುವ ಧೈರ್ಯ ಮಾಡುವುದಿಲ್ಲ. ಅವರುಗಳ ಆತ್ಮಸ್ಥೈರ್ಯ ಕುಗ್ಗದಂತೆ ನೋಡಿಕೊಳ್ಳಬೇಕು. ಯಾವ ಕಾರಣಕ್ಕೂ ಅವರ ಅಭಿವ್ಯಕ್ತಿಯನ್ನು ಮೊಟಕುಗೊಳಿಸಬಾರದು. 'ಹೀಗೆ ಬಾಯಿಗೆ ಬಂದಂತೆ ಹೇಳುವುದಾ!' ಎಂದು ಗದರಿಸಲುಬಾರದು.

ಈ ಬಗೆಯ ಸನ್ನಿವೇಶಗಳು ಒಂದಲ್ಲ ಒಂದು ಸಂದರ್ಭಗಳಲ್ಲಿ ಸಂಭವಿಸುತ್ತವೆ. ಆ ವೇಳೆ ಮಕ್ಕಳ ಮೇಲೆ ಸಿಟ್ಟುಗೊಂಡು ಗುರ್ರ್ ಎನ್ನಬಾರದು. ವಿದ್ಯಾರ್ಥಿಗಳ ಮಾತುಗಳಲ್ಲೇ ಹೇಳುವುದಾದರೆ “ಬೌ ಬೌ ಬೌ...” ಎಂದು ಬೊಗಳಲೂಬಾರದು. ಬದಲಿಗೆ ಹಿತವಾಗಿಯೆ ಕಲಿಕಾ ವಾತಾವರಣವನ್ನು ಸೃಷ್ಟಿ ಮಾಡಲು ಸಾಧ್ಯವಿದೆ ಎನ್ನುವ ನಿಟ್ಟಿನಲ್ಲಿ ಆಲೋಚನೆ ಮಾಡಿದರೆ ವಿದ್ಯಾರ್ಥಿಗಳ ಮನಸ್ಸನ್ನು ಗೆಲ್ಲಬಹುದು. ಪಠ್ಯವನ್ನು ಯಶಸ್ವಿಯಾಗಿ ಬೋಧಿಸಿ ವಿಷಯಾಸಕ್ತಿಯನ್ನೂ ಮೂಡಿಸಲು ಸಾಧ್ಯವಿದೆ ಎಂಬುದನ್ನು ಸಾಬೀತು ಪಡಿಸಬಹುದು.

# ಪಂಕಜನಹಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ



ಪ್ರಸ್ತುತ ಲೇಖನವು ಕಲೆ, ಸಂಸ್ಕೃತಿ, ಭಕ್ತಿಯ ತಾಣ ಪಂಕಜನಹಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿ ಕ್ಷೇತ್ರದ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸುವುದಾಗಿದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹಾಗೂ ಇತಿಹಾಸದಲ್ಲಿ ತುಮಕೂರು ಜಿಲ್ಲೆ ಅತ್ಯಂತ ವಿಶಿಷ್ಟವೂ ಕಲಾತ್ಮಕವಾದ ಸಂಗತಿಗಳಿಗೆ ಮುನ್ನುಡಿ ಬರೆದಿದೆ. ಇತಿಹಾಸವೆಂದರೆ ಕೇವಲ ರಾಜಮನೆತನಗಳ ರಾಜರ ಏಳು-ಬೀಳಿನ ಕಥೆಯಷ್ಟೇ ಅಲ್ಲ. ಆ ಚರಿತ್ರೆಯಲ್ಲಿ ಕಲೆ, ಸಾಹಿತ್ಯ, ವಾಸ್ತುಶಿಲ್ಪ ಕ್ಷೇತ್ರಗಳು ಹಾಗು ಸಾಮಾಜಿಕ ಸಂಗತಿಗಳು ಅತ್ಯಂತ ಮಹತ್ವವನ್ನು ಪಡೆದಿದೆ, ಈ ಪ್ರಾಂತ್ಯವನ್ನು ಆಳಿದ ಗಂಗರು, ನೊಳಂಬರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು, ಮೈಸೂರು ಒಡೆಯರ ಕಾಲ ವೈವಿಧ್ಯತೆಯ ದೇವಾಲಯಗಳ ನಿರ್ಮಾಣಕ್ಕೆ ಸಾಕ್ಷಿಯಾಗಿದೆ. ಅಂತಹ ಕ್ಷೇತ್ರಗಳಲ್ಲಿ ಸಂಶೋಧಕರನ್ನು, ಭಕ್ತರನ್ನು ಆಕರ್ಷಿಸುವ ತಾಣ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟೀಕೆರೆ ಹೋಬಳಿಯ ಪಂಕಜನಹಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯವು ತನ್ನ ವೈಶಿಷ್ಟ್ಯತೆಯಿಂದಲೇ ಗಮನ ಸೆಳೆಯುತ್ತದೆ.

ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ಗಡಿ ಭಾಗಕ್ಕೆ ಹೊಂದಿಕೊಂಡಂತಿರುವ ಈ ದೇವಾಲಯ ಪಂಕಜನಹಳ್ಳಿ ಎಂಬ ಗ್ರಾಮದಲ್ಲಿ ಪುರಾತನ ಹಾಗು ಪ್ರಖ್ಯಾತ ಪುಣ್ಯಕ್ಷೇತ್ರ ಎನಿಸಿಕೊಂಡಿದೆ. ಕ್ರಿ.ಶ. 1529 ರಲ್ಲಿ ಸಿಕ್ಕಿರುವ ಶಾಸನದ ಪ್ರಕಾರ ಗಂಗರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯ ಎಂದು ಸರ್ಕಾರಿ ದಾಖಲೆಗಳಲ್ಲಿ ಕಂಡು ಬಂದಿದ್ದು ದೇವಾಲಯದ ಸಮೀಪದ ಕಿಬ್ಬನಹಳ್ಳಿ ಮತ್ತು ಬಿಳಿಗೆರೆ ಗ್ರಾಮದಲ್ಲಿ ದೊರೆತಿರುವ ಶಾಸನಗಳು ಹಾಗು ಉಲ್ಲೇಖಗಳಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರೂ ನಿಖರವಾದ ಆಧಾರಗಳು ದೊರೆತಿಲ್ಲ.

**ದೇವಾಲಯದ ಆಕಾರ :**

ಮಲ್ಲಿಕಾರ್ಜುನಸ್ವಾಮಿ ದೇವಾಲಯವು ಸುಮಾರು 1 ಎಕರೆ ವಿಶಾಲ ಪ್ರದೇಶದಲ್ಲಿದ್ದು ಗರ್ಭಗೃಹ, ಸುಖನಾಸಿ, ರಂಗಮಂಟಪ, ಮುಖಮಂಟಪ, ಪಥಚಲನಾಂಕಣ, ನಂದಿ ಮಂಟಪ, ಮಹಾದ್ವಾರ ಹೊಂದಿದ್ದು ದ್ರಾವಿಡ ಶೈಲಿಯಲ್ಲಿ ರಚನೆಯಾಗಿದ್ದು ಪೂರ್ವ-ಪಶ್ಚಿಮದಲ್ಲಿ ತೆರೆದ ಜಗುಲಿಯಿದೆ. ಮಹಾದ್ವಾರವು ಬಹಳ ಎತ್ತರವಾಗಿದ್ದು ಅತ್ಯುತ್ತಮ ಕೆತ್ತನೆ ಕೆಲಸದಿಂದ ಕೂಡಿದೆ. ಇದರ ಮುಂಭಾಗದಲ್ಲಿ 3.5 ಅಡಿ ಜಗುಲಿಯ ಮೇಲೆ 40 ಅಡಿ ಎತ್ತರದ ದೀಪದ ಕಂಭವಿದೆ. ಗರ್ಭಗೃಹದಲ್ಲಿ ಭೂಮಿಯಿಂದ ಉದ್ಭವವಾಗಿರುವ 101 ಲಿಂಗಗಳಂತೆ ಗೋಚರವಾಗುವ ಸಣ್ಣ-ಸಣ್ಣ ನುಣುಪಾದ ಕಲ್ಲುಗಳ ಗುಡ್ಡೆಯಿದೆ. ಅದರ ಮೇಲ್ಭಾಗದಲ್ಲಿ ಹಿತ್ತಾಳೆಯಿಂದ ಕೂಡಿರುವ ಮಲ್ಲಿಕಾರ್ಜುನಸ್ವಾಮಿಯ ಮುಖಬಿಂಬವಿಟ್ಟು ಪೂಜಿಸುತ್ತಾರೆ. ಗರ್ಭಗೃಹದ ಪ್ರದಕ್ಷಿಣ ಪಥದಲ್ಲಿ ವಿಷ್ಣು, ಭೈರವ, ಗಣಪತಿಯ ಶಿಲ್ಪಗಳಿವೆ. ದೇವಾಲಯದ ಉತ್ತರಕ್ಕೆ ಪಾರ್ವತಿದೇವಿ, ದಕ್ಷಿಣಕ್ಕೆ ವೀರಭದ್ರದ ದೇವಾಲಯವಿದ್ದು 5 ಅಡಿಯ ಮೂರ್ತಿ ಇದೆ. ಪೂರ್ವಕ್ಕೆ ಬೃಹತ್ ನಂದಿ ವಿಗ್ರಹವಿದ್ದು ದೇವಾಲಯದ ಈಶಾನ್ಯದಲ್ಲಿ ಸುಂದರವಾದ ಕಲ್ಯಾಣಿಯಿದ್ದು ಮೊದಲು ಪೂಜೆಗೆ ಇಲ್ಲಿಂದಲೇ ನೀರು ತೆಗೆದುಕೊಂಡು ಹೋಗುತ್ತಿದ್ದರೆಂದು, ಅಷ್ಟೇ ಅಲ್ಲದೇ ಶಿವರಾತ್ರಿಯ ಸಂದರ್ಭದಲ್ಲಿ ಅಮ್ಮನವರ ತೆಪ್ಪೋತ್ಸವವೂ ಈ ಕಲ್ಯಾಣಿಯಲ್ಲಿ ನಡೆಯುತ್ತಿತ್ತು ಎಂದು ಸ್ಥಳೀಯರು ಹೇಳುತ್ತಾರೆ.

ಅಂದಿನ ಕಾಲದಲ್ಲಿ ಪ್ರಥಮವಾಗಿ ಈ ಕಲ್ಯಾಣಿಯಿಂದ ಗಂಗಾಪೂಜೆ ನೆರವೇರಿಸಿ ನಂತರ



**ಡಾ. ರವಿಕುಮಾರ್. ಸಿ**
ಪ್ರಭಾರ ಪ್ರಾಂಶುಪಾಲರು
ನವೋದಯ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ.
ಮೊ : 9986980207

ಗಣಪತಿ ಪೂಜೆ ನಡೆಸಿ ನಂತರ ಶ್ರೀ ಮಲ್ಲಿಕಾರ್ಜುನಸ್ವಾಮಿಗೆ ಅಭಿಷೇಕ ನಡೆಸಲಾಗುತ್ತಿತ್ತು. ಕ್ರಮೇಣ ಗಣಪತಿ ವಿಗ್ರಹವು ಮುಕ್ಕಾದ ಕಾರಣ ಪೂಜೆ ನಿಲ್ಲಿಸಿದ್ದರಿಂದ, ದೇವಾಲಯವು ದುಸ್ಥಿತಿಗೆ ಬಂದು ತಲುಪಿತು. ಹೀಗಾಗಿ 2013 ರಲ್ಲಿ ಗಣಪತಿ ಮೂರ್ತಿಯನ್ನು ಹೊಸದಾಗಿ ನವೀಕರಿಸಲಾಗಿದೆ.

**ದೇವಾಲಯದ ನಿರ್ವಹಣೆ ಬಗ್ಗೆ :**

ದೇವಾಲಯ ಕಟ್ಟಿಸುವುದು ಎಷ್ಟು ಮುಖ್ಯವೋ ಅದನ್ನು ನಿರ್ವಹಣೆ ಮಾಡುವುದು ಅಷ್ಟೇ ಮುಖ್ಯ. ಹಿಂದಿನಿಂದಲೂ ದೇವಾಲಯಗಳು ತಮ್ಮದೇ ಆರ್ಥಿಕ ಮೂಲಗಳನ್ನು ಹೊಂದಿದ್ದವು. ರಾಜರುಗಳು ದೇವಾಲಯಗಳಿಗೆ ಭೂಮಿಯನ್ನೋ, ವಸ್ತುಗಳನ್ನು ದಾನ ರೂಪವಾಗಿ ನೀಡಿರುವುದು ಮೊದಲಿನಿಂದಲೂ ತಿಳಿಯುತ್ತದೆ. ಹಾಗೇ ಮಲ್ಲಿಕಾರ್ಜುನಸ್ವಾಮಿ ದೇವಾಲಯಕ್ಕೆ ಕ್ರಿ.ಶ. 1529ರಲ್ಲಿ ಬಾನವಾಡಿಯ ಚೆನ್ನಶೆಟ್ಟಿ ಭೂ ದಾನ ನೀಡಿದರೆ, ಊಳಿಗದ ಚಿಕ್ಕಣ್ಣ ತೆಪ್ಪೋತ್ಸವಕ್ಕೆ ಕಲ್ಯಾಣಿಯನ್ನು, ಪುರವರದ ನಿಂಗಣ್ಣ, ವಡೇರಹಳ್ಳಿ ಚನ್ನವೀರಯ್ಯನವರು ತಮ್ಮ ಉದಾರ ಮನಸ್ಸಿನಿಂದ ದಾನ ನೀಡಿದ್ದಾರೆ. ಬಾನವಾಡಿಯ ಚೆನ್ನಶೆಟ್ಟಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಶ್ರೇಷ್ಠ ವರ್ತಕನಾಗಿದ್ದರಿಂದ ಅಪಾರ ಪ್ರಮಾಣದ ಆರ್ಥಿಕ ಸ್ಥಿರತೆ ಒದಗಿಸಿದ್ದಾನೆ. ವಿಜಯನಗರದ ಅರಸರು ಅವನನ್ನು ಶೆಟ್ಟಿಕೆರೆ ಪ್ರಾಂತ್ಯದ ಅಧಿಕಾರಿಯನ್ನಾಗಿ ಮಾಡಿದ್ದರು. ಇವನ ಮೂಲ ಮಾಗಡಿ ತಾಲ್ಲೂಕಿನ ಬಾನವಾಡಿ ಕ್ರಿ.ಶ. 1529ರಲ್ಲಿ ಬರೆಸಿದ ಶಾಸನದಲ್ಲಿ ಪಂಕಜನಹಳ್ಳಿ ಗ್ರಾಮದಿಂದ ಉತ್ಪತ್ತಿಯಾದ ದವಸ ಧಾನ್ಯ ಭೂಮಿ ಒಳಗಡೆ ಸಿಗುವ ನಿಧಿ ನಿಕ್ಷೇಪವು ಶ್ರೀ ಮಲ್ಲಿಕಾರ್ಜುನನಿಗೆ ಸೇರಬೇಕು ಎಂದು ಆದೇಶಿಸಿ ಗ್ರಾಮದ ನಾಲ್ಕು ಮೂಲೆಗಳಲ್ಲಿ ಲಿಂಗಮುದ್ರೆ ಕಲ್ಲುಗಳನ್ನು ನಡೆಸಿ ದೇವಾಲಯುವು ಆರ್ಥಿಕವಾಗಿ ಸದೃಢವಾಗಲು ಸಹಕಾರಿಯಾಗಿದ್ದಾನೆ.



ಈ ಶಾಸನದಲ್ಲಿನ ಉಲ್ಲೇಖವಾಗಿರುವ ಕೆಳಗಿನ ಸಾಲುಗಳು ಬಹುಮುಖ್ಯವಾಗಿವೆ. "ದಾನಪಾಲನ ಯೋರ್ಮಧ್ಯೇ ದಾನಾಚ್ಛ್ರೇ ಯೋನು ಪಾಲನಂ ದಾನ ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ". ಎಂದರೆ ಕೊಟ್ಟ ದಾನವನ್ನು ಸಂರಕ್ಷಿಸುವುದು ಹೊಸದಾಗಿ ನೀಡುವುದಕ್ಕಿಂತ ಹೆಚ್ಚು ಪೂರಕ. ದಾನ ಮಾಡುವುದರಿಂದ ಸ್ವರ್ಗ ಲಭಿಸುತ್ತದೆ. ದೇವರ ಆಸ್ತಿಯನ್ನು ಅಪಹರಿಸಿದವರಿಗೆ ಕಠಿಣ ಶಿಕ್ಷೆಯಾಗುತ್ತದೆ. ಸಂತಾನವೇ ನಶಿಸಿ ಹೋಗುತ್ತದೆ ಎಂಬುದಾಗಿ ಉಲ್ಲೇಖಿಸಿದ್ದಾನೆ.

"ಮಲ್ಲಿಕಾರ್ಜುನ ದೇವರ . . . . ಅಳುಪಿದರೆ ಅವರು ತಮ್ಮ ತಂದೆ-ತಾಯಿಯನ್ನು ಕೊಂದ ಪಾಪ ಕೃತ್ಯ ಕಟ್ಟಿಕೊಂಡಂತೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೇ ಶ್ರೀ ಮಲ್ಲಿಕಾರ್ಜುನ ದೇವರ ಮೇಲೆ ಪುನಃ ತೆರಿಗೆ ವಿಧಿಸಿದರೆ ಅದು ರಾಜರಾದ ಶ್ರೀ ಕೃಷ್ಣ ದೇವರಾಯರಿಗೆ ದ್ರೋಹ ಬಗೆದಂತೆ ಎಂದು ಚೆನ್ನಶೆಟ್ಟಿಯು ಶಾಸನ ಹೇಳುತ್ತದೆ. ಹೀಗಾಗಿ ಪುರಾತನ ಕಾಲದಿಂದಲ್ಲೂ ದೇವಾಲಯಕ್ಕೆ ಆದಾಯದ ಮೂಲಗಳಿವೆ ಎಂಬುದು ತಿಳಿಯುತ್ತದೆ.



ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರ ಕಾರ್ಯವು ನಡೆದಿದ್ದು ದಿನನಿತ್ಯ ಪೂಜೆ ಅಭಿಷೇಕವನ್ನು ನಿರಂತರವಾಗಿ ಮಾಡಲಾಗುತ್ತಿದ್ದು, ಭಕ್ತರ ಇಷ್ಟಾರ್ಥ ಕಾಯುವ ಶ್ರೀ ಮಲ್ಲಿಕಾರ್ಜುನ ದೇವರು ಸುತ್ತಮುತ್ತ ಹಳ್ಳಿಗಳಿಂದಲೂ ಭಕ್ತರನ್ನು ಹೊಂದಿದ್ದು ದೇವಾಲಯವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ.

ಸಾಹಿತ್ಯ, ಸಂಶೋಧನೆಯ ವಿದ್ಯಾರ್ಥಿಯಾದ ನನಗೆ ಪಂಕಜನಹಳ್ಳಿ ಬಹುಶಃ ದೇವಾಲಯದ ಮುಂದಿನ ಕೆರೆಯಲ್ಲಿ ಕಮಲದ ಹೂ ಹೆಚ್ಚು ಬೆಳೆಯುತ್ತಿದ್ದ ಕಾರಣ ಈ ಗ್ರಾಮಕ್ಕೆ ಪಂಕಜನಹಳ್ಳಿ ಎಂಬ ಹೆಸರು ಬಂದಿರುವುದರ ಬಗ್ಗೆ ಕುತೂಹಲ ಸ್ಥಳೀಯರ ಮಾತುಗಳಿಂದ ಕ್ಷೇತ್ರ ಕಾರ್ಯದ ಹೊತ್ತಿನಲ್ಲಿ ತಿಳಿಯಿತು. ಈ ಎಲ್ಲ ಕಾರಣದಿಂದ ಕಲೆ, ಭಕ್ತಿ, ಕುತೂಹಲದ ಕೇಂದ್ರ ಬಿಂದುವಾಗಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ ಪುಣ್ಯಕ್ಷೇತ್ರವಾಗಿದೆ.

# ವಿಶ್ವಗುರು ಬಸವಣ್ಣ – ಒಂದು ವಿಶ್ಲೇಷಣೆ

ಕ್ರಿಯಾವಿಹೀನವಾದ ಜ್ಞಾನವು, ಜ್ಞಾನವಿಹೀನವಾದ ಕ್ರಿಯೆಯೂ ಬಂಧನವನ್ನುಂಟು ಮಾಡುತ್ತದೆ. ಬಸವಣ್ಣನವರಲ್ಲಿ ಕ್ರಿಯಾಜ್ಞಾನಗಳ ಸಾಮರಸ್ಯಗಳ ಮಹಾನ್ ವ್ಯಕ್ತಿತ್ವವಿತ್ತು. ನುಡಿದಂತೆ ನಡೆವುದು ಬಸವೇಶ್ವರರ ವ್ಯಕ್ತಿತ್ವದ ಉಸಿರು. ಕ್ರಿಯಾಜ್ಞಾನ ಸಾಮರಸ್ಯಗಳ ಅರಿವುಳ್ಳ ಜಂಗಮನ ಅಸುವು ಹಾರಿದರೆ, ಅವರೊಡನೆ ತನ್ನ ಪ್ರಾಣವನ್ನೂ ಬೆರೆಸುವ ಮನೋಭಾವವುಳ್ಳವನಾದುದರಿಂದ ಬಸವಣ್ಣನವರನ್ನು ಜಂಗಮ ಪ್ರಾಣಿಯೆಂದು ಕರೆಯುತ್ತಿದ್ದರು. ಲಿಂಗ ಸ್ವರೂಪವಾಗಿ ಚರಿಸುವ ಲೀಲಾಮೂರ್ತಿ ಬಸವಣ್ಣನು, 'ಜಂಗಮ ಲಿಂಗದಲ್ಲಿ ಭಕ್ತಿಯನ್ನಿಟ್ಟು, ಕೂಡಲಸಂಗನ ಶರಣರ ಪಾದಕಮಲದಲ್ಲಿ ಆನು ತುಂಬಿ' ಎನ್ನುವ ಮನೋಗತವುಳ್ಳವರನ್ನು ಪರೀಕ್ಷಿಸಲು ಪ್ರಾಣಿ ಕಿನ್ನರಯ್ಯಗಳ ಪ್ರಾಣವು ಇದ್ದಕ್ಕಿದ್ದಂತೆಯೇ ಹಾರಿಹೋಯಿತು. ಶರಣರ ಮನಸ್ಸು ಕಳವಳದಿಂದಿರುವಾಗ ದುಃಖದಿಂದೊಡಗೂಡಿದ ಬಸವೇಶ್ವರರು ಜಂಗಮವೇ ತನ್ನ ಪ್ರಾಣ, ತನ್ನ ಪ್ರಾಣವೇ ಜಂಗಮ, ಇದಕ್ಕೆ ಸಂಗಮನೇ ಸಾಕ್ಷಿ ಎನ್ನುವ ಇವರ ಮನಸ್ಸು ಹೂವಿನಂತೆ ಅತಿ ಮೃದು, ಕೋಮಲ. ದುಃಖ ಸಾಗರದಲ್ಲಿ ಮುಳುಗಿರುವ ಬಸವೇಶ್ವರರನ್ನು ಕುರಿತು ಮಾಚಿ ತಂದೆಗಳು "ನೆನೆವುದು ಕಿನ್ನರಾಧೀಶನ ಗುಣಮಂಪೂಣ್ದು ತನ್ನ ಭಾಷೆಯನೀಗಳ್, ನೆನೆಯದೆ ಕಣ್ಬನಿಗಳ ಪೆರ್ಪೊನಲಿಂ ನಾದಪರೆ ಭಲರೇ ಭಕ್ತವರೇಣ್ಯ" ಎಂದು ಹೇಳುತ್ತಿದ್ದಂತೆ ಬಸವೇಶ್ವರರಿಗೆ ಅರಿವುಂಟಾಗಿ ಇದ್ದಕ್ಕಿದ್ದಂತೆಯೇ ಅವರ ಪ್ರಾಣಪಕ್ಷಿಯು ಶಿವನಲ್ಲಡಗುತ್ತದೆ. ಮಾನವ ಸಹಜವಾದ ಮರವೆಯು ಆಗಾಗ ತಲೆದೋರಿ ಶರಣರ ಸಂಗಡ ಝುಂಝಾ ಮಾರುತನಾಗಿ ಹಾರಿಹೋಗುತ್ತದೆ. ಅಣ್ಣನವರ ಆಂತರಿಕ ಜೀವನದ ಅಭಿವೃದ್ಧಿಗೆ ತಡೆಯುಂಟಾಗುತ್ತಿರಲಿಲ್ಲ. ಬಸವಣ್ಣನವರ ವ್ಯಕ್ತಿತ್ವದ ವೈಶಿಷ್ಟ್ಯವಡಗಿರುವುದೇ ಇಲ್ಲಿ. ಅವರ ಆಂತರಿಕವಾದ ಧಾರ್ಮಿಕ ಮಾರ್ಗವು ಚದುರಿ ಪ್ರಫುಲ್ಲಿತವಾಗಿರುವುದನ್ನು ಈ ಸಂದರ್ಭದಲ್ಲಿ ಕಾಣಬಹುದು. "ತತ್ವನಿಕಷಕ್ಕಿಟ್ಟ ತಾಡಸಿಯೇ ಅಪರಂಜಿ" ಎನ್ನುವಂತಾಗಿಸುವ ಸನ್ನಿವೇಶವೇ ಇಲ್ಲಿ ವ್ಯಕ್ತವಾಗಿದೆ. ಅಣ್ಣನವರ ಶಿವಯೋಗ ನಿದ್ರಾಮುದ್ರೆಯನ್ನೊಡೆದು, ತನು ಮನಗಳನ್ನೂ, ಸಕಲೇಂದ್ರಿಯಗಳನ್ನೂ ಶಿವನಲ್ಲಿ ಬೆರಸಿ ಶರಣ ಸತಿ ಲಿಂಗ ಪತಿಯಾಗಿ, ತಾನೇ ತಾನಾಗುವ ಭಾವವು ವರ್ಣನಾತೀತವಾದುದು. ಪರಮಾತ್ಮನಲ್ಲಿ ಮನಮಗ್ನನಾಗಿ ನೆನೆಯುತ್ತಾ ನೆನೆಯುತ್ತಾ ಭ್ರಮರ ಕೀಟ ನ್ಯಾಯದಂತೆ, ತಾನೇ ತಾನಾಗಿ ಲಿಂಗವೇ ತಾನಾಗುವನು. ತಾನೇ ಸಂಗನೋ, ಸಂಗನೇ ತಾನೋ ಎನ್ನುವಂತೆ, ತ್ರಿವಿಧಾನಂದ ರಸಮಯದಲ್ಲಿ ಭಾವ ಭ್ರಾಂತಿಯಡಗಿ ಪರಮಾನಂದ ಸ್ವರೂಪವಾದ ಜ್ಯೋತಿರ್ಕಳೆಯಲ್ಲಿ ತಾನೇ ತಾನಾಗಿ ಶಿವೈಕ್ಯ ಸೌಖ್ಯ ಸಾಮ್ರಾಟನಾಗಿ ರಾರಾಜಿಸುತ್ತಿರುವುದನ್ನು ಶಿವಮುದ್ರಾ ಯೋಗದಲ್ಲಿ ಕಾಣುತ್ತೇವೆ. ಈ ಭಾಗ್ಯದಲ್ಲಿ ಬಸವೇಶ್ವರರ ಭಾಗ್ಯವೇ ಭಾಗ್ಯ. ಇಂತಹ ಮಹಾನ್ ವ್ಯಕ್ತಿಯನ್ನು ಪಡೆದ ಶರಣರ ಭಾಗ್ಯವನ್ನು ಏನೆಂದು ಹೇಳಲಿ, ಶರಣರು ಧನ್ಯರು. ಶರಣರ ಹೃದಯವಿರುವುದು ಬಸವಣ್ಣನವರಲ್ಲಿ, ಬಸವಣ್ಣನವರ ಹೃದಯವಿರುವುದು ಶರಣರಲ್ಲಿ. ಶರಣರ ದಿವ್ಯವಾಣಿಯಲ್ಲಿ ಅಣ್ಣನವರ ವ್ಯಕ್ತಿತ್ವವೆಂಬ ಮರವು ಕವಲು ಕವಲೊಡೆದು ನಾನಾ ರೆಂಬೆ ಕೊಂಬೆಗಳಿಂದ ಚಿಗುರು, ಹೂ, ಹೀಚಿ, ಕಾಯಿ, ಮಿಡಿ, ದೋರೆಗಾಯಿ, ಹಣ್ಣುಗಳಿಂದ ಕಂಗೊಳಿಸುತ್ತಿರುವುದನ್ನು ಕಾಣುತ್ತೇವೆ.

ಕಿನ್ನರಯ್ಯಗಳ ಅಸುವು ಶಿವನಲ್ಲಿ ಬೆರೆದೊಡನೆಯೇ ಜಂಗಮಪ್ರಾಣಿಯೆನಿಸಿದ ಬಸವೇಶ್ವರರೂ ತನ್ನಸುವನ್ನು ಶಿವನಲ್ಲಿ ಬೆರೆಸುವರು. ಮೊದಲು ದೇವರು ಅವರಿಬ್ಬರ ಪ್ರಾಣವನ್ನೂ ಪಡೆಯುವರು. ಆಗ ಶರಣ ವೃಂದವು "ಬೆಸ್ರೂಯಿಗೆ ಜವದ ಜಂಗಮ। ದಿಸುವಿನೊಳಸುವಂ ನಿವೇದಿಸಲ್ಬರ್ಕುವ ಪೇಳ್॥ ಬಸವ ಸಚಿವೇಂದ್ರ ನಿನ್ನವೊಲಸದೃಶಮಿದು ಭಕ್ತಿಭಾವ ಮಾರ್ಗವಶ್ಯಕಂ ॥ ಧನವನ್ನು ಮನವನ್ನು ತನುವನ್ನು ಪ್ರಾಣವನ್ನು ಇತರರಿಗಾಗಿ ಅರ್ಪಿಸುವುದು ಅತಿ ಕಷ್ಟ. ಧನವನ್ನು ಕೊಡಲು ಮನಸ್ಸು ಬರುವುದೇ ಕಷ್ಟ. ಒಂದುವೇಳೆ ಕೊಟ್ಟರೂ ಕೊಡಬಹುದು, ತನುವನ್ನು ಕೊಡುವುದಂತೂ ಅತಿ ಅಸಾಧ್ಯವಾದ ಕಾಯಕ. ತನುವನ್ನಾದರೂ ಕೊಡಬಹುದು, ಮನವನ್ನು ಕೊಡುವುದು ಹೇಗೆ ಸಾಧ್ಯ? ಇದನ್ನು ಕೊಡಬಹುದೆಂದು ಭಾವಿಸಿದರೂ ಪ್ರಾಣವನ್ನು ಕೊಡುವುದು ಹೇಗೆ? ಭಾವಿಸಿ ಪರಣಕ ನಿರತಾತ್ಮನಾದವಂಗರಿದುಂಟೆ? ದಯೆ ಬಂದರೆ ಏನನ್ನಾದರೂ ಕೊಡಬಹುದು. ದಯೆಯಿಲ್ಲದಿದ್ದರೆ ಧರ್ಮವಾವುದಯ್ಯಾ ಎಂದಿದ್ದಾರೆ ಅಣ್ಣನವರು. ದಯೆ ಬೇಕು, ಇದಿಲ್ಲದಿದ್ದರೆ ಯಾವ ಧರ್ಮವೂ ಸಾಧ್ಯವಿಲ್ಲ. ಗುರು ಲಿಂಗ ಜಂಗಮಕ್ಕಾಗಿ ತನು, ಮನ, ಧನ, ಪ್ರಾಣಗಳನ್ನೇ ಅರ್ಪಿಸಿ ಅರ್ಥ ಪ್ರಾಣಗಳ ಹಂಗನ್ನರಿದು, ಲಿಂಗರೂಪಿಯಾದವನು ನಮ್ಮ ಬಸವಣ್ಣ. ಲಿಂಗ ಪ್ರಾಣಿಗಳನ್ನು ಕಾಣಬಹುದಾದರೂ ಜಂಗಮ ಪ್ರಾಣಿಗಳನ್ನು ಕಾಣುವುದು ಅಪರೂಪ. ಜಂಗಮ ಪ್ರಾಣಿಯೆಂದರೆ ಬಸವಣ್ಣ, ಬಸವಣ್ಣನೆಂದರೆ ಜಂಗಮ ಪ್ರಾಣಿ. ಜೀವ ಜಂಗಮ ಸುರಧ್ರುಮನಾಗಿ, ಸದ್ಭಕ್ತಿ ಸಾಮ್ರಾಜ್ಯಕ್ಕೆ ವಿಭುವೆನಿಸೊಪ್ಪು ತಿರ್ದಂ ವೃಷೇಂದ್ರಂ ಎಂದರೆ ಬಸವಣ್ಣನವರು ಸದ್ಭಕ್ತ ಸಾಮ್ರಾಜ್ಯದ ವಿಭುವಾಗಿ, ಶರಣ ಸಂದೋಹದಲ್ಲಿ ಶರಣರೆಂಬ ಒರೆಗಲ್ಲಿನಲ್ಲಿ ಉಜ್ಜಿ ತಿಕ್ಕಿ ಬರೆದು "ಕುಂಡಣಕ್ಕಿಟ್ಟ ವಜ್ರದಂತೆ" ಥಳಥಳಾಯಮಾನವಾಗಿ ರಂಜಿಸಿದ್ದಾರೆ.

**ವಿದ್ವಾನ್ ಎಸ್.ಷಡಕ್ಷರಯ್ಯ**
ಎಸ್.ಐ.ಟಿ. ಬಡಾವಣೆ, ತುಮಕೂರು.
ಮೊ : 9972603985

# ಕವಿಗಳು ಅಜರಾಮರರು

**ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ । ನಾಸ್ತಿ ತೇಷಾಂ ಯಶಃಕಾಯೋ ಜರಾಮರಣಜಂ ಭಯಮ್॥**

ಅದೃಷ್ಟವಂತರೂ ರಸಸಿದ್ದರೂ ಆದ ಕವೀಶ್ವರರು ಯಾವಗಲೂ ಜಯ ಶೀಲರೇ ಆಗಿರುತ್ತಾರೆ. ಏಕೆಂದರೆ ಅಂಥವರ ಕೀರ್ತಿ ರೂಪವಾದ ಶರೀರಕ್ಕೆ ಮುಪ್ಪಿನ ಅಥವಾ ಮರಣದ ಭಯವೆಂಬುದು ಇರುವುದೇ ಇಲ್ಲ.

ಮಾನವರನ್ನು ಬುದ್ಧಿವಂತರು, ದಡ್ಡರು ಎಂದು ಎರಡು ವಿಧವಾಗಿ ವಿಂಗಡಿಸಬಹುದು, ಬುದ್ಧಿವಂತರು ಎಂದರೆ ವಿವೇಕಿಗಳು, ಇವರು ಪಂಡಿತರಾಗಿ, ಕವಿಗಳಾಗಿ, ಜ್ಞಾನಿಗಳಾಗಿ, ಬರಹಗಾರರಾಗಿ, ತಪಸ್ವಿಗಳಾಗಿ, ಮೇಧಾವಿಗಳಾಗಿ ಮೆರೆಯುತ್ತಾರೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬಂತೆ ತಮ್ಮ ಜ್ಞಾನವನ್ನು ಹಂಚುತ್ತಾ ಮುಂದಿನ ಪೀಳಿಗೆಗೆ ದಾರಿ ದೀಪಗಳಾಗುತ್ತಾರೆ.

"PEN IS MIGHTER THAN SWARD" ಬುದ್ಧಿವಂತರಾದವರು ಕಾವ್ಯಗಳನ್ನು ರಚಿಸುತ್ತಾ, ಕಾವ್ಯ ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಾ ವಿನೋಧವಾಗಿ, ಸಂತೋಷವಾಗಿ ಕಾಲ ಕಳೆಯುತ್ತಾರೆ. "ಕಾವ್ಯವು ಒಂದು ದೀಪದಂತೆ, ಅದರಿಂದ ವಿವೇಕಿಯು ತನ್ನ ಮನೆಯನ್ನು ಬೆಳಗಿಸಿಕೊಳ್ಳಬಹುದು. ಅವಿವೇಕಿಯು ತನ್ನ ಕೈಯನ್ನು ಸುಟ್ಟುಕೊಳ್ಳಬಹುದು". ದಡ್ಡರಾದವರು ಬರಿ ಹಣ, ಅಧಿಕಾರ, ಸ್ವಾರ್ಥಿಗಳಾಗಿ ಬದುಕನ್ನು ಸಾಗಿಸುತ್ತಿರುತ್ತಾರೆ

ದಡ್ಡರಿಗೆ ಬದುಕಿರುವಾಗ ಮಾತ್ರ ಬೆಲೆಯಿರುತ್ತದೆ. ಇವರಿಗೆ ಬದುಕಿರುವಾಗಲು ಕಳ್ಳರಿಂದ, ನೆಂಟರಿಂದ, ಸರ್ಕಾರದಿಂದ ಸದಾ ಭಯವು ಇದ್ದೆ ಇರುತ್ತದೆ. ಸತ್ತ ಮೇಲಂತೂ ಇಂಥವರನ್ನು ಸ್ಮರಿಸುವುದು ವಿರಳ. ದಡ್ಡರಾದವರು ವ್ಯಸನಗಳಿಂದ ನಿದ್ರೆಯಿಂದ ಕಾಲ ಹರಣ ಮಾಡುತ್ತಾರೆ. ಆದರೆ ಕವಿಗಳಾದವರಿಗೆ ಬದುಕಿರುವಾಗಲೂ ಗೌರವ, ಸತ್ತಮೇಲೂ ಗೌರವಗಳಿರುತ್ತವೆ. "ಮಾನವನ ಹೃದಯದಲ್ಲಿ ಅಡಗಿರುವ ಒಳ್ಳೆಯದನ್ನು ಹೊಡೆದೆಬ್ಬಿಸಬಲ್ಲವನೇ ಕವಿ".



**ಆರ್. ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

ಕವಿಗಳೆಂದರೆ ಕ್ರಾಂತಿಕಾರಿ ಗಳಾಗಿ, ಮೇಧಾವಿಗಳಾಗಿ, ಪಂಡಿತರಾಗಿ, ರಸಿಕರಾಗಿ, 'ರಸಿಕನಾಡಿದ ಮಾತು ಶಶಿ ಉದಯಿಸಿ ಬಂದಂತೆ' ಎನ್ನುವ ಹಾಗೆ ತಾವು ಸಂತೋಷವಾಗಿದ್ದು ಇತರರನ್ನು ಆನಂದ ಪಡಿಸುತ್ತಾ ರಸಸ್ವಾದಲ್ಲಿ ನಿರಂತರವಾಗಿರುವ ರಂಜನ ಸ್ವಭಾವದವರೇ ಕವಿಗಳು ಇಂಥಹವರ ಮಾತುಗಳನ್ನು ಕೇಳುವುದೇ ಜನಗಳಿಗೆ ಆನಂದ.

ಇಂತಹ ಕವಿಗಳು ಕಾವ್ಯಗಳನ್ನು ಅಧ್ಯಯನ ಮಾಡುವುದರಿಂದ ಇತರರಿಗೂ ಕಾವ್ಯಗಳಲ್ಲಿ ಅಭಿರುಚಿಯು ಉಂಟಾಗುತ್ತದೆ. 'ಕವಿತೆಯು ಕವಿ ಹೃದಯದಲ್ಲಿ ಹುಟ್ಟಿ ಇತರರ ಹೃದಯಕ್ಕೆ ನೇರವಾಗಿ ಮುಟ್ಟಿ ಅದನ್ನು ತನ್ನ ತಾನಕ್ಕೆ ಮಿಡಿಯಿಸುವ ಕೂಗು'. ರವಿ ಕಾಣದ್ದನ್ನು ಕವಿ ಕಾಣುತ್ತಾನೆ, ಆದ್ದರಿಂದ ಕವಿಗಳನ್ನು ಸದಾ ಜನಗಳು ನೆನೆಯುತ್ತಾ ಗುಣಗಾನ ಮಾಡುತ್ತಿರುತ್ತಾರೆ. ಕವಿಗಳಿಗೆ ಮರಣವಿರಬಹುದು ಆದರೆ ಅವರ ಕಾವ್ಯಕಲ್ಲ, ಕಾವ್ಯಗಳು ಶಾಶ್ವತ ವ್ಯಕ್ತಿ ಮರೆಯಾಗಬಹುದು ಆದರೆ ಅವರ ಯಶಸ್ಸು ಮಾತ್ರ ಶಾಶ್ವತವಾಗಿರುತ್ತದೆ.

ಕವಿ ಎಮರ್‌ಸನ್ ಹೇಳಿರುವಂತೆ 'ಕವಿಗಳಲ್ಲಿ ಎರಡು ಗುಂಪು, ಶಿಕ್ಷಣದಿಂದ ಅನುಭವದಿಂದ ಕವಿಗಳಾದವರು ಹಾಗೂ ಹುಟ್ಟಿನಿಂದ ಕವಿಗಳಾದವರು ಮೊದಲ ಗುಂಪನ್ನು ಗೌರವಿಸುತ್ತೇನೆ, ಎರಡನೆಯ ಗುಂಪನ್ನು ಪ್ರೀತಿಸುತ್ತೇವೆ ಎನ್ನುತ್ತಾರೆ'.

ವ್ಯಕ್ತಿ ಪ್ರಜ್ಞಾವಂತನಾಗಲು ಎರಡು ಸಾಧನಗಳಿವೆ. ಒಂದು ವಿದ್ಯೆ, ಇನ್ನೊಂದು ಜ್ಞಾನ, ವಿದ್ಯೆಗೆ ತಾನು ಎಲ್ಲವನ್ನು ತಿಳಿದುಕೊಂಡಿದ್ದೇನೆ ಎಂಬ ಅಹಂಕಾರವಿರುತ್ತದೆ. ಆದರೆ ಜ್ಞಾನಕ್ಕೆ ತನಗೆ ಏನೂ ತಿಳಿದಿಲ್ಲ ಎಂಬ ವಿನಯವಿರುತ್ತದೆ. ವಿದ್ಯಾವಂತನಾಗುವುದು ದೊಡ್ಡದಲ್ಲ, ಜ್ಞಾನಿಯಾಗಬೇಕು ಅಂತಹ ಜ್ಞಾನಿಯೇ ಕವಿ.

**"ಆದ್ದರಿಂದ ಮಾನವನು ರಸಕವಿಯಾಗಿ ಪ್ರಜ್ಞಾವಂತನಾಗಿ ಸಮಾಜದಲ್ಲಿ ಬಾಳಬೇಕು"**

# ನೊಳಂಬ ಪರಂಪರೆಯ ಬಹುಮುಖಿ ಗಮ್ಯಸ್ಥಾನ ಆವನಿ

ಹಿಂದಿನ ಸಂಚಿಕೆಯಿಂದ.....

ನವರಂಗದ ಭಾವಣಿ ಮಧ್ಯೆ ಅಂಕಣದಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರಿಯಲ್ಪಟ್ಟ ಶಿವಪಾರ್ವತಿಯರ ಶಿಲ್ಪವಿದೆ. ನವರಂಗದ ದ್ವಾರಬಾಗಿಲಿನಲ್ಲಿ ಮಣಿಹಾರ, ಕಮಲದ ದಳಗಳು, ಅರೆಗಂಬ, ಲತೆಬಳ್ಳಿಗಳಿಂದ ಅಲಂಕರಿಸಲಾಗಿದೆ. ದ್ವಾರಬಾಗಿಲಿನ ಕೆಳಭಾಗದಲ್ಲಿ ಗಂಗೆ, ಯಮುನೆ, ಮೇಲ್ಭಾಗದಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ.

**ಅಂಜನೇಶ್ವರ ದೇವಾಲಯ :** ಶತ್ರುಘ್ನೇಶ್ವರ ದೇವಾಲಯದ ವಾಸ್ತು ರಚನೆಯನ್ನು ಹೊಂದಿದೆ. ಅಧಿಷ್ಠಾನದ ಎರಡೂ ಕಡೆ ಸಿಂಹಗಳ ಸಾಲು, ಯಾಳಿಗಳು, ಬಿಗಿಯುತ್ತಿರುವ ಜಿಂಕೆಗಳನ್ನು ಕೆತ್ತಿದ್ದಾರೆ. ಗರ್ಭಗೃಹ ಮತ್ತು ನವರಂಗ ಮಾತ್ರ ಇವೆ. ಮೂತ ಜಾಲಾಂದ್ರಗಳು ನಾಶವಾಗಿವೆ, ದೇವಾಲಯ ದುರಸ್ತಿಯಾಗಿದೆ. ಗರ್ಭಗೃಹದ ಮೇಲೆ ನೊಳಂಬ ಶೈಲಿಯ ಶಿಖರವಿದೆ.

**ಭರತೇಶ್ವರ ದೇವಾಲಯ :** ಅಧಿಷ್ಠಾನ ಲಕ್ಷ್ಮಣೇಶ್ವರ ದೇವಾಲಯದ ಮಾದರಿಯಲ್ಲಿದೆ. ಆದರೆ ನೊಳಂಬ ಅರಸ 2ನೇ ಪೊಳಲ್ಚೋರನ ಪತ್ನಿ ದೇವಬ್ಬರಸಿಯ ಶಾಸನವಿದೆ. ಕೆಳಭಾಗದಲ್ಲಿ ಶಾಸನವಿದ್ದು ಅದರ ಮೇಲೆ ಸಿಂಹ, ಗಜ, ವೃಷಭ, ಯಾಳಿಗಳ ಸಾಲುಗಳನ್ನು ಕೆತ್ತಲಾಗಿದೆ. ಕೈಪಿಡಿ ಗೋಡೆ ಮತ್ತು ವಿಮಾನ ಗೋಪುರವನ್ನು ದುರಸ್ತಿಯಿಂದ ಇತ್ತೀಚೆಗೆ ನಿರ್ಮಿಸಲಾಗಿದೆ. ನವರಂಗದ ಕಂಬಗಳು ಚೌಕಾಕಾರದ ತಳಭಾಗ ಮತ್ತು ಮೇಲ್ಭಾಗಕ್ಕೆ 8, 16, 32 ಹೀಗೆ ವಿವಿಧ ಮುಖಗಳನ್ನು ಹೊಂದಿದೆ. ಕಂಬದಲ್ಲಿ ಹೂವಿನ ಹಾರಗಳು, ನರ್ತಿಸುತ್ತಿರುವ ಸ್ತ್ರೀ ಪುರುಷರ ವಿಗ್ರಹಗಳಿವೆ. ನವರಂಗದ ಭಾವಣಿಯಲ್ಲಿ ಅಷ್ಟದಿಕ್ಪಾಲಕರನ್ನೊಳಗೊಂಡ ಶಿವಪಾರ್ವತಿಯರ ಉಬ್ಬುಶಿಲ್ಪಗಳಿವೆ. ಮೂಲ ಜಾಲಾಂದ್ರಗಳು ಇಂದು ನಾಶವಾಗಿವೆ. ಗರ್ಭಗೃಹದಲ್ಲಿ ಭರತೇಶ್ವರ ಲಿಂಗವಿದೆ. ಮುಖಮಂಟಪದಲ್ಲಿ 4 ಕಂಬಗಳಿವೆ. ಮುಖಮಂಟಪದಲ್ಲಿ ನಂದಿಯ ವಿಗ್ರಹವನ್ನು ಕಾಣಬಹುದು.

**ಸುಗ್ರೀವೇಶ್ವರ ದೇವಾಲಯ :** ಪ್ರವೇಶ ದ್ವಾರಗಳು ಅಲಂಕೃತವಾಗಿವೆ. ಈ ದೇವಾಲಯದ ಎದುರಿಗೆ ನೊಳಂಬರ ಕಾಲದ 35 ಅಡಿ ಎತ್ತರ, 22 ಅಡಿ ಸುತ್ತಳತೆಯ ಮಾನಸ್ತಂಭವನ್ನು 16 ಕೋನದಲ್ಲಿ ಕೆತ್ತಿ ನಿರ್ಮಿಸಲಾಗಿದೆ. ನನ್ನಿ ನೊಳಂಬ ಪೆರ್ಗಡೆ ಬಸವಯ್ಯ ನಿಲ್ಲಿಸಿದ ಮಾನಸ್ತಂಭವಾಗಿದೆ. ಬೋದಿಗೆ ಅಬಾಕಸಾ ಮುಂತಾದವುಗಳನ್ನು ಹೊಂದಿದೆ. ಬಸವಯ್ಯನ ಶಾಸನ ಕೊರೆಯಲಾಗಿದೆ.

**ವಾಲ್ಮೀಕಿ ಗವಿ :** ಇಲ್ಲಿನ ಮಣ್ಣಿನಲ್ಲಿ ವೈದ್ಯಕೀಯ ಗುಣವಿದೆ. ಇಲ್ಲಿರುವ ಉರುಳು ಬಂಡೆಯ ಕೆಳಗೆ ಹೊಟ್ಟೆ ನೋವು, ಬೆನ್ನು ನೋವಿದ್ದವರು ಉರುಳಾಡಿದರೆ ನೋವು ಗುಣವಾಗುತ್ತದೆ ಎಂಬ ನಂಬಿಕೆ ಇದೆ. ಈ ದೇವಾಲಯಗಳ ಒಕ್ಕೂಟವು ಒಳಪ್ರಾಕಾರ ವನ್ನು ಹೊಂದಿದೆ. ವಾಯುವ್ಯ ಭಾಗದಲ್ಲಿ ಕಾಮಾಕ್ಷಮ್ಮನವರ ದೇವಾಲಯವಿದೆ. ಈ ದೇವಾಲಯದ ಮುಭಾಗದಲ್ಲಿ ಕಲ್ಯಾಣಮಂಟಪ ಹಾಗೂ ವಸಂತ ಮಂಟಪಗಳನ್ನು ವಿಜಯನಗರ ಕಾಲದಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ಸುಬ್ರಹ್ಮಣ್ಯ ದೇವಾಲಯವು ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿದೆ. ಸುಬ್ರಹ್ಮಣ್ಯ ಮೂರ್ತಿ ನವಿಲಿನ ಮೇಲೆಮ ಆಸನಾರೂಢವಾಗಿದೆ. ಶೇಷತೀರ್ಥದ ಸಮೀಪದಲ್ಲಿ ದುರ್ಗಾ ದೇವಾಲಯವಿದೆ.

**ಅದ್ವೈತ ಕ್ಷೇತ್ರವಾಗಿ ಆವನಿ:** ಮೂಲ ಶಂಕರಾಚಾರ್ಯರು ಅದ್ವೈತ ತತ್ವ ಪ್ರಚಾರಕ್ಕಾಗಿ ದೇಶದಾದ್ಯಂತ ಸಂಚರಿಸಿ 4 ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿದರಲ್ಲದೆ ಆವನಿಯ ಆಧ್ಯಾತ್ಮಿಕ ಪರಂಪರೆಯ ಮಹತ್ವವನ್ನರಿತು ಕ್ರಿ.ಶ. 800ರ ಸುಮಾರಿನಲ್ಲಿ ಇಲ್ಲಿಗೆ ಭೇಟಿನೀಡಿ ಶಾರದಾಪೀಠವನ್ನು ಸ್ಥಾಪಿಸಿದರು. ಅದ್ವೈತತತ್ವ ಪ್ರಚಾರ ಕೇಂದ್ರವಾಗಿ ಆವನಿ ಬೆಟ್ಟದ ಬುಡದಲ್ಲಿ ಆಶ್ರಮವನ್ನು ನಿರ್ಮಿಸಿದರು. ಈ ಪರಂಪರೆ ಇಂದಿಗೂ ಮುಂದುವರಿದಿದೆ. ಚಿಕ್ಕಗುಡ್ಡದ ಮೇಲ್ಭಾಗದಲ್ಲಿ ಅಷ್ಟಕೋನಾಕಾರದ ವಿಶಾಲಮಂಟಪವಿದೆ. ಪೂರ್ವಾಭಿಮುಖವಾಗಿ ಆದಿಶಂಕರಾಚಾರ್ಯರ ಮತ್ತು ಶಾರದಾದೇವಿಯ ಗುಡಿಗಳನ್ನು ನಿರ್ಮಿಸಿದ್ದಾರೆ.

**ನಿಸರ್ಗ ಸೊಬಗಿನ ಕೇಂದ್ರವಾಗಿ ಆವನಿ:** ಬೆಟ್ಟದ ಮೇಲೆ ನಿಂತು ವೀಕ್ಷಿಸುವ ನಿಸರ್ಗ ಪ್ರೇಮಿಗಳಿಗೆ ವಿಹಂಗಮ ನೋಟವು ಮನಸ್ಸನ್ನು ಸೂರೆಗೊಳ್ಳುತ್ತದೆ. ಗಿಡ, ಮರ, ಬಂಡೆ, ಗ್ರಾಮಗಳ ಪಕ್ಷಿನೋಟವನ್ನು ಹಾಗೂ ಹಿಂಭಾಗದಲ್ಲಿ ಕಾಣುವ ಬೆಟ್ಟಗಳು ಮನೋಲ್ಲಾಸ ನೀಡುತ್ತವೆ. ಪರಂಪರೆ ಮತ್ತು ಬಹುಮುಖಿ ಪ್ರವಾಸೋದ್ಯಮ ಕೇಂದ್ರವಾದ ಆವನಿಯು ವಿಭಿನ್ನ ಅಭಿರುಚಿಯುಳ್ಳ ಕಲಾಸಕ್ತರಿಗೆ ಶಿಕ್ಷಣ, ಆಧ್ಯಾತ್ಮಿಕತೆ, ಕಲೆ, ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಅಂಶಗಳನ್ನು ಅರ್ಥಪೂರ್ಣವಾಗಿ ತಿಳಿಯಲು ಸಹಾಯಕವಾಗಿವೆ.

– **ಮಲ್ಲೇಶಪ್ಪ ಟಿ.ಎಸ್.**, ತಮ್ಮಡಿಹಳ್ಳಿ. 8050074810



# ಶ್ರೀ ವಿ.ಉಮೇಶ್, ನಿವೃತ್ತ ಐ.ಎ.ಎಸ್. ಅಧಿಕಾರಿ : ಪರಿಚಯ

ನಿವೃತ್ತ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ವಿ.ಉಮೇಶ್ ಇವರ ಪರಿಚಯ ನಿಮಗೆಲ್ಲ ಗೊತ್ತಿದೆ. ಆದರೂ ಅವರ ನಿವೃತ್ತಿಯ ನಂತರ ನಮ್ಮ ಸಮಾಜದ ವತಿಯಿಂದ ಹಾಗೂ ಸಂಘದ ವತಿಯಿಂದ ಅವರನ್ನು ಸನ್ಮಾನಿತರಾದ ಅವರು ಬೆಳೆದುಬಂದ ಬಗೆ, ಅವರ ಸಾಧನೆ ಮತ್ತು ಸಮಾಜ ಹಾಗೂ ನಾಡಿಗೆ ಅವರು ಸಲ್ಲಿಸುತ್ತಿರುವ ಸೇವೆ ಸ್ಮರಿಸುವುದು ನಮ್ಮ ಕರ್ತವ್ಯವೆಂದು ಭಾವಿಸಿದ್ದೇನೆ. ಹಾಗೂ ಅವರ ಪರಿಚಯುವನ್ನು ಮಾಡಿಕೊಡುವ ಉದ್ದೇಶವಾಗಿದೆ. ಶ್ರೀ ಉಮೇಶ್‌ರವರು ಶ್ರೀವಿಶ್ವನಾಥಯ್ಯ ಹಾಗೂ ಶ್ರೀಮತಿ ಸರ್ವಮಂಗಳರವರ ಮಗನಾಗಿ 1956ರಲ್ಲಿ ಜನಿಸಿದರು. ನಂತರ ಅವರ ಶಿಕ್ಷಣವನ್ನು ಬೆಂಗಳೂರಿನ ಸ್ಥಳದಲ್ಲಿ ಮುಗಿಸಿದರು. ಇವರು ದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರು ವಿವಿಯಲ್ಲಿ "ಸೋಷಿಯಲ್ ಸಿಸ್ಟಮ್ಸ್"ನಲ್ಲಿ ಸ್ನಾತಕೋತ್ತರ ಪದವಿಯನ್ನು 1980ರಲ್ಲಿ ಪಡೆದಿದ್ದಾರೆ. ಅದಕ್ಕಿಂತ ಮೊದಲು 1978ರಲ್ಲಿ ಬೆಂಗಳೂರು ವಿವಿಯಲ್ಲಿ ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಶಾಲಾ ಕಾಲೇಜು ದಿನಗಳಲ್ಲಿ ಕ್ರೀಡಾಸಕ್ತಿಯನ್ನು ಹೊಂದಿದ್ದು ಹಲವಾರು ಕ್ರೀಡೆಗಳಲ್ಲಿ ಭಾಗವಹಿಸಿರುತ್ತಾರೆ. ಗಾಲ್ಫ್ ಅವರ ನೆಚ್ಚಿನ ಕ್ರೀಡೆಯಾಗಿದ್ದು, ರಾಜ್ಯ ಮತ್ತು ಅಂತರರಾಜ್ಯ ಮಟ್ಟದ ಗಾಲ್ಫ್ ಟೂರ್ನಮೆಂಟ್‌ನಲ್ಲಿ ಭಾಗವಹಿಸಿರುತ್ತಾರೆ. ಇವರು ಶ್ರೀಮತಿ ಶರ್ಮಿಳಾರವರನ್ನು ವಿವಾಹವಾಗಿದ್ದು, 3 ಮಕ್ಕಳನ್ನು ಪಡೆದಿರುತ್ತಾರೆ.

1981ನೇ ಬ್ಯಾಚ್‌ನಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ಭಾರತೀಯ ಆಡಳಿತ ಸೇವೆಗೆ ಆಯ್ಕೆಯಾದ ಶ್ರೀಯುತರು ಮೈಸೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುವಾಗ ಅವರು ಜನಸಾಮಾನ್ಯರ ಬಗೆಗೆ ಹೊಂದಿದ್ದ ಕಾಳಜಿ ಹಾಗೂ ಅವರ ಜನಸ್ನೇಹಿ ಆಡಳಿತದ ಕಾರಣದಿಂದ ಆ ಜಿಲ್ಲೆಗಳಲ್ಲಿನ ಜನರು ಶ್ರೀಯುತರನ್ನು ಇಂದಿಗೂ ನೆನೆಯುತ್ತಾರೆ ಎಂಬುದು ಹೆಮ್ಮೆಯ ಸಂಗತಿ. ಇವರು ಕೃಷಿ ಇಲಾಖೆ, ಕೃಷಿ ಮಾರುಕಟ್ಟೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಕೆಲಸ ಮಾಡುವಾಗ ಸಂಬಂಧಿಸಿದ ಇಲಾಖಾ ಸಚಿವರು ಹಾಗೂ ಅಧಿಕಾರಿಗಳ ನಿಯೋಗವನ್ನು ನ್ಯೂಜಿಲ್ಯಾಂಡ್, ಜಿಂಬಾಬ್ವೆ, ಥೈಲ್ಯಾಂಡ್, ಇಸ್ರೇಲ್, ಯು.ಎಸ್.ಎ. ಮೊದಲಾದ ದೇಶಗಳಿಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲದೆ 2001ರಲ್ಲಿ ಅಮೇರಿಕಾದ ಡೆಟ್ರಾಯಿಟ್‌ನಲ್ಲಿ ಹಾಗೂ 2004ರಲ್ಲಿ ಫ್ಲೋರಿಡಾದಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ರಾಜ್ಯದ ಪರವಾಗಿ ಭಾಗವಹಿಸಿರುತ್ತಾರೆ. ಹಿರಿಯ ಅಧಿಕಾರಿಯಾಗಿ ರಾಜ್ಯಸರ್ಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಅಪಾರವಾದ ಅನುಭವ ಗಳಿಸಿರುತ್ತಾರೆ. ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರಾಗಿ, ರೇಷ್ಮೆ ಇಲಾಖಾ ಆಯುಕ್ತರಾಗಿ, ಕೆ.ಎಸ್.ಎಫ್.ಸಿ.ಯ ಅಧ್ಯಕ್ಷರು ಹಾಗೂ ಎಂ.ಡಿ. ಆಗಿ ಸೇವೆ ಸಲ್ಲಿಸಿರುತ್ತಾರೆ. ಅರಣ್ಯ ಮತ್ತು ಪರಿಸರ ಇಲಾಖೆಯ ಕಾರ್ಯದರ್ಶಿಯಾಗಿ, ಎಂ.ಎಸ್.ಕೆ. ಅಧ್ಯಕ್ಷರು ಹಾಗೂ ಎಂ.ಡಿ. ಆಗಿ, ಎ.ಪಿ.ಎಂ.ಸಿ. ಹಾಗೂ ತೋಟಗಾರಿಕೆ ಇಲಾಖೆ ಆಯುಕ್ತರಾಗಿ, ಕೆ.ಎಂ.ಎಫ್.ನ ಎಂ.ಡಿ. ಆಗಿ ಹೀಗೆ ವಿವಿಧ ಹುದ್ದೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. 2008-2009ರಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಇವರು ನಂತರ ಕ್ರಮವಾಗಿ ಸಹಕಾರ ಇಲಾಖೆ, ವೈದ್ಯಕೀಯ ಶಿಕ್ಷಣ ಹಾಗೂ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ.

2012-13ರಲ್ಲಿ ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿ ಪದೋನ್ನತಿ ಹೊಂದಿ ಗೃಹ ಇಲಾಖೆಯಲ್ಲಿ, ನಂತರ ಅಭಿವೃದ್ಧಿ ಆಯುಕ್ತರಾಗಿ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯಂತಹ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿ, 2016 ಮೇ ತಿಂಗಳಲ್ಲಿ ನಿವೃತ್ತಿ ಹೊಂದಿರುತ್ತಾರೆ. ಶ್ರೀ ವಿ.ಉಮೇಶ್‌ರವರ ಕಿರುಪರಿಚಯ. ಇವರನ್ನು ಪರಿಚಯಿಸುವುದೆಂದರೆ ಬಹಳ ಕಷ್ಟದ ಕೆಲಸ. ಅವರ ವ್ಯಕ್ತಿತ್ವ, ನಾಡು, ನುಡಿ ಹಾಗೂ ಇಲ್ಲಿನ ಜನರ ಬಗೆಗೆ ಹೊಂದಿದ್ದ ಕಳಕಳಿಯ ಕಾರಣಕ್ಕೆ ಇವರು ನಾಡಿನೆಲ್ಲೆಡೆ ಜನಪ್ರಿಯರಾಗಿದ್ದಾರೆ. ಜನಸಾಮಾನ್ಯರಷ್ಟೇ ಅಲ್ಲದೆ ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಪ್ರೀತಿಪಾತ್ರರಾಗಿರುವರು. ಇವರು ನಮ್ಮ ಸಮಾಜಕ್ಕೆ ಮಾಡಿದ ಸೇವೆ ಅಪ್ರತಿಮವಾದದ್ದು. ಅದಕ್ಕೆ ಸರಿಸಾಟಿಯಾಗಿ ಬೇರೆ ಯಾರೂ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಉನ್ನತ ಹುದ್ದೆಯಲ್ಲಿದ್ದರೂ ಸಹ ಸರಳತೆ ಮತ್ತು ಅವರು ಹೊಂದಿದ್ದ ಮಾನವೀಯ ಮೌಲ್ಯಗಳ ಕಾರಣಗಳಿಂದ ನಮ್ಮ ಹೃದಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದಾರೆ. ಸಮಾಜದ ಯುವಕರ ಪ್ರೇರಣಾಶಕ್ತಿಯಾಗಿ ಸದಾ ಹಸನ್ಮುಖಿಗಳಾಗಿ ಇರುವ ಶ್ರೀ ವಿ.ಉಮೇಶ್‌ರವರಿಗೆ ಪ್ರತಿಫಲಾಪೇಕ್ಷೆಯಿಲ್ಲದೆ ತಮ್ಮ ವ್ಯಾಪ್ತಿಯಲ್ಲಿ ಅವರು ಇದುವರೆಗೂ ನಾಡಿಗೆ ಮತ್ತು ಸಮಾಜಕ್ಕೆ ಸಲ್ಲಿಸಿರುವ ಸೇವೆ ಸ್ಮರಣೀಯವಾದದ್ದು. ಸಾವಿರಾರು ಕುಟುಂಬಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾಗಿದ್ದಾರೆ. ಅವರಿಗೆ ಇಂದು ನೊಳಂಬ ವೀರಶೈವ ಸಂಘದ ಪರವಾಗಿ ಹಾಗೂ ನಿಮ್ಮೆಲ್ಲರ ಪರವಾಗಿ ಗೌರವಾರ್ಪಣೆಯನ್ನು ನೆರವೇರಿಸುತ್ತಿದ್ದೇನೆ. ಅಖಿಲ ಭಾರತ ಲಿಂಗಾಯತ ಮಹಾಸಭಾದವರು ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡಲು ಸಿದ್ಧರಾಮಯ್ಯನವರಿಗೆ ಒತ್ತಡ ತಂದಿದ್ದರು, ಆದರೆ ಅದು ಸಾಧ್ಯವಾಗಲಿಲ್ಲ. **– ಸಂಪಾದಕರು**

# ಐ.ಎ.ಎಸ್. ಪರೀಕ್ಷೆಯನ್ನು ಎದುರಿಸುವುದು ಹೇಗೆ ?

ಸ್ನೇಹಿತರೆ ನಾವು ಇವತ್ತು ಐಎಎಸ್ ಪರೀಕ್ಷೆಯನ್ನ ಹೇಗೆ ಯಶಸ್ವಿಯಾಗಿ ಎದುರಿಸಿ ತೇರ್ಗಡೆಯಾಗಬಹುದು ಎಂದು ತಿಳಿಯೋಣ. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (UPSC) ಭಾರತದ ಅತ್ಯಂತ ಪ್ರತಿಷ್ಠಿತ ಪರೀಕ್ಷೆಗಳಲ್ಲಿ ಒಂದಾಗಿದೆ. ನಾಗರಿಕ ಸೇವಕರಾಗಿ ರಾಷ್ಟ್ರಕ್ಕೆ ಸೇವೆ ಸಲ್ಲಿಸುವ ಕನಸು ಕಾಣುವ ಸಾವಿರಾರು ಆಕಾಂಕ್ಷಿಗಳನ್ನು ಇದು ಪ್ರತಿವರ್ಷ ಆಕರ್ಷಿಸುತ್ತದೆ. ಅನೇಕ ಅಭ್ಯರ್ಥಿಗಳು ತಮ್ಮ ಪದವಿಯನ್ನು ಪೂರ್ಣಗೊಳಿಸಿದ ನಂತರ ತಮ್ಮ UPSC ಪ್ರಯಾಣವನ್ನು ಪ್ರಾರಂಭಿಸಿದರೆ, 12ನೇ ತರಗತಿಯ ನಂತರ ವಿದ್ಯಾರ್ಥಿಗಳು ತಮ್ಮ ತಯಾರಿಯುನ್ನು ಪ್ರಾರಂಭಿಸುವ ಪ್ರವೃತ್ತಿ ಹೆಚ್ಚುತ್ತಿದೆ. ನಾವು ಇಂದಿನ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಅಂತರ್ಜಾಲದ ಮಾಯ ಕಿಟಕಿಯ ಮೂಲಕ ಎಲ್ಲವನ್ನು ತಿಳಿಯುವ ಅದ್ಭುತ ಅವಕಾಶವಿದೆ.

ಇದಕ್ಕಾಗಿ ತಾವು ಯುಪಿಎಸ್ಸಿ ಪರೀಕ್ಷೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಮೊದಲನೇ ಕೆಲಸ.

1. ಯುಪಿಎಸ್ಸಿ ಪಠ್ಯಕ್ರಮವನ್ನ ಅರ್ಥಮಾಡಿಕೊಳ್ಳುವುದು
2. ಮಾರ್ಗದರ್ಶನ ಪಡೆಯಲು/ಕೋಚಿಂಗ್ ಕೇಂದ್ರವನ್ನು ಸೇರಲು ಮಾಹಿತಿ ಸಂಗ್ರಹಿಸುವುದು
3. ಅಧ್ಯಯನ ಯೋಜನೆಯನ್ನು ರೂಪಿಸಿ, ಅದಕ್ಕೆ ಸಂಬಂಧಪಟ್ಟ ಅಧ್ಯಯನ ಪುಸ್ತಕಗಳನ್ನು ಸಂಗ್ರಹಿಸುವುದು
4. ಸಮಯದ ನಿರ್ವಹಣೆ ಮತ್ತು ಶಿಸ್ತುಬದ್ಧಜವಾಬ್ದಾರಿಯ ಬದ್ಧತೆಯನ್ನು ರೂಡಿಸಿಕೊಳ್ಳುವುದು
5. ಪರೀಕ್ಷಾ ಸರಣಿ ಮತ್ತು ಅದರ ಪರೀಕ್ಷಣೆಯನ್ನ ಮಾಡಿ ಅರ್ಥ ಮಾಡಿಕೊಳ್ಳುವುದು UPSC ಅನ್ನು ಅರ್ಥ ಮಾಡಿಕೊಳ್ಳುವುದು ತಯಾರಿ ಪ್ರಕ್ರಿಯೆಯಲ್ಲಿ ತೊಡಗುವ ಮೊದಲು, ಪರೀಕ್ಷೆಯ ಬೇಡಿಕೆಗಳನ್ನು ಸಹ ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.

UPSC ನಾಗರಿಕ ಸೇವೆಗಳ ಪರೀಕ್ಷೆ (CSE) ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್), ಮುಖ್ಯ ಪರೀಕ್ಷೆ (ಮುಖ್ಯ ಪರೀಕ್ಷೆ) ಮತ್ತು ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ಒಳಗೊಂಡಿರುವ ಮೂರು ಹಂತದ ಪರೀಕ್ಷೆಯಾಗಿದೆ. ಭಾರತೀಯ ಆಡಳಿತ ಸೇವೆ (IAS), ಭಾರತೀಯ ಪೊಲೀಸ್ ಸೇವೆ (IPS) ಮತ್ತು ಭಾರತೀಯ ವಿದೇಶಾಂಗ ಸೇವೆ (IFS) ನಂತಹ ಪ್ರತಿಷ್ಠಿತ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಈ ಪರೀಕ್ಷೆಯು ಬೇಡುವ ಪಠ್ಯಕ್ರಮದ ವಿಶಾಲತೆ, ಹಾಗೂ ಅದನ್ನು ನೋಡುವ ಕಲಿಯುವ ವಿಭಿನ್ನತೆಯನ್ನು ಗುರುತಿಸುವ ಸೂಕ್ಷ್ಮತೆ ನಿಮಗಿರಬೇಕು. ಈ ಪರೀಕ್ಷೆಯು ಕಠಿಣ ಪರಿಶ್ರಮ, ನಿರಂತರ ಪರಿಶ್ರಮದ ಅಗತ್ಯವಿರುತ್ತದೆ. 12ನೇ ತರಗತಿಯ ನಂತರ UPSC IAS ಪರೀಕ್ಷೆಗೆ ಹೇಗೆ ತಯಾರಿ ನಡೆಸುವುದು. 12ನೇ ನಂತರ UPSC CSE ಗೆ ತಯಾರಾಗಲು, ಅಭ್ಯರ್ಥಿಗಳು ಈ ಅಂಶಗಳನ್ನು ಪರಿಗಣಿಸಬೇಕು. ಇದರ ಮೊದಲ ಹಂತವೆಂದರೆ, ಪದವಿಯ ಐಚ್ಛಿಕ ವಿಷಯಗಳ ಕಡೆ ಗಮನಹರಿಸುವುದು. ತಮಗೆ ಇಷ್ಟ ಇರುವ ವಿಷಯಗಳ ಆಯ್ಕೆ ಜೊತೆಗೆ, ಈ ಪರೀಕ್ಷೆಗೆ ಸೂಕ್ತವೆನಿಸುವ ವಿಷಯಗಳನ್ನು ಅಧ್ಯಯನ ಮಾಡಲು ಸಾಧ್ಯವೇ ಎಂದು ಯೋಚಿಸುವುದು ಸಹ ಮುಖ್ಯವೆನಿಸುತ್ತದೆ.

**UPSC ಆಕಾಂಕ್ಷಿಗಳು ಆಯ್ಕೆ ಮಾಡುವ ಸಾಮಾನ್ಯ :**

* **ಮಾನವಿಕ ಮತ್ತು ಕಲೆ :** ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಭೂಗೋಳದಂತಹ ವಿಷಯಗಳು UPSC ಪಠ್ಯಕ್ರಮಕ್ಕೆ ಬಲವಾದ ಅಡಿಪಾಯವನ್ನು ಒದಗಿಸುತ್ತವೆ.
* **ವಾಣಿಜ್ಯ :** ವಾಣಿಜ್ಯ ಪದವೀಧರರು UPSC ಪಠ್ಯಕ್ರಮದೊಂದಿಗೆ ಉತ್ತಮ ಅತಿಕ್ರಮಣವನ್ನು ಹೊಂದಿರುವುದರಿಂದ ಅರ್ಥಶಾಸ್ತ್ರ ಅಥವಾ ಸಾರ್ವಜನಿಕ ಆಡಳಿತದಂತಹ ವಿಷಯಗಳನ್ನು ಆಯ್ಕೆ ಮಾಡಬಹುದು.

**UPSC ಪಠ್ಯಕ್ರಮವನ್ನ ಅರ್ಥ ಮಾಡಿಕೊಳ್ಳುವುದು** : ಒಮ್ಮೆ ನೀವು ಪದವಿಯ ಐಚ್ಛಿಕ ವಿಷಯಗಳನ್ನು ಆಯ್ಕೆಮಾಡಿದ ನಂತರ ಮುಂದಿನ ಹಂತವು ಯುಪಿಎಸ್ಸಿ ಪಠ್ಯಕ್ರಮದೊಂದಿಗೆ ನಿಮ್ಮ ಪರಿಚಯವನ್ನ ಮಾಡಿಕೊಳ್ಳುವುದು. ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳ ಪಠ್ಯಕ್ರಮ ವ್ಯಾಪಕ ಶ್ರೇಣಿಯ ವಿಷಯಗಳನ್ನ ಒಳಗೊಂಡಿದೆ. ಸಾಮಾನ್ಯ ಅಧ್ಯಯನಗಳು ( ಪ್ರಿಲಿಮ್ಸ್ ಮತ್ತು ಮೇನ್ಸ್ ); ಇದು ಇತಿಹಾಸ, ಭೂಗೋಳ, ಭಾರತೀಯ ರಾಜಕೀಯ, ಅರ್ಥಶಾಸ್ತ್ರ, ಪರಿಸರ, ವಿಜ್ಞಾನ ಮತ್ತು



**ಪ್ರಸಾದ್ ಎಂ.ಎನ್.**
#751, 10ನೇ ಮುಖ್ಯರಸ್ತೆ, 3ನೇ ಹಂತ,
3ನೇ ವಿಭಾಗ, ಬಸವೇಶ್ವರನಗರ,
ಬೆಂಗಳೂರು-79.
ಮೊ : 9845983757

ತಂತ್ರಜ್ಞಾನ, ಹಾಗೂ ಪ್ರಚಲಿತ ವಿದ್ಯಮಾನಗಳಂತಹ ವಿಷಯಗಳನ್ನು ಒಳಗೊಂಡಿದೆ.

**ಐಚ್ಛಿಕ ವಿಷಯಗಳು (ಮುಖ್ಯ ಪರೀಕ್ಷೆ)** : ನೀವು ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯವನ್ನು ಆಯ್ಕೆ ಮಾಡಬೇಕಾಗುತ್ತದೆ. ನೀವು ನಿಮಗೆ ಆರಾಮದಾಯಕ ಮತ್ತು ಪ್ರಾಮಾಣಿಕವಾಗಿ ಆಸಕ್ತಿ ಹೊಂದಿರುವಂತಹ ವಿಷಯವನ್ನು ಆಯ್ಕೆ ಮಾಡಿಕೊಳ್ಳಿ.

**ಪ್ರಬಂಧ ಪೇಪರ್ (ಮುಖ್ಯ ಪರೀಕ್ಷೆ)** : ನಿಮ್ಮ ಬರವಣಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸಿ ಮತ್ತು ವಿವಿಧ ವಿಷಯಗಳ ಮೇಲೆ ಪ್ರಬಂಧ ಬರವಣಿಗೆಯನ್ನ ಅಭ್ಯಾಸ ಮಾಡಿ.

**ಮಾರ್ಗದರ್ಶನ ಪಡೆಯಲು/ ಕೋಚಿಂಗ್ ಇನ್ಸ್‌ಟಿಟ್ಯೂಟ್‌ಗೆ ಸೇರಲು** : ಯುಪಿಎಸ್ಸಿಯ ಈ ಪ್ರಯಾಣವು ಹಲವಾರು ಏರಿಳಿತಗಳನ್ನು ಹೊಂದಿದೆ. ಈ ಪರಿಸ್ಥಿತಿಯಲ್ಲಿ ಸರಿಯಾದ ಮಾರ್ಗದರ್ಶನವೂ ಯಶಸ್ವಿಗೆ ಇನ್ನೂ ಒಂದು ಹೆಜ್ಜೆ ಹತ್ತಿರವಾದಂತೆ.

ಪರೀಕ್ಷೆಯ ಸಂಕೀರ್ಣ ರಚನೆ ಮತ್ತು ವಿಶಾಲವಾದ ಪಠ್ಯಕ್ರಮದ ಕಾರಣ, ಈ ಪ್ರಯಾಣದಲ್ಲಿ ಆತಂಕಕ್ಕೆ ಒಳಗಾಗುವುದು ಸಹಜ. ಈ ಸಂದರ್ಭದಲ್ಲಿ ಹೆಸರಾಂತ ಕೋಚಿಂಗ್ ಸಂಸ್ಥೆಯು ನಿಮಗೆ ಸಹಾಯ ಮಾಡಬಹುದು. ತಯಾರಿ ಕಾರ್ಯತಂತ್ರದೊಂದಿಗೆ ಮಾತ್ರವಲ್ಲದೆ ಒಬ್ಬ ಯೋಗ್ಯ ಮಾರ್ಗದರ್ಶಕರು ನಿಮಗೆ ಪರಿಣಾಮಕಾರಿ. ಮಾರ್ಗದರ್ಶನ, ಉತ್ತಮ ತಂತ್ರಗಳು, ಉತ್ತಮ ಸಂಪನ್ಮೂಲಗಳು, ಇತ್ಯಾದಿಗಳನ್ನು ಒದಗಿಸಬಹುದು. ಮಾರುಕಟ್ಟೆಯಲ್ಲಿ ಸಾಕಷ್ಟು ಆಯ್ಕೆಗಳಿವೆ. ಆದರೆ ನಿಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಸೂಕ್ತವಾದದ್ದನ್ನು ಕಂಡುಹಿಡಿಯುವುದು ಮುಖ್ಯವಾಗಿದೆ.

**ಅಧ್ಯಯನ ಯೋಜನೆಯನ್ನು ರಚಿಸಿ:** ಯುಪಿಎಸ್ಸಿ ತಯಾರಿಗಾಗಿ ಉತ್ತಮ ರಚನಾತ್ಮಕ ಅಧ್ಯಯನ ಯೋಜನೆಯನ್ನು ರಚಿಸುವುದು ಬಹಳ ಮುಖ್ಯ. ಪರಿಣಾಮಕಾರಿ ಅಧ್ಯಯನ ಯೋಜನೆಯನ್ನು ನಿರ್ಮಿಸಲು ಕೆಲವು ಸರಳ ಹಂತಗಳು ಇಲ್ಲಿವೆ.

**ಗುರಿಗಳನ್ನು ಹೊಂದಿಸಿ** : ನಿಮ್ಮ ದೀರ್ಘಕಾಲೀನ ಮತ್ತು ಅಲ್ಪಾವಧಿಯ ಗುರಿಗಳನ್ನು ವಿವರಿಸಿ. ಪರೀಕ್ಷೆಯ ಮಾದರಿ ಮತ್ತು ತಯಾರಿಗಾಗಿ ನೀವು ಹೊಂದಿರುವ ಸಮಯವನ್ನು ಅರ್ಥಮಾಡಿಕೊಳ್ಳಿ.

**ವಿಷಯವಾರು ವಿಭಜನೆ** :ನಿಮ್ಮ ಪಠ್ಯಕ್ರಮವನ್ನು ವಿಷಯಗಳಾಗಿ ವಿಂಗಡಿಸಿ ಮತ್ತು ಪ್ರತಿಯೊಂದು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿ.

**ದೈನಂದಿನ ದಿನಚರಿ** :ದಿನಪತ್ರಿಕೆಗಳನ್ನು ಓದುವುದು, ಅಧ್ಯಯನ ಮಾಡುವುದು ಮತ್ತು ಪರೀಕ್ಷರಣಗಳನ್ನು ಒಳಗೊಂಡಿರುವ ದೈನಂದಿನ ವೇಳಾಪಟ್ಟಿಯನ್ನು ರಚಿಸಿ.

**ಪರಿಷ್ಕರಣೆ ಯೋಜನೆ** : ನಿಯಮಿತ ಪರಿಷ್ಕರಣೆ ಪ್ರಮುಖವಾಗಿದೆ. ಸಾಪ್ತಾಹಿಕ ಮತ್ತು ಮಾಸಿಕ ಪರಿಷ್ಕರಣೆಗಳಿಗೆ ಸಮಯವನ್ನು ನಿಗದಿಪಡಿಸಿ.

**ಅಣಕು ಪರೀಕ್ಷೆಗಳು** : ನಿಮ್ಮ ಪ್ರಗತಿಯನ್ನು ನಿರ್ಣಯಿಸಲು ಮತ್ತು ನಿಮ್ಮ ದೌರ್ಬಲ್ಯಗಳನ್ನು ಗುರುತಿಸಿ, ಸರಿಪಡಿಸಲು ನಿಯಮಿತ ಅಣಕು ಪರೀಕ್ಷೆ ಗಳನ್ನು ತೆಗೆದುಕೊಳ್ಳಿ.

**ಸ್ಟಡಿ ಮೆಟೀರಿಯಲ್ ಆಯ್ಕೆ** : ಈ ನಿಮ್ಮ ಯುಪಿಎಸ್ಸಿ ಪರೀಕ್ಷೆಯ ಅಧ್ಯಯನಕ್ಕೆ, ಬೇಕಾಗುವ ಅಧ್ಯಯನ ಸಾಮಗ್ರಿಗಳು ಮತ್ತು ಸಂಪನ್ಮೂಲಗಳನ್ನು ಆಯ್ಕೆಮಾಡುವುದು ಪ್ರಮುಖ ವಿಷಯವಾಗಿದೆ. ನಿಮಗಾಗಿ ಕೆಲವು ಸಲಹೆಗಳು ಇಲ್ಲಿವೆ.

**NCERT ಪುಸ್ತಕಗಳು** : ವಿವಿಧ ವಿಷಯಗಳಲ್ಲಿ ಬಲವಾದ ಅಡಿಪಾಯಕ್ಕಾಗಿ NCERT ಪುಸ್ತಕಗಳೊಂದಿಗೆ ಪ್ರಾರಂಭಿಸಿ. ಉತಮ ರೆಫರನ್ಸ್ ಪುಸ್ತಕಗಳನ್ನು, ಗ್ರಂಥಾಲಯಗಳಲ್ಲಿ ಹುಡುಕಿ ಓದುವುದು, ಅಥವಾ ಖರೀದಿಸಬಹುದಾಗಿದೆ.

**ಪ್ರಸ್ತುತ ವಿಷಯಗಳು (CURRENT AFFAIRS)** : ದಿನನಿತ್ಯದ ದಿನಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಮತ್ತು ವಿಶ್ವಾಸಾರ್ಹ ಪ್ರಸ್ತುತ ವ್ಯವಹಾರಗಳ ನಿಯತಕಾಲಿಕಗಳನ್ನು ಓದುವ ಅಭ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳುವುದು.

**ಸಮಯ ನಿರ್ವಹಣೆ ಮತ್ತು ಶಿಸ್ತು** : ಶಿಸ್ತು ಮತ್ತು ಸಮಯ ನಿರ್ವಹಣೆಯ ಬದ್ಧತೆ ಈ ಪೂರ್ವಸಿದ್ದತಾ ಪ್ರಯಾಣದ ಪ್ರಮುಖ ಅಂಶವಾಗಿದೆ.

**ಆಲಸ್ಯವನ್ನು ತಪ್ಪಿಸಿ** : ನಿಮ್ಮ ಅಧ್ಯಯನದ ವೇಳಾಪಟ್ಟಿಗೆ ಬದ್ಧತೆಯನ್ನು ರೂಡಿಸಿಕೊಳ್ಳಿ ಮತ್ತು ಆಲಸ್ಯವನ್ನು ತಪ್ಪಿಸಿ.

**ಆರೋಗ್ಯಕರ ಜೀವನ ಶೈಲಿ** ಸಮತೋಲನ ಆಹಾರ, ನಿಯಮಿತ ವ್ಯಾಯಾಮ, ಸಂಯೋಜಿತ ನಿದ್ರೆ ರೂಡಿಸಿಕೊಂಡು ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನ ಉತ್ತಮಪಡಿಸಿಕೊಳ್ಳುವುದು ಅವಶ್ಯ.

**ಪ್ರೇರೇಪಿತರಾಗಿ** : ಯುಪಿಎಸ್ಸಿ ಟಾಪರ್ಸ್‌ಗಳ ಯಶಸಿನ ಕಥೆಗಳನ್ನು ಓದುವ ಮೂಲಕ ಮತ್ತು ನಿಮ್ಮ ಗುರಿಗಳನ್ನು ನೆನಪಿಸಿಕೊಳ್ಳುವ ಮೂಲಕ ನಿಮ್ಮ ಪ್ರೇರಣೆಯನ್ನು ಹೆಚ್ಚಿಸಿಕೊಂಡು ಗುರಿಯನ್ನು ತಲುಪಿ.

ಕಳೆದ ಕೆಲವು ವರ್ಷಗಳಿಂದ ಯುಪಿಎಸ್ಸಿ ತನ್ನ ಪ್ರಿಲಿಮ್ಸ್ ಪೇಪರ್‌ನಲ್ಲಿ ಕೇಳುತ್ತಿರುವ ಪ್ರಶ್ನೆಗಳ ಪ್ರಕಾರದಲ್ಲಿ ತೀವ್ರ ಬದಲಾವಣೆಯನ್ನು ನಾವು ನೋಡಿದ್ದೇವೆ. ಯುಪಿಎಸ್ಸಿಯಿಂದ ಯಾವುದೇ ನವೀಕರಣಗಳ ಕುರಿತು ಮಾಹಿತಿಯನ್ನು ಹುಡುಕಿ ಪಡೆದು ಅದಕ್ಕೆ ಅನುಗುಣವಾಗಿ ನಿಮ್ಮ ತಯಾರಿ ಕಾರ್ಯತಂತ್ರವನ್ನ ಅಳವಡಿಸಿಕೊಂಡು, ಯಶಸನ್ನು ಸಾಧಿಸಲು, ಛಲದಿಂದ, ಏಕಾಗ್ರತೆಯಿಂದ, ಪ್ರಯತ್ನ ಮಾಡಿದರೆ ಖಂಡಿತ ನೀವು ಐಎಎಸ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಬಹುದು.
ನಿಮ್ಮ ಪ್ರಯತ್ನಕ್ಕೆ ಯಶಸ್ಸು ಸಿಗಲಿ.

# ಸ್ಥಳೀಯ ಸಸ್ಯಗಳ ಬಳಕೆಯಿಂದ ಮನೆ ಔಷದಿಗಳು

ವಿಶ್ವದಲ್ಲಿ ಬಳಸಲಾಗುತ್ತಿರುವ ಸುಮಾರು 20,000 ಔಷಧಿ ಗಿಡಗಳ ಪ್ರಕಟಣೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು ಹೊರತಂದಿದೆ. ಇವುಗಳಿಂದ ದೊರಕುವ ನೂರಕ್ಕೂ ಹೆಚ್ಚು ಕಚ್ಚಾ ವಸ್ತುಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿ, ಸತತವಾಗಿ ಏರಿಕೆ ಕಂಡುಬರುತ್ತಿದೆ. ಅಳಿದು ಹೋದ ಹಲವಾರು ನಾಗರೀಕತೆಗಳನ್ನು ಅಭ್ಯಸಿಸಿದಾಗ ಭಾರತವು ಉತ್ಕೃಷ್ಟ ಮೂಲಿಕೆಗಳ ಆಗರವಾಗಿದ್ದು ತಿಳಿದು ಬರುತ್ತದೆ. ಋಗ್ವೇದವು 67 ಔಷಧಿ ಗಿಡಗಳ ವರ್ಣನೆ ಹೊಂದಿದೆ. ಯಜುರ್ವೇದದಲ್ಲಿ 81 ಹಾಗೂ ಅಥರ್ವಣ ವೇದದಲ್ಲಿ 290 ಔಷಧಿ ಗಿಡಗಳ ಪ್ರಭೇಧಗಳ ಬಗ್ಗೆ ವಿವರಣೆಯಿದೆ.

ಚರಕಸಂಹಿತೆ ಹಾಗೂ ಸುಶೃತ ಸಂಹಿತೆಗಳು ಸುಮಾರು 1,100 ಹಾಗೂ 1,270 ಔಷಧಿ ಗಿಡಗಳ ಹಾಗೂ ಅವುಗಳಿಂದ ಔಷಧಿ ತಯಾರಿಸುವ ವಿಧಾನಗಳ ಬಗೆಗೆ ಆಮೂಲಾಗ್ರವಾಗಿ ಮಾಹಿತಿ ಹೊಂದಿದ್ದು, ಅವುಗಳು ಈಗಲೂ ಆಯುರ್ವೇದಕ್ಕೆ ಆಧಾರ ಗ್ರಂಥಗಳಾಗಿವೆ.

ಸ್ಥಳೀಯವಾಗಿ ದೊರೆಯುವ ಬಹುತೇಕ ಸಸ್ಯಗಳು ಔಷಧೀಯ ಗುಣಗಳನ್ನು ಹೊಂದಿದ್ದು ನಮ್ಮ ನಿತ್ಯ ಜೀವನದಲ್ಲಿ ಬರುವ ಅನೇಕ ರೋಗರುಜಿನಗಳಿಗೆ ಉತ್ತಮವಾದ ಮದ್ದುಗಳಾಗಿವೆ. ಅದಕ್ಕೂ ಮಿಗಿಲಾಗಿ ಇವುಗಳನ್ನು ಔಷಧಿಯಾಗಿ ಬಳಸುವ ವಿಧಾನ ಅತಿ ಸರಳವಾಗಿದ್ದು ಜನಸಾಮಾನ್ಯರೂ ಕೂಡ ತಮ್ಮ ಮನೆಗಳಲ್ಲಿಯೇ ಈ ಔಷಧಿಗಳನ್ನು ತಯಾರಿಸಿ ಬಳಸಬಹುದಾಗಿದೆ. ಈ ಸಂಪ್ರದಾಯವನ್ನು ಮುಂದುವರೆಸುವುದು ಅನಿವಾರ್ಯವಾಗಿದೆ. ಇಲ್ಲದಿದ್ದಲ್ಲಿ ನಮ್ಮಲ್ಲಿರುವ ಬಹುತೇಕ ಔಷಧಿ ಸಸ್ಯಗಳು ವಿನಾಶವಾಗುವುದರಲ್ಲಿ ಸಂಶಯವೇ ಇಲ್ಲ.

ಅಲ್ಲದೇ, ಇಂತಹ ಸಸ್ಯ ಸಂಪತ್ತನ್ನು ಸಂರಕ್ಷಿಸುವ ಉದ್ದೇಶದಿಂದ ತೋಟಗಾರಿಕಾ ವಿಶ್ವವಿದ್ಯಾಲಯವು ಬಾಗಲಕೋಟೆಯಲ್ಲಿ 25 ಎಕರೆ ಪ್ರದೇಶದಲ್ಲಿ ಧನ್ವಂತರಿ ಔಷಧಿ ಹಾಗೂ ಸುಗಂಧ ದ್ರವ್ಯ ಸಸ್ಯಗಳ ಉದ್ಯಾನವನವನ್ನು ಸ್ಥಾಪಿಸಿ ಜನಸಾಮಾನ್ಯರಿಗೆ ಅವುಗಳ ಬಗೆಗಿನ ಮಾಹಿತಿ, ಬೀಜ ಹಾಗೂ ಸಸಿಗಳನ್ನು ಒದಗಿಸುವ ಕೆಲಸದಲ್ಲಿ ಮುಂದಾಗಿದೆ.



**ಡಾ. ಶಶಿಕುಮಾರ್ ಎಸ್.**
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ,
ಬಾಗಲಕೋಟ.
Email: shashikumar2482@gmail.com
Cell: 9741900255

ನಾವು ನಿತ್ಯ ಜೀವನದಲ್ಲಿ ಎದುರಿಸಬಹುದಾದ ಸಾಮಾನ್ಯ ರೋಗರುಜಿನಗಳು ಹಾಗೂ ನಮ್ಮಲ್ಲಿಯೇ ಸಿಗುವ ಔಷಧೀಯ ಹಾಗೂ ಸ್ಥಳೀಯ ಸಸ್ಯಗಳನ್ನು ಬಳಸಿ ಸಾಮಾನ್ಯ ರೋಗಗಳಿಗೆ ಮನೆಯಲ್ಲಿಯೇ ಮದ್ದುಗಳನ್ನು ತಯಾರಿಸಿ ಬಳಸಬಹುದಾದ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ತೊಂದರೆಗಳು ಹಾಗೂ ಅವುಗಳನ್ನು ಗುಣಪಡಿಸಲು ಮಾರ್ಗೋಪಾಯಗಳು.

* ಅಜೀರ್ಣ
* ಅತಿಸಾರ
* ಎದೆಹಾಲಿನ ಕೊರತೆ
* ಜ್ವರ
* ಆರೋಗ್ಯವರ್ಧನೆ
* ಜಠರದ ಆಮ್ಲೀಯತೆ (ಅಸಿಡಿಟಿ)
* ಋತುಸ್ರಾವದ ತೊಂದರೆಗಳು
* ಎದೆಹಾಲು ಶುದ್ಧಕಗಳು
* ಕಣ್ಣಿನ ತೊಂದರೆಗಳು
* ಕೇಶ ಪೋಷಣೆ
* ಕೆಮ್ಮು ಮತ್ತು ಉಸಿರಾಟದ ತೊಂದರೆಗಳು
* ಗಾಯಗಳು
* ಗಂಟಲಿನ ಸೋಂಕು
* ಗರ್ಭಿಣಿ ಆರೈಕೆ
* ಜಂತು ಹುಳುಗಳು

**1. ಅಜೀರ್ಣ**

**ಲಕ್ಷಣಗಳು / ಕಾರಣಗಳು :** ನಾಲಗೆಯ ಮೇಲೆ ತೆಳುಪೊರೆ, ಹೊಟ್ಟೆ ಭಾರ, ಹೊಟ್ಟೆ ನೋವು, ಅರುಚಿ; ಅತಿಯಾದ ಆಹಾರ ಸೇವನೆ, ಅನಿಯಮಿತ ಆಹಾರ ಸೇವನೆ.

**ಹಸಿಶುಂಠಿ ಮತ್ತು ನಿಂಬೆಹಣ್ಣು :** ಹಸಿಶುಂಠಿ ಮತ್ತು ನಿಂಬೆಹಣ್ಣಿನ

ರಸವನ್ನು ಬೇರೆಬೇರೆ ತೆಗೆದಿಟ್ಟುಕೊಳ್ಳಿ. ಒಂದೊಂದು ಚಮಚ ರಸಕ್ಕೆ ಒಂದು ಚಿಟಿಕೆ ಉಪ್ಪನ್ನು ಬೆರೆಸಿ ದಿನಕ್ಕೆ ಎರಡು ಸಾರಿ ಊಟದ ನಂತರ 7 ದಿನಗಳ ಕಾಲ ಸೇವಿಸಿ.

**ಹಸಿಶುಂಠಿ :** ಸ್ವಚ್ಛಗೊಳಿಸಿದ ಹಸಿಶುಂಠಿಯ ಒಂದು ಚೂರನ್ನು ಸ್ವಲ್ಪ ಉಪ್ಪಿನ ಜೊತೆ ಊಟಕ್ಕೆ 5 ನಿಮಿಷ ಮೊದಲು ಅಗಿದು ತಿನ್ನಿ. ಔಷಧವನ್ನು 4 ದಿನಗಳವರೆಗೆ ಮುಂದುವರಿಸಿ.

**ಹಿಪ್ಪಲಿ :** 1 ಚಮಚ ಚೂರ್ಣವನ್ನು 1 ಲೋಟ ನೀರಿನಲ್ಲಿ ಕುದಿಸಿ ಕಷಾಯ ತಯಾರಿಸಿ. ಊಟಕ್ಕೆ ಅರ್ಧ ಗಂಟೆ ಮೊದಲು ಕಷಾಯವನ್ನು ಸೇವಿಸಿ ಅಥವಾ 40–60 ಮಿ.ಲೀ. ಹಿಪ್ಪಲಿಯ ಕ್ಷೀರ ಕಷಾಯವನ್ನು ದಿನಕ್ಕೆ 3 ಸಾರಿ 3–5 ದಿನಗಳ ಕಾಲ ಸೇವಿಸಿ.

**ಕಿವಿಮಾತು :** ಅತಿಯಾದ ಆಹಾರ ಸೇವನೆಯೇ ಅಜೀರ್ಣಕ್ಕೆ ಕಾರಣವಾಗಿದ್ದರೆ ಒಂದು ಹೊತ್ತು ಊಟ ಬಿಡಿ.

**2. ಅತಿಸಾರ**

**ಲಕ್ಷಣಗಳು / ಕಾರಣಗಳು :** ತೆಳ್ಳನೆಯ ಮಲವಿಸರ್ಜನೆ, ಪದೇಪದೇ ವಿಸರ್ಜನೆ, ಗುದಭಾಗದಲ್ಲಿ ನೋವು, ಲೋಳೆ, ರಕ್ತಭರಿತ ಮಲ, ಹಸಿವಿಲ್ಲದಿರುವಿಕೆ, ಆಯಾಸ, ಸುಸ್ತು, ಅಜೀರ್ಣ; ಆಹಾರದೋಷ.

**ಅಳಲೆಕಾಯಿ ಮತ್ತು ಒಣಶುಂಠಿ :** ಅಳಲೆ ಚೂರ್ಣ, ಒಣಶುಂಠಿ, ಜೇನುತುಪ್ಪ, ಸಕ್ಕರೆ– ಪ್ರತಿಯೊಂದನ್ನು 1 ಚಮಚ ತೆಗೆದುಕೊಳ್ಳಿ. ಒಂದು ಚಿಟಿಕೆ ಸೈಂಧವ ಲವಣ ಸೇರಿಸಿ. ಅತಿಸಾರವನ್ನು ನಿಲ್ಲಿಸಲು ಈ ಮಿಶ್ರಣವನ್ನು ಸೇವಿಸಿ.

**ಬೇವಿನ ಚಕ್ಕೆ :** ಬಟ್ಟಲು ತೊಗಟೆಯನ್ನು ಒಂದೂವರೆ ಲೋಟ ನೀರಿನಲ್ಲಿ 15 ನಿಮಿಷಗಳ ಕಾಲ ನೆನೆಸಿಡಿ. ದ್ರಾವಣವನ್ನು ಸೋಸಿ.1 ಬಟ್ಟಲು ದ್ರಾವಣವನ್ನು ದಿನಕ್ಕೆ 3 ಸಾರಿಯಂತೆ 3 ದಿನಗಳ ಕಾಲ ಸೇವಿಸಿ.

**ಜಾಯಿಕಾಯಿ ಮತ್ತು ಒಣಶುಂಠಿ :** ಸಣ್ಣ ಗಾತ್ರದ ಜಾಯಿಕಾಯಿ ಮತ್ತು 1 ಚಮಚ ಒಣಶುಂಠಿ ಪುಡಿಯನ್ನು ಒಟ್ಟಿಗೆ ಕುಟ್ಟಿ ನೀರು ಸೇರಿಸಿ ಕಲ್ಕವನ್ನು ಮಾಡಿಕೊಳ್ಳಿ. ನೀರಿನ ಜತೆ ಇದನ್ನು ಸೇವಿಸುವುದರಿಂದ ಅತಿಸಾರ ನಿಂತು ಮಲವಿಸರ್ಜನೆ ಮಾಮೂಲು ರೀತಿಗೆ ಬರುತ್ತದೆ.

**ದಾಳಿಂಬೆ ಹಣ್ಣಿನಸಿಪ್ಪೆ ಮತ್ತು ತುಂಗೆಹುಲ್ಲು** ದಾಳಿಂಬೆಹಣ್ಣಿನ ಸಿಪ್ಪೆ ಮತ್ತು ತುಂಗೆಹುಲ್ಲಿನ ಗಡ್ಡೆಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಕಷಾಯ ತಯಾರಿಸಿ. 1 ಬಟ್ಟಲು ಕಷಾಯವನ್ನು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಖಾಲಿ ಹೊಟ್ಟೆಯಲ್ಲಿ ಸೇವಿಸಿ.

**3. ಎದೆಹಾಲಿನ ಕೊರತೆ**

**ಶತಾವರಿ :** ಚೆನ್ನಾಗಿ ತೊಳೆದ ತಾಜಾ ಗಡ್ಡೆಗಳನ್ನು ಜಜ್ಜಿ ರಸ ತೆಗೆಯಿರಿ. ರಸವನ್ನು ಸ್ವಲ್ಪ ಬಿಸಿಮಾಡಿ.1 ಬಟ್ಟಲು ರಸಕ್ಕೆ 1 ಚಮಚ ಸಕ್ಕರೆ ಬೆರೆಸಿ ಬೆಳಗಿನ ಹೊತ್ತು 3–7 ದಿನಗಳ ಕಾಲ ಸೇವಿಸಿ.

**ಜೇಷ್ಠ ಮಧು :** ಬೇರುಗಳನ್ನು ಕುಟ್ಟಿ ನುಣ್ಣಗೆ ಪುಡಿಮಾಡಿ. 1/2 ಚಮಚ ಬೇರನ್ನು ಹಾಲಿನಲ್ಲಿ ಕುದಿಸಿ ಕ್ಷೀರ ಕಷಾಯ ತಯಾರಿಸಿ.1 ಲೋಟ ಕಷಾಯಕ್ಕೆ 1 ಚಮಚ ಸಕ್ಕರೆ ಬೆರೆಸಿ ಬೆಳಗಿನ ಹೊತ್ತು 3–5 ದಿನಗಳ ಕಾಲ ಸೇವಿಸಿ.

**ಬೆಳ್ಳುಳ್ಳಿ ಮತ್ತು ಈರುಳ್ಳಿ :** 2–3 ಇಲಕು ಬೆಳ್ಳುಳ್ಳಿ ಮತ್ತು ಒಂದೆರಡು ಚೂರು ಈರುಳ್ಳಿಯನ್ನು ಹಾಲಿನಲ್ಲಿ ಕುದಿಸಿ ಕ್ಷೀರ ಕಷಾಯ ತಯಾರಿಸಿ. 1 ಲೋಟ ಕಷಾಯಕ್ಕೆ 1 ಚಮಚ ಸಕ್ಕರೆ ಬೆರೆಸಿ ಬೆಳಗಿನ ಹೊತ್ತು 3–5 ದಿನಗಳ ಕಾಲ ಸೇವಿಸಿ.

**4. ಜ್ವರ**

**ಲಕ್ಷಣಗಳು/ಕಾರಣಗಳು :** ದೇಹದಲ್ಲಿ ಏರಿದ ಉಷ್ಣಾಂಶ, ಮೈಬಿಸಿ, ಕಣ್ಣುರಿ, ಬೆವರುವುದು, ಆಯಾಸ ಸಾಧಾರಣ ನೆಗಡಿಯ ಜತೆ ಜ್ವರ

**ಅಮೃತ ಬಳ್ಳಿ ಮತ್ತು ಆಡುಸೋಗೆ :** ಅರ್ಧ ಬಟ್ಟಲು ಆಡುಸೋಗೆ ಎಲೆ ಮತ್ತು ಅಮೃತಬಳ್ಳಿ ದಂಟನ್ನು ಜಜ್ಜಿ ನೀರಿನಲ್ಲಿ ಕುದಿಸಿ ಕಷಾಯವನ್ನು ತಯಾರಿಸಿ. 40–60 ಮಿ.ಲೀ. ಕಷಾಯಕ್ಕೆ 1 ಚಮಚ ಜೇನು ತುಪ್ಪವನ್ನು ಸೇರಿಸಿ ಊಟ ಮಾಡುವ 1 ಗಂಟೆ ಮೊದಲು, ದಿನಕ್ಕೆರಡುಮೂರು ಸಾರಿ, 3 ದಿನಗಳ ಕಾಲ ಸೇವಿಸಿ.

**ಅಮೃತ ಬಳ್ಳಿ :** ಗೇಣುದ್ದದ ದಂಟನ್ನು ತೆಗೆದುಕೊಂಡು ಅದರ ಮೇಲಿರುವ ಹುರುಪೆ ತೊಗಟೆಯನ್ನು ತೆಗೆದು ದಂಟನ್ನು ಸಣ್ಣದಾಗಿ ತುಂಡರಿಸಿ. 1 ಲೀಟರ್ ನೀರಿನಲ್ಲಿ ಕುದಿಸಿ, ದ್ರಾವಣವನ್ನು 1/8 ಭಾಗಕ್ಕೆ ಇಂಗಿಸಿ. 60 ಮಿ.ಲೀ. ಕಷಾಯವನ್ನು ದಿನಕ್ಕೆ 2 ಸಾರಿ 3 ದಿನಗಳ ಕಾಲ ಸೇವಿಸಿ.

**ಆಡುಸೋಗೆ ಎಲೆ :** ಒಂದು ಹಿಡಿ ಎಲೆಯನ್ನು ಜಜ್ಜಿ 1 ಬಟ್ಟಲು ಬಿಸಿನೀರಿಗೆ ಹಾಕಿ 15 ನಿಮಿಷ ಇಡಿ. ನಂತರ ಅದನ್ನು ಸೋಸಿ ಅರ್ಧ ಬಟ್ಟಲು ದ್ರಾವಣವನ್ನು ಬೆಳಿಗ್ಗೆ ಮತ್ತು ಸಂಜೆ 3 ದಿನಗಳ ಕಾಲ ಸೇವಿಸಿ.

**ಆಡುಸೋಗೆ ಬೇರು :** 2–4 ಬೇರುಗಳನ್ನು 4 ಬಟ್ಟಲು ನೀರಿನಲ್ಲಿ ಕುದಿಸಿ ದ್ರಾವಣವು 1 ಬಟ್ಟಲು ಆಗುವವರೆಗೂ ಇಂಗಿಸಿ. ಒಂದು ಬಟ್ಟಲು ದ್ರಾವಣವನ್ನು ದಿನಕ್ಕೆ ಮೂರು ಸಾರಿ 3 ದಿನಗಳ ಕಾಲ ಸೇವಿಸಿ.

**ಅರಿಷಿನ :** ಒಂದು ಚಮಚ ಅರಿಷಿನ ಪುಡಿಯನ್ನು 1 ಬಟ್ಟಲು ಬಿಸಿಹಾಲಿನಲ್ಲಿ ಕದಡಿ, ದಿನಕ್ಕೆ ಮೂರು ಸಾರಿ 3 ದಿನಗಳ ಕಾಲ ಸೇವಿಸಿ.

**ಒಂದೆಲಗ ಮತ್ತು ತುಳಸಿ :** ಎರಡರ ಎಲೆಗಳನ್ನೂ 50 ಗ್ರಾಂ ಪ್ರಮಾಣದಲ್ಲಿ ತೆಗೆದುಕೊಂಡು 1/4 ಲೀಟರ್ ನೀರಿನಲ್ಲಿ ಕುದಿಸಿ, ದ್ರಾವಣವನ್ನು 1/2 ಭಾಗಕ್ಕೆ ಇಂಗಿಸಿ. 1/2 ಬಟ್ಟಲು ಕಷಾಯಕ್ಕೆ ಚಿಟಿಕೆ ಮೆಣಸಿನ ಪುಡಿಯನ್ನು ಸೇರಿಸಿ ದಿನಕ್ಕೆ ಮೂರು ಸಾರಿ 7 ದಿನಗಳ ಕಾಲ ಸೇವಿಸಿ.

**ನೆಲಬೇವು :** 30 ಗ್ರಾಂ ನೆಲಬೇವು ಎಲೆ/ಎಳೆ ಕಾಂಡವನ್ನು 1 ಲೀಟರ್ ನೀರಿನಲ್ಲಿ ಕುದಿಸಿ ಕಷಾಯವನ್ನು ತಯಾರಿಸಿ, ದ್ರಾವಣವು 1/8 ಭಾಗವಾಗುವವರೆಗೂ ಇಂಗಿಸಿ. ಕಷಾಯವನ್ನು ಶೋಧಿಸಿ 2 ಸಮಭಾಗಗಳನ್ನಾಗಿ ಮಾಡಿ. ದಿನಕ್ಕೆ 2 ಸಾರಿ ಖಾಲಿ ಹೊಟ್ಟೆಯಲ್ಲಿ ಸೇವಿಸಿ.

**5. ಆಯಾಸ ಮತ್ತು ಉಷ್ಣದಿಂದ ಉಂಟಾದ ಜ್ವರ**

**ಮಧುನಾಶಿನಿ :** ಒಂದು ಹಿಡಿ ತಾಜಾ ಎಲೆಗಳನ್ನು ಚೆನ್ನಾಗಿ ತೊಳೆಯಿರಿ. 1 ಭಾಗ ಎಲೆಯನ್ನು 4 ಭಾಗ ನೀರಿನಲ್ಲಿ ಕುದಿಸಿ ಕಷಾಯವನ್ನು ತಯಾರಿಸಿ, ದ್ರಾವಣವನ್ನು 1/4 ಭಾಗಕ್ಕೆ ಇಂಗಿಸಿ ಶೋಧಿಸಿ. 15–30 ಮಿ.ಲೀ.ಕಷಾಯವನ್ನು ದಿನಕ್ಕೆ 2 ಸಾರಿ ಖಾಲಿಹೊಟ್ಟೆಯಲ್ಲಿ ಸೇವಿಸಿ.

**ಬಿಳಿ ದಾಸವಾಳ :** ಒಂದು ಸುತ್ತಿನ ದಳಗಳಿರುವ 4 ಬಿಳಿ ದಾಸವಾಳದ ಹೂಗಳನ್ನು 1/2 ಲೀಟರ್ ನೀರಿನಲ್ಲಿ ರಾತ್ರಿಯಿಡೀ ನೆನೆಸಿಡಿ. ಮರುದಿನ ಬೆಳಿಗ್ಗೆ ದ್ರಾವಣವನ್ನು ಶೋಧಿಸಿ ದಿನಕ್ಕೆ ಮೂರು ಸಾರಿ 3 ದಿನಗಳ ಕಾಲ ಸೇವಿಸಿ.

**ಸೊಗದೆ ಬೇರು :** ದಪ್ಪದಪ್ಪನಾಗಿ ಕುಟ್ಟಿಕೊಂಡ 1/4 ಬಟ್ಟಲು ಸೊಗದೆ ಬೇರನ್ನು 1 ಬಟ್ಟಲು ನೀರಿನಲ್ಲಿ ರಾತ್ರಿಯಿಡೀ ನೆನೆಸಿಡಿ. ಮರುದಿನ ಬೆಳಿಗ್ಗೆ ದ್ರಾವಣವನ್ನು ಶೋಧಿಸಿ. ಅದನ್ನು 2 ಸಮ ಭಾಗಗಳನ್ನಾಗಿ ಮಾಡಿ ದಿನಕ್ಕೆರಡು ಸಾರಿ 3 ದಿನಗಳ ಕಾಲ ಸೇವಿಸಿ.

**ಬೇವಿನ ತೊಗಟೆ :**ಮೂರು ಚದುರಂಗುಲದ ತೊಗಟೆಯನ್ನು ಕುಟ್ಟಿ ಬಿಸಿ ನೀರಿಗೆ ಹಾಕಿ 15 ನಿಮಿಷ ಬಿಡಿ. ದ್ರಾವಣವನ್ನು ಶೋಧಿಸಿ. ದಿನಕ್ಕೆ ಮೂರು ಸಾರಿ 3 ದಿನಗಳ ಕಾಲ ಸೇವಿಸಿ.

**6. ಆರೋಗ್ಯವರ್ಧನೆಗಾಗಿ ಸಾಧಾರಣ ರೋಗ ನಿರೋಧಕತೆಗೆ**

**ಶತಾವರಿ :** ಚೆನ್ನಾಗಿ ತೊಳೆದ ತಾಜಾಗಡ್ಡೆಗಳನ್ನು ಜಜ್ಜಿ ರಸ ತೆಗೆಯಿರಿ. 1/2 ಬಟ್ಟಲು ರಸಕ್ಕೆ 1/2 ಬಟ್ಟಲು ಹಾಲು 1 ಚಮಚ ಸಕ್ಕರೆ ಬೆರೆಸಿ ಕುದಿಸಿ ಕಷಾಯ ತಯಾರಿಸಿ. ಬೆಳಗಿನ ಹೊತ್ತು 3 ವಾರ ಕಾಲ ಸೇವಿಸಿ.ಇದಕ್ಕೆ ಬದಲಿಯಾಗಿ ಗಡ್ಡೆಗಳನ್ನು ಸಣ್ಣದಾಗಿ ತುಂಡರಿಸಿ, ಒಣಗಿಸಿ ಕುಟ್ಟಿ ನುಣ್ಣಗೆ ಪುಡಿಮಾಡಿಕೊಂಡು ಹಾಲಿನೊಟ್ಟಿಗೆ ಸೇವಿಸಿ.

**ಅಮೃತ ಬಳ್ಳಿ :** ಚೆನ್ನಾಗಿ ತೊಳೆದ ದಂಟನ್ನು (4 ಅಂಗುಲ ಉದ್ದ) ಜಜ್ಜಿ ಅರ್ಧಬಟ್ಟಲು ನೀರಿನಲ್ಲಿ ರಾತ್ರಿಯಿಡಿ ಮುಳುಗಿಸಿಡಿ. ಮರುದಿನ ಬೆಳಿಗ್ಗೆ ದ್ರಾವಣವನ್ನು ಶೋಧಿಸಿ ಕುಡಿಯಿರಿ. ಇದಕ್ಕೆ ಬದಲಿಯಾಗಿ ದಂಟನ್ನು ಜಜ್ಜಿ ನೀರಿನಲ್ಲಿ ಕುದಿಸಿ ಕಷಾಯ ತಯಾರಿಸಿ. 1/2 ಬಟ್ಟಲು ಕಷಾಯವನ್ನು ಬೆಳಿಗ್ಗೆ ಮತ್ತು ಸಂಜೆ 3 ವಾರ ಕಾಲ ಸೇವಿಸಿ.

ಉತ್ತಮ ಆರೋಗ್ಯಕ್ಕೆ ಕೆಲವೊಂದು ಕಿವಿಮಾತು

* ಮಾನಸಿಕ ನೆಮ್ಮದಿಯನ್ನು ಕಾಯ್ದುಕೊಳ್ಳಿ.
* ಸರಿಯಾಗಿ ನಿದ್ದೆ ಮಾಡಿ.
* ದೇಹಬಾಧೆಯನ್ನು ಹಿಡಿದಿಡಬೇಡಿ ಹಾಗೂ ಉಪ್ಪು, ಖಾರ ಹೆಚ್ಚಿರುವ ಪದಾರ್ಥಗಳು, ತಂಗಳು, ಹಗಲುನಿದ್ದೆ ವರ್ಜ್ಯ. ಹಸುವಿನ ತುಪ್ಪ, ಜೇನುತುಪ್ಪ, ಪುಷ್ಟಿಕರ ಆಹಾರವನ್ನು ಬಳಸಿ.

**7. ಜಠರದ ಆಮ್ಲೀಯತೆ (ಅಸಿಡಿಟಿ)**

**ಲಕ್ಷಣಗಳು / ಕಾರಣಗಳು :** ಹುಳಿತೇಗು ಮತ್ತು ಹೊಟ್ಟೆಯಲ್ಲಿ ಉರಿ. ಅನಿಯಮಿತ ಮತ್ತು ಅಕಾಲಿಕ ಆಹಾರಸೇವನೆ, ಮಸಾಲೆ ಭರಿತ ಆಹಾರದ ಹೆಚ್ಚು ಸೇವನೆ, ಮದ್ಯ ಸೇವನೆ.

**ಮುಂದುವರೆಯುವುದು......**